VOLUME: 16 | 19 MARCH 2026 | ಗುರುವಾರ | RS: 2 | PAGE: 06 ISSUE: 53 ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ಸಮಸ್ತ ಕನ್ನಡಿಗರಿಗೆ ಯುಗಾದಿ ಹಬ್ಬದ ಶುಭಾಶಯಗಳು...




BHARATHA SARATHI
KANNADA DAILY NEWS PAPER

CALL 9740160669

# ಭಾರತ ಸಾರಥಿ

RNI KARKAN2011/44806

ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ

ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ

# 2ನೇ ದಿನವೂ ಮಳೆ ಅಬ್ಬರ

ಬೆಂಗಳೂರು: ಕರ್ನಾಟಕದಲ್ಲಿ ಬೇಸಿಗೆ ಮಳೆ ಆರ್ಭಟ ಶುರುವಾಗಿದೆ. ಕಳೆದ ಕೆಲ ದಿನಗಳಿಂದ ರಾಜ್ಯದ ಹಲವೆಡೆ ಆಲಿಕಲ್ಲು ಸಹಿತ ಭಾರಿ ಮಳೆ ಆಗುತ್ತಿದ್ದು, ಇಂದು ಕೂಡ ಮಳೆ ಸುರಿದಿದೆ. ಇತ್ತ ಬೆಂಗಳೂರಿನಲ್ಲಿ ಇಂದು ಮೋಡ ಕವಿದ ವಾತಾವರಣವಿದ್ದು, ಸಂಜೆ ಆಗುತ್ತಿದ್ದಂತೆ ನಗರದ ಹಲವೆಡೆ ಆಲಿಕಲ್ಲು ಸಹಿತ ಮಳೆ ಆಗಿದೆ. ಆ ಮೂಲಕ ಸಿಲಿಕಾನ್ ಸಿಟಿ ಕೂಲ್ ಕೂಲ್ ಆಗಿದೆ. ಆಲಿಕಲ್ಲಿನ ಮಳೆ ಕಂಡು ಸಿಟಿ ಮಂದಿ ಫುಲ್ ಖುಷ್.

ರಣ ರಣ ಬಿಸಿಲಿನ ನಡುವೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಇಂದು ಆಲಿಕಲ್ಲು ಸಹಿತ ಭಾರಿ ಮಳೆ ಆಗಿದೆ.



ಮೆಜೆಸ್ಟಿಕ್, ಶಾಂತಿನಗರ, ಕಾಡುಗೋಡಿ, ಮಾರ್ಕೆಟ್, ಜಯನಗರ, ಬಸವೇಶ್ವರ ನಗರ, ಶಾಂತಿನಗರ, ವಿಲ್ಸನ್‌ಗಾರ್ಡನ್, ರಿಚ್ಮಂಡ್ ಟೌನ್ ಸುತ್ತಮುತ್ತ ಮಳೆ ಆಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಇಂದು ಮತ್ತೆ ಮಳೆ ಆಗಿದೆ. ದಾವಣಗೆರೆ ತಾಲೂಕಿನ ಗುಮ್ಮನೂರ, ಗುಡಾಳ್, ಹೆಬ್ಬಾಳ್, ಆನಗೋಡ್ ಸೇರಿದಂತೆ ಬಹುತೇಕ ಕಡೆ ಮಳೆ ಆಗಿದೆ. ಗ್ರಾಮದ ರಸ್ತೆ ತುಂಬೆಲ್ಲಾ ರಾಶಿ ರಾಶಿ ಅಲಿಕಲ್ಲು ಬಿದ್ದಿದ್ದು, ರಸ್ತೆ ಜಮ್ಮು ಕಾಶ್ಮೀರದಂತಾಗಿದೆ. ಚಾಮರಾಜನಗರ ಪಟ್ಟಣ ಹಾಗೂ ಚಾಮರಾಜನಗರ ತಾಲೂಕಿನಾದ್ಯಂತ ಭಾರೀ ಬಿರುಗಾಳಿ ಸಮೇತ ವರುಣ ಆರ್ಭಟಿಸಿದ್ದಾನೆ.

## ಅಮೆರಿಕಾಗೆ ಅಣುಬಾಂಬ್ ಬೆದರಿಕೆ

ವಾಷಿಂಗ್ಟನ್: ಅಮೆರಿಕಕ್ಕೆ ಅತಿದೊಡ್ಡ ಪರಮಾಣು ಬೆದರಿಕೆಯನ್ನು ಒಡ್ಡುತ್ತಿರುವ ದೇಶಗಳಲ್ಲಿ ಪಾಕಿಸ್ತಾನವೂ ಒಂದು ಎಂದು ಅಮೆರಿಕದ ಗುಪ್ತಚರ ಮುಖ್ಯಸ್ಥೆ ತುಳಸಿ ಗಬ್ಬಾರ್ಡ್ ಹೇಳಿದ್ದಾರೆ.

ಇರಾನ್, ಚೀನಾ, ರಷ್ಯಾ ಮತ್ತು ಉತ್ತರ ಕೊರಿಯಾವನ್ನು ಪರಮಾಣು ಮತ್ತು ಸಾಂಪ್ರದಾಯಿಕ ಸಿಡಿತಲೆ ಗಳನ್ನು ಒಳಗೊಂಡಂತೆ ಹೊಸ ಕ್ಷಿಪಣಿ ವ್ಯವಸ್ಥೆಗಳನ್ನು ಸಕ್ರಿಯ ವಾಗಿ ಅಭಿವೃದ್ಧಿ ಪಡಿಸುತ್ತಿವೆ ಎಂದು ತಿಳಿಸಿದರು.

ರಷ್ಯಾ, ಚೀನಾ, ಉತ್ತರ ಕೊರಿಯಾ, ಇರಾನ್ ಮತ್ತು ಪಾಕಿಸ್ತಾನಗಳು ಪರಮಾಣು ಮತ್ತು ಸಾಂಪ್ರದಾಯಿಕ ಪೇಲೋಡ್‌ಗಳನ್ನು ಹೊಂದಿರುವ ನವೀನ, ಮುಂದುವರಿದ ಅಥವಾ ಸಾಂಪ್ರದಾಯಿಕ ಕ್ಷಿಪಣಿ ವಿತರಣಾ ವ್ಯವಸ್ಥೆಗಳ ಶ್ರೇಣಿಯನ್ನು ಸಂಶೋಧಿಸಿ ಅಭಿವೃದ್ಧಿಪಡಿಸುತ್ತಿವೆ ಎಂದು ಹೇಳಿದರು. ರಷ್ಯಾ ಮತ್ತು ಚೀನಾದೊಂದಿಗೆ ಉತ್ತರ ಕೊರಿಯಾ ತನ್ನ ಪಾಲುದಾರಿಕೆಯನ್ನು ಬಲಪಡಿಸುತ್ತಿದೆ ಎಂದರು.

ಕಳೆದ ವರ್ಷ ಜೂನ್‌ನಲ್ಲಿ ಇರಾನ್‌ನ ಯುರೇನಿಯಂ ಸಂವರ್ಧನೆ ಕಾರ್ಯಕ್ರಮವನ್ನು ಅಮೆರಿಕ ನಾಶ ಮಾಡಿದೆ.


ಪಾಕಿಸ್ತಾನಗಳು ಪರಮಾಣು ಮತ್ತು ಸಾಂಪ್ರದಾಯಿಕ ಪೇಲೋಡ್‌ಗಳನ್ನು ಹೊಂದಿರುವ ನವೀನ, ಮುಂದುವರಿದ ಅಥವಾ ಸಾಂಪ್ರದಾಯಿಕ ಕ್ಷಿಪಣಿ ವಿತರಣಾ ವ್ಯವಸ್ಥೆಗಳ ಶ್ರೇಣಿಯನ್ನು ಸಂಶೋಧಿಸಿ ಅಭಿವೃದ್ಧಿಪಡಿಸುತ್ತಿವೆ ಎಂದು ಹೇಳಿದರು.

ರಷ್ಯಾ ಮತ್ತು ಚೀನಾದೊಂದಿಗೆ ಉತ್ತರ ಕೊರಿಯಾ ತನ್ನ ಪಾಲುದಾರಿಕೆಯನ್ನು ಬಲಪಡಿಸುತ್ತಿದೆ ಅಂದಿನಿಂದ ಯುರೇನಿಯಂ ಸಂವರ್ಧನಾ ಸಾಮರ್ಥ್ಯಗಳನ್ನು ಪುನರ್ನಿರ್ಮಿಸಲು ಇರಾನ್ ಮಾಡಿದ ಯಾವುದೇ ಪ್ರಯತ್ನವನ್ನು ಅಮೆರಿಕ ನೋಡಿಲ್ಲ ಎಂದು ತಿಳಿಸಿದರು.

## ಜೈಲಿನಲ್ಲಿ ಖೈದಿಗಳಿಗೆ ಡ್ರಗ್ಸ್ ಪಾಸಿಟಿವ್

ಬೆಂಗಳೂರು: ಡಿಜಿಪಿ ಅಲೋಕ್ ಕುಮಾರ್ ಜೈಲುಗಳಲ್ಲಿನ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಕೆಲಸ ಮಾಡ್ತಿದ್ದಾರೆ. ಈ ಮಧ್ಯೆ ಜೈಲಿನಲ್ಲಿ ಮಹಿಳಾ ಖೈದಿಗಳ ಡ್ರಗ್ಸ್ ಟೆಸ್ಟ್ ರಿಪೋರ್ಟ್ ಪಾಸಿಟಿವ್ ಬಂದಿದ್ದು, ಅಧಿಕಾರಿಗಳೇ ಶಾಕ್ ಆಗಿದ್ದಾರೆ.

ಕಾರಾಗೃಹ ಮತ್ತು ಸುಧಾರಣಾ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರು ಜೈಲಿನಲ್ಲಿ ಅಕ್ರಮಗಳಿಗೆ ಬ್ರೇಕ್ ಹಾಕುವ ಕೆಲಸ ಮಾಡಿದ್ದರು. ಆದರೆ ಇದೀಗ ಜೈಲಿನ ಬ್ಯಾರಕ್‌ಗಳ ಒಳಗೆ ನಶೆ ಏರಿಸುವ ಡ್ರಗ್ಸ್‌ನ್ನು ಇನ್ನೂ ಬಚ್ಚಿಟ್ಟಿರುವ ಸಾಧ್ಯತೆ ದಟ್ಟವಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ, ಮಹಿಳಾ ಖೈದಿಗಳಿಗೆ ನಡೆಸಿದ ಡ್ರಗ್ಸ್ ಪರೀಕ್ಷೆಗಳಲ್ಲಿ ಆಘಾತಕಾರಿ ಫಲಿತಾಂಶಗಳು ಹೊರಬಿದ್ದಿವೆ.




ಕೆಲ ಮಹಿಳಾ ಖೈದಿಗಳ ಡ್ರಗ್ ಪರೀಕ್ಷಾ ವರದಿಗಳು ಪಾಸಿಟಿವ್ ಬಂದಿರುವುದನ್ನು ಕಂಡು ಅಧಿಕಾರಿಗಳೇ ಶಾಕ್ ಆಗಿದ್ದಾರೆ.

ಮಹಿಳಾ ಬ್ಯಾರಕ್‌ಗಳೊಳಗೆ ಡ್ರಗ್ಸ್ ಹೇಗೆ ತಲುಪಿದವು ಎಂಬ ಪ್ರಶ್ನೆ ಇದೀಗ ಎದುರಾಗಿದೆ. ಪುರುಷ ಕೈದಿಗಳಷ್ಟೇ ಅಲ್ಲದೆ, ಮಹಿಳಾ ಕೈದಿಗಳಿಂದಲೂ ಡ್ರಗ್ಸ್ ಸೇವನೆ ನಡೆದಿರುವ ಸಾಧ್ಯತೆ ಇದ್ದು, ಸೆಕೆಂಡ್ ಒಪೀನಿಯನ್‌ಗಾಗಿ ನಿಮ್ಹಾನ್ಸ್‌ಗೆ ವರದಿ ಕಳಿಸಲಾಗಿದೆ.

ಇದಲ್ಲದೆ, ಸುಮಾರು 20 ಕೈದಿಗಳು ಮೂತ್ರ ಮಾದರಿ ನೀಡಲು ನಿರಾಕರಿಸಿದ್ದಾರೆ. ಡ್ರಗ್ಸ್ ಪರೀಕ್ಷಾ ವರದಿ ಪಾಸಿಟಿವ್ ಬರುವ ಭೀತಿಯಿಂದಲೇ ಅವರು ಯೂರಿನ್ ನೀಡಲು ಹಿಂದೇಟು ಹಾಕಿದ್ದು, ಜೈಲು ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದಿದ್ದಾರೆ ಎನ್ನಲಾಗಿದೆ. ಸದ್ಯ, ಈ ಕೈದಿಗಳ ಮನವೊಲಿಸಿ ಪರೀಕ್ಷೆಗೆ ಒಳಪಡಿಸಲು ಅಧಿಕಾರಿಗಳು ಹರಸಾಹಸಪಡುತ್ತಿದ್ದಾರೆ.

## ಮಳೆ: ವಿಮಾನಗಳು ಬೇರೆಡೆಗೆ ಡೈವರ್ಟ್

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ವರ್ಷದ ಮಳೆಯಾಗಿದ್ದು, ಸಹ ಮಳೆಯಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಬೆಂಗಳೂರು ಗ್ರಾಮಾಂತರದ ದೇವನಹಳ್ಳಿ ಸುತ್ತಮುತ್ತ ಭಾರೀ ಆಲಿಕಲ್ಲು ಮಳೆಯಾಗಿದೆ.

ಇದರಿಂದ ಮಳೆ ನೀರು ನುಗ್ಗಿ ಬಸ್ ನಿಲ್ಧಾಣ ಸೇರಿದಂತೆ ಹೆದ್ದಾರಿಯಲ್ಲಿ ಜನರ ಪರದಾಡುತ್ತಿದ್ದಾರೆ. ಇನ್ನು ಭಾರೀ ಮಳೆಯಿಂದಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಬೇಕಿದ್ದ 20ಕ್ಕೂ ಅಧಿಕ ವಿಮಾನಗಳು ಡೈವರ್ಟ್ ವಿಮಾನಗಳನ್ನು ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡಿಗೆ ಡೈವರ್ಟ್ ಮಾಡಲಾಗಿದೆ.

ಸಂಜೆಯಿಂದ ಧಾರಾಕಾರ ಮಳೆ ಸುರಿಯುತ್ತಿದ್ದರಿಂದ ಮುಂಜಾಗ್ರತಾವಾಗಿ ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಆಗಮಿಸಬೇಕಿದ್ದ 20 ಕ್ಕೂ ಅಧಿಕ ವಿಮಾನಗಳನ್ನು ಬೇರೆ ಕಡೆ ಡೈವರ್ಟ್ ಮಾಡಲಾಗಿದೆ.

ಬೇರೆ ಕಡೆಗಳಿಂದ ಬರುತ್ತಿದ್ದ ವಿಮಾನಗಳನ್ನು ಪಕ್ಕದ ಚೆನ್ನೈ, ಹೈದರಾಬಾದ್, ಮಂಗಳೂರು, ಗುವಾಹಟಿ, ಪುಕೆಟ್,ಪಾಟ್ನಾ, ಲಕ್ನೋ, ಚಂಡಿಗಡ್, ಶ್ರೀನಗರ, ದೆಹಲಿ, ಇಂಪಾಲ್, ಕೊಚ್ಚಿಗೆ ಡೈವರ್ಟ್ ಮಾಡಲಾಗಿದೆ. ಇನ್ನು ರಾಷ್ಟ್ರರಾಜಧಾನಿ ನವದೆಹಲಿಯಿಂದ ಬೆಂಗಳೂರಿಗೆ ಬರಬೇಕಿದ್ದ ವಿಮಾನಗಳನ್ನು ಚೆನ್ನೈಗೆ ಮಾರ್ಗ ಬದಲಾವಣೆ ಮಾಡಲಾಗಿದೆ. ಬುಧವಾರ ಸಂಜೆ 5ರ ಮೇಲೆ ದೆಹಲಿಯಿಂದ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರಬೇಕಿದ್ದ ಒಟ್ಟು ಹದಿನೈದು ವಿಮಾನಗಳನ್ನು ಚೆನ್ನೈಗೆ ಡೈವರ್ಟ್ ಮಾಡಲಾಗಿದೆ.

ಇನ್ನು ಮಳೆಯಿಂದಾಗಿ ಲ್ಯಾಂಡಿಂಗ್ ಸಮಸ್ಯೆ ಹಾಗೂ ಏರ್ ಟ್ರಾಫಿಕ್ ನಿಂದ ವಿಮಾನಗಳನ್ನ ಡೈವರ್ಟ್ ಮಾಡಲಾಗಿದೆ. ಇನ್ನು 30ಕ್ಕೂ ಅಧಿಕ ವಿಮಾನಗಳ ಟೇಕ್ ಆಫ್ ಹಾಗೂ ಲ್ಯಾಂಡಿಂಗ್ ಡಿಲೆಯಾಗಿದೆ. ಇದರಿಂದ ಬೆಂಗಳೂರಿಗೆ ಆಗಮಿಸಬೇಕಿದ್ದ ಪ್ರಯಾಣಿಕರು ಪರದಾಡುವಂತಾಗಿದೆ.

## ಕಾಶ್ಮೀರದಂತಾದ ಧಾರವಾಡದ ಕಲಘಟಗಿ

ಧಾರವಾಡ: ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಮಾಚಾಪುರದಲ್ಲಿ ಭಾರೀ ಆಲಿಕಲ್ಲು ಮಳೆಯಾಗಿದ್ದು, ಇದರಿಂದ ರಸ್ತೆಗಳು ಹಾಗೂ ಮನೆಗಳ ಮೇಲೆ ಆಲಿಕಲ್ಲುಗಳು ರಾಶಿ ರಾಶಿಯಾಗಿ ಬಿದ್ದು, ಕ್ಷಣಾರ್ಧದಲ್ಲಿ 'ಕಾಶ್ಮೀರ'ದಂತಾಗಿ ಬದಲಾದ ಅಪರೂಪದ ಘಟನೆ ಮಂಗಳವಾರ ಕಂಡು ಬಂದಿತು.

ಭಾರೀ ಮಳೆ ಹಾಗೂ ಆಲಿಕಲ್ಲು ಮಳೆ ಸುರಿದ ಪರಿಣಾಮ, ಗ್ರಾಮವೆಲ್ಲ ಬಿಳಿ ಹೊದಿಕೆಯಿಂದ ಆವೃತವಾಗಿ ಹಿಮಪ್ರದೇಶದಂತೆ ಕಾಣಿಸಿತು. ಮಳೆ ನಿಂತ ಕೂಡಲೇ ಜನರು ಮನೆಗಳಿಂದ ಹೊರಬಂದು ಈ ಅಪರೂಪದ ದೃಶ್ಯವನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದರು.

ಭಾರತೀಯ ಹವಾಮಾನ ಇಲಾಖೆಯ ಬೆಂಗಳೂರು ನಿರ್ದೇಶಕ ಡಾ. ಸಿ.ಎಸ್. ಪಾಟೀಲ್ ಅವರು ಮಾತನಾಡಿ, "ಸ್ಥಳೀಯ ಮಟ್ಟದಲ್ಲಿ ಉಂಟಾದ ತೀವ್ರ ಗಾಳಿಚಲನೆ, ಉಷ್ಣತೆ ಹಾಗೂ ತೇವಾಂಶದ ಸಂಯೋಜನೆಯಿಂದ ಈ ರೀತಿಯ ಆಲಿಕಲ್ಲು ಮಳೆ ಸಂಭವಿಸಿದೆ. ಮಾನ್ಸೂನ್ ಪೂರ್ವ ಮಳೆಯ ಅವಧಿಯಲ್ಲಿ ಇಂತಹ ಘಟನೆಗಳು ಸಾಮಾನ್ಯ ಎಂದು ಹೇಳಿದ್ದಾರೆ.

ಕರ್ನಾಟಕದ ಉತ್ತರ ಒಳನಾಡಿನಲ್ಲಿ ಗಾಳಿಯ ವ್ಯತ್ಯಾಸ ಮತ್ತು ಉತ್ತರ ದಕ್ಷಿಣ ದಿಕ್ಕಿನಲ್ಲಿನ ವಾಯುಭಾರ ಕುಸಿತವು ಅತಿಯಾದ ಆಲಿಕಲ್ಲು ಮಳೆಗೆ ಕಾರಣವಾಗಿದೆ. ಇದರೊಂದಿಗೆ, ಅತಿಯಾದ ಬಿಸಿಲು ಕೂಡ ಹವಾಮಾನ ವೈಪರೀತ್ಯಕ್ಕೆ ಕಾರಣವಾಗಿದೆ ಎಂದು ಅಧಿಕಾರಿ ವಿವರಿಸಿದ್ದಾರೆ.


ಸ್ಥಳೀಯ ನಿವಾಸಿಯೊಬ್ಬರು ಮಾತನಾಡಿ, "ಎರಡು ಗಂಟೆಗಳಿಗೂ ಹೆಚ್ಚು ಕಾಲ ಮಳೆ ಸುರಿಯಿತು. ಆ ಸಮಯದಲ್ಲೇ ನಿರಂತರವಾಗಿ ಆಲಿಕಲ್ಲುಗಳು ಬೀಳುತ್ತಲೇ ಇದ್ದವು. ರಸ್ತೆಗಳೆಲ್ಲ ಹಿಮಪಾತದಂತೆ ಕಂಗೊಳಿಸಿತು. ಇಂತಹ ದೃಶ್ಯವನ್ನು ನಾವು ಎಂದಿಗೂ ನೋಡಿರಲಿಲ್ಲ ಎಂದು ಹೇಳಿದ್ದಾರೆ.

ಆದರೆ, ಪ್ರಕೃತಿಯ ಈ ವಿಸ್ಮಯ ರೈತರಿಗೆ ಸಂಕಷ್ಟ ತಂದೊಡ್ಡಿದೆ. ಕೊಯ್ಲು ಮಾಡು ಸಿದ್ಧವಾಗಿದ್ದ ಟೊಮೊಟೋ ಬೆಳೆ ಸಂಪೂರ್ಣವಾಗಿ ನಾಶಗೊಂಡಿದೆ. ಇದಲ್ಲದೆ ತೋಟಗಾರಿಕೆ ಬೆಳೆಗಳು ಮತ್ತು ಸಸಿಗಳು ಕೂಡ ಹಾನಿಯಾಗಿದ್ದು, ಭಾರೀ ಮಳೆ ರೈತರಿಗೆ ಹೊಡೆತ ನೀಡಿದಂತಾಗಿದೆ.

ಇನ್ನು ಮಳೆಯಿಂದಾಗಿ ಕೆಲ ಮನೆಗಳ ಮೇಲ್ಛಾವಣಿಗಳಿಗೂ ಹಾನಿ ಉಂಟಾಗಿದ್ದು, ರೈತರು ಸ್ಥಳೀಯ ಕೃಷಿ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಹಾನಿ ಕುರಿತ ವಿಡಿಯೋ ಮತ್ತು ಫೋಟೋಗಳನ್ನು ಅಧಿಕಾರಿಗಳಿಗೆ ಹಂಚಲಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

## ನೆತನ್ಯಾಹು ಹತ್ಯೆ ಸುಳ್ಳು

ಇಸ್ರೇಲ್: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಈ ಬಾರಿ ಅಮೆರಿಕದ ರಾಯಭಾರಿ ಮೈಕ್ ಹಕಬೀ ಅವರೊಂದಿಗಿರುವ ಮತ್ತೊಂದು ವಿಡಿಯೋ ರಿಲೀಸ್ ಮಾಡಿದ್ದು, ಇರಾನ್‌ನೊಂದಿಗೆ ನಡೆಯುತ್ತಿರುವ ಸಂಘರ್ಷದಲ್ಲಿ ತಾವು ಸತ್ತಿದ್ದೇನೆ ಎಂಬ ವದಂತಿ ಸುಳ್ಳು ಎಂದಿದ್ದಾರೆ.



ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸಾವಿಗೀಡಾಗಿದ್ದಾರೆ ಎಂದು ಕಳೆದ ವಾರದಿಂದಲೂ ಊಹಾಪೋಹಗಳು ಕೇಳಿಬರುತ್ತಿವೆ.

ಬಳಿಕ ಅವರ ಅಧಿಕೃತ ಎಕ್ಸ್ ಖಾತೆಯಲ್ಲಿ ರಿಲೀಸ್ ಮಾಡಲಾಗಿದ್ದ ವಿಡಿಯೋದಲ್ಲಿ ಅವರ ಕೈಯಲ್ಲಿ ಆರು ಬೆರಳುಗಳು ಕಂಡುಬಂದಿದ್ದು, ಇದು ವದಂತಿಗಳಿಗೆ ಇಂಬು ನೀಡಿದಂತಾಗಿತ್ತು. ಮತ್ತೊಂದು ವಿಡಿಯೋವನ್ನು ಸಹ ನಕಲಿ ಎಂದು ಹೇಳಲಾಗಿತ್ತು. ಈ ಬೆನ್ನಲ್ಲೇ ಅವರು ಹೊಸ ವಿಡಿಯೋವನ್ನು ಹಂಚಿಕೊಂಡಿದ್ದಾರೆ.

ಮಂಗಳವಾರ ಬಿಡುಗಡೆಯಾದ ಇತ್ತೀಚಿನ ವಿಡಿಯೋದಲ್ಲಿ, ನೆತನ್ಯಾಹು ಹಕಬೀ ಅವರೊಂದಿಗೆ ನಡೆದುಕೊಂಡು ಮಾತನಾಡುತ್ತಿರುವುದು ಕಂಡುಬರುತ್ತದೆ. ಅಮೆರಿಕದ ಅಧ್ಯಕ್ಷ ನಾಯಕನನ್ನು ವೈಯಕ್ತಿಕವಾಗಿ ಭೇಟಿಯಾಗುವಂತೆ ತನ್ನನ್ನು ಕಳುಹಿಸಿದ್ದಾರೆ ಎಂದು ಹಕಬೀ ಹೇಳುತ್ತಾರೆ. ಹಕಬೀ: 'ಮಾನ್ಯ ಪ್ರಧಾನ ಮಂತ್ರಿಗಳೇ, ನೀವು ಚೆನ್ನಾಗಿದ್ದೀರಾ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಮೆರಿಕ ಅಧ್ಯಕ್ಷರು ನನಗೆ ಸೂಚಿಸಿದರು ಎಂದು ನಾನು ನಿಮಗೆ ತಿಳಿಸಲು ಬಯಸುತ್ತೇನೆ'.

## ನಿವೃತ್ತ ರಾಜ್ಯಸಭೆ ಸದಸ್ಯರಿಗೆ ಮೋದಿ ಅಭಿನಂದನೆ

ನವದೆಹಲಿ: ರಾಜ್ಯಸಭೆಯ 37 ಸದಸ್ಯರ ನಿವೃತ್ತಿಯ ಹಿನ್ನೆಲೆಯಲ್ಲಿ ಸದನವು ಇಂದು ಭಾವುಕ ಕ್ಷಣಕ್ಕೆ ಸಾಕ್ಷಿಯಾಗಿತ್ತು. ನಿವೃತ್ತರಾಗುತ್ತಿರುವ ಸದಸ್ಯರ ಸೇವೆಯನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ಸದನಕ್ಕೆ ಅವರು ನೀಡಿದ ಕೊಡುಗೆಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಿರುತ್ತವೆ ಎಂದು ತಿಳಿಸಿದರು. "ಜ್ಞಾನಕ್ಕಿಂತ ಅನುಭವಕ್ಕೆ ಶಕ್ತಿ ಹೆಚ್ಚು. ಶೈಕ್ಷಣಿಕ ಜ್ಞಾನವು ಸೀಮಿತವಾಗಿರಬಹುದು, ಆದರೆ ಸದಸ್ಯರು ಇಲ್ಲಿ ಕಳೆದ ಸಮಯ ಮತ್ತು ಪಡೆದ ಅನುಭವವು ದೇಶದ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ" ಎಂದು ಪ್ರಧಾನಿ ಹೇಳಿದರು.



ರಾಜ್ಯಸಭೆಯು ಹಿರಿಯರ ಸದನವಾಗಿದ್ದು, ಇಲ್ಲಿನ ಚರ್ಚೆಗಳು ಗುಣಮಟ್ಟದಿಂದ ಕೂಡಿರಬೇಕು. ನಿವೃತ್ತ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಈ ಅನುಭವವನ್ನು ಜನರಿಗೆ ತಲುಪಿಸಬೇಕು ಎಂದು ಅವರು ಆಶಿಸಿದರು.

ರಾಜಕೀಯ ಭಿನ್ನಾಭಿಪ್ರಾಯಗಳ ನಡುವೆಯೂ ದೇಶದ ಹಿತದೃಷ್ಟಿಯಿಂದ ಸದಸ್ಯರು ಒಟ್ಟಾಗಿ ಕೆಲಸ ಮಾಡಿದ್ದನ್ನು ಪ್ರಧಾನಿ ನೆನೆದರು.

ಇನ್ನು ಈ ಸಭೆಯಲ್ಲಿ ನಿವೃತ್ತರಾಗುತ್ತಿರುವ ಸದಸ್ಯರಲ್ಲಿ ವಿವಿಧ ಪಕ್ಷಗಳ ಪ್ರಮುಖ ನಾಯಕರು ಸೇರಿದ್ದಾರೆ.ನಿವೃತ್ತ ಸದಸ್ಯರಿಗೆ ನೆನಪಿನ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಪಕ್ಷಪಾತಗಳನ್ನು ಮೀರಿ ಮೇಲೇರಲು ಇದೊಂದು ಸೂಕ್ತ ಕ್ಷಣ ಎಂದು ಕರೆದ ಅವರು, ಹೊಸ ಸಂಸದರು ಹಿರಿಯ ಸಹೋದ್ಯೋಗಿಗಳಿಂದ ಕಲಿಯಬೇಕೆಂದು ಒತ್ತಾಯಿಸಿದರು. ನಿವೃತ್ತರಾಗುವ ಸದಸ್ಯರು ಸದನದ ಆಚೆಗೆ ವಿವಿಧ ಸಾಮರ್ಥ್ಯಗಳಲ್ಲಿ ಸಮಾಜಕ್ಕೆ ಕೊಡುಗೆ ನೀಡುವುದನ್ನು ಮುಂದುವರಿಸುತ್ತಾರೆ ಎಂದು ಅವರು ಹೇಳಿದರು.

"ರಾಜಕೀಯದಲ್ಲಿ ಪೂರ್ಣವಿರಾಮವಿಲ್ಲ" ಎಂದು ಹೇಳಿ ಸಂಸತ್ತನ್ನು "ಮುಕ್ತ ವಿಶ್ವವಿದ್ಯಾಲಯ" ಎಂದು ಬಣ್ಣಿಸಿದರು. ಪಕ್ಷಪಾತಗಳನ್ನು ಮೀರಿ ಮೇಲೇರಲು ಇದೊಂದು ಸೂಕ್ತ ಕ್ಷಣ ಎಂದು ಕರೆದ ಅವರು, ಹೊಸ ಸಂಸದರು ಹಿರಿಯ ಸಹೋದ್ಯೋಗಿಗಳಿಂದ ಕಲಿಯಬೇಕೆಂದು ಒತ್ತಾಯಿಸಿದರು. ನಿವೃತ್ತರಾಗುವ ಸದಸ್ಯರು ಸದನದ ಆಚೆಗೆ ವಿವಿಧ ಸಾಮರ್ಥ್ಯಗಳಲ್ಲಿ ಸಮಾಜಕ್ಕೆ ಕೊಡುಗೆ ನೀಡುವುದನ್ನು ಮುಂದುವರಿಸುತ್ತಾರೆ ಎಂದು ಅವರು ಹೇಳಿದರು.

## ಮತಾಂತರ ನಿಷೇದ ವಿಧೇಯಕ ಮಂಡನೆ

ಬೆಂಗಳೂರು: 2026ನೇ ಸಾಲಿನ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿರುವ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕದ ಪ್ರಸ್ತಾವವನ್ನು ಮುಖ್ಯಮಂತ್ರಿಗಳ ಪರವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಬುಧವಾರ ವಿಧಾನಸಭೆಯಲ್ಲಿ ಮಂಡಿಸಿದರು.

ವಿಧೇಯಕವು ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಯನ್ನು ಸುಭದ್ರಗೊಳಿಸುವ ಭ್ರಾತೃತ್ವದ ತತ್ವವನ್ನು ಪ್ರತಿಪಾದಿಸುತ್ತದೆ.

## ಪ್ರಜ್ವಲ್ ಅಶ್ಲೀಲ ವಿಡಿಯೋ ವೈರಲ್ ಪ್ರಕರಣ: ಚಾರ್ಜ್‌ಶೀಟ್ ಸಲ್ಲಿಕೆ

ಬೆಂಗಳೂರು/ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದೆ.

ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಹಾಸನ ಸಿವಿಲ್ ಕೋರ್ಟ್‌ಗೆ ಎಸ್‌ಐಟಿ 13,712 ಪುಟಗಳ ಚಾರ್ಜ್ ಶೀಟ್ ಸಲ್ಲಿಕೆ ಮಾಡಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಅಶ್ಲೀಲ ವಿಡಿಯೋ ಹಂಚಲು ಆರೋಪಿಗಳು 70 ಪೆನ್‌ಡ್ರೈವ್ ಖರೀದಿಸಿದ್ದರು. ಹಾಸನದಲ್ಲೇ 70 ಪೆನ್‌ಡ್ರೈವ್ ಖರೀದಿ ಮಾಡಿರುವುದು ತನಿಖೆಯಿಂದ ಬಯಲಾಗಿದೆ.

ಪ್ರಕರಣದಲ್ಲಿ 52 ಮಂದಿ ಹೆಸರು ಉಲ್ಲೇಖ ಮಾಡಲಾಗಿತ್ತು. 52 ಮಂದಿಯಲ್ಲಿ 39 ಮಂದಿ ಆರೋಪ ಸಾಬೀತಾಗಿದೆ. ವಕೀಲ ಪೂರ್ಣಚಂದ್ರ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿತ್ತು. ಲೋಕಸಭೆ ಚುನಾವಣೆ ವೇಳೆ ಅಶ್ಲೀಲ ವಿಡಿಯೋ ವೈರಲ್ ಆಗಿತ್ತು. ಎಸ್‌ಐಟಿ ತನಿಖೆ ವೇಳೆ ಮಹತ್ವದ ವಿಚಾರಗಳು ಬೆಳಕಿಗೆ ಬಂದಿವೆ.



70 ಪೆನ್‌ಡ್ರೈವ್ ಖರೀದಿಸಿ ವಿಡಿಯೋ ವೈರಲ್ ಮಾಡಿರುವುದು ತನಿಖೆ ವೇಳೆ ಬಹಿರಂಗವಾಗಿದೆ. ಈ ಸಂಬಂಧ 277 ಸಾಕ್ಷಿಗಳ ಹೇಳಿಕೆಯನ್ನು ಎಸ್‌ಐಟಿ ದಾಖಲಿಸಿದೆ. ತಾಂತ್ರಿಕ ವರದಿ, ಎಫ್‌ಎಸ್‌ಎಲ್ ಸಾಕ್ಷಿಗಳ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಲಾಗಿದೆ.

ಪ್ರಕರಣದಲ್ಲಿ ಎರಡು ಪಕ್ಷದ ಕಾರ್ಯಕರ್ತರ ವಿರುದ್ಧ ಆರೋಪ ಕೇಳಿಬಂದಿದೆ. ವಿಡಿಯೋ ವೈರಲ್ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಹೆಸರು ಕೈಬಿಡಲಾಗಿದೆ. ತನಿಖೆ ಪೂರ್ಣಗೊಳಿಸಿ ಹಾಸನ ಕೋರ್ಟ್‌ಗೆ ಎಸ್‌ಐಟಿ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಎ1 ನವೀನ್, ಎ2 ಪ್ರಜ್ವಲ್ ಕಾರು ಚಾಲಕನಾಗಿದ್ದ ಕಾರ್ತಿಕ್.ಎನ್, ಎ3 ಚೇತನ್.ಬಿ.ಸಿ., ಎ4 ಚೇತನ್.ವೈ.ಎಸ್, ಎ5 ಲಿಖಿತ್‌ಗೌಡ, ಎ6 ದೇವರಾಜೇಗೌಡ, ಎ7 ಗಿರೀಶ್.ಎಸ್, ಎ8 ಯೊಗೇಶ್.ವೈ.ಡಿ., ಎ9 ನಿಶಾಂತ್, ಎ10 ಹರೀಶ್.ಎಸ್.ಎನ್, ಎ11 ಸುಮಂತ್, ಎ12 ಕೃಷ್ಣೇಗೌಡ, ಎ13 ಕಿರಣ್.ಎಸ್.ಕೆ, ಎ14 ಶರತ್.ಎಂ.ಕೆ., ಎ15 ತೇಜಸ್.ಡಿ.ಎನ್, ಎ16 ಗಗನ್‌ಕುಮಾರ್, ಎ17 ರೇವಂತ್, ಎ18 ಶಿವಪ್ರಸಾದ್, ಎ19 ನಾಗೇಂದ್ರ ಜೈನ್, ಎ20 ವಸಂತ್‌ಕುಮಾರ್, ಎ21 ಸಮೀರ್‌ಅಹ್ಮದ್, ಎ22 ಬಾಲಸುಬ್ರಹ್ಮಣ್ಯ, ಎ23 ಚಿರಂತ್, ಎ24 ದೇವರಾಜ್.ಡಿ.ಹೆಚ್, ಎ25 ಜಯಸೂರ್ಯ, ಎ26 ಚಂದ್ರಶೇಖರ್.ಬಿ.ಕೆ., ಎ27 ಕುಮಾರ್, ಎ28 ದಿನೇಶ್.ಕೆ.ಕೆ., ಎ29 ನವೀನ್‌ಕುಮಾರ್.ಎನ್.ವಿ., ಎ30 ಪ್ರಶಾಂತ್.ಬಿ.ಎಸ್., ಎ31 ಅನಿಲ್.ಹೆಚ್.ವಿ., ಎ32 ಹರ್ಷವರ್ದನ್.ಹೆಚ್.ಎಂ., ಎ33 ಅಕ್ಷಯ್‌ಕುಮಾರ್, ಎ34 ಪ್ರವೀಣ್‌ಕುಮಾರ್, ಎ35 ಹರೀಶ್.ಎನ್.ಸಿ., ಎ36 ಶಶಾಂಕ್.ಹೆಚ್.ಎಂ., ಎ37 ಭರತ್, ಎ38 ಚೇತನ್ಕುಮಾರ್, ಎ39 ಸೋಮಶೇಖರ್.ಕೆ.ಕೆ. ಮೇಲೆ ದೋಷಾರೋಪಣೆ ಪಟ್ಟಿ ಸಲ್ಲಿಕೆ.

19/03/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಕಾರ್ಯನಿರ್ವಹಣೆ ಕುರಿತು ಉದಾಸೀನ ಬೇಡ: ವೇಣುಗೋಪಾಲ್



ಕೋಲಾರ

ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಪರೀಕ್ಷಾ ಪಾವಿತ್ರ್ಯತೆಗೆ ಧಕ್ಕೆಯಾಗದ ರೀತಿ ಕರ್ತವ್ಯ ನಿರ್ವಹಿಸಿ ಮತ್ತು ಉದಾಸೀನ ತೋರದಿರಿ ಎಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ಕೊಠಡಿ ಮೇಲ್ವಿಚಾರಕರಿಗೆ ಮುಖ್ಯಅಧೀಕ್ಷಕ ವೇಣುಗೋಪಾಲ್ ಸಲಹೆ ನೀಡಿದರು.

ನಗರದ ಅಲಮಿನ್ ಶಾಲೆ ಪರೀಕ್ಷಾ ಕೇಂದ್ರದಲ್ಲಿ ಮಾ.18 ರಿಂದ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಹಿನ್ನಲೆಯಲ್ಲಿ ಮಂಗಳವಾರ ಪೂರ್ವಭಾವಿ ಸಭೆ ಹಾಗೂ ನೋಂದಣಿ ಸಂಖ್ಯೆ ದಾಖಲಿಸುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಮಕ್ಕಳಲ್ಲಿ ಆತಂಕ,ಭಯ ಮೂಡಿಸುವ ಕೆಲಸ ಬೇಡ, ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡೋಣ ಮೊದಲ ದಿನ ಆತಂಕದಿಂದ ಬರುವ ಮಕ್ಕಳಿಗೆ ತಮ್ಮ ನೋಂದಣಿ ಸಂಖ್ಯೆ ಯಾವ ಕೊಠಡಿಯಲ್ಲಿದೆ ಎಂಬುದರ ಮಾಹಿತಿಯನ್ನು ಒದಗಿಸಿ ಅವರನ್ನು ನಗುತ್ತಾ ಸ್ವಾಗತಿಸುವ ಕೆಲಸ ಮಾಡೋಣ ಎಂದರು.

# ಶಾರುಲ್ ಚನ್ನಾ ಕಾಮಿಡಿ ಟೂರ್ ಬೆಂಗಳೂರಿಗೆ

ಕೋಲಾರ

ಮಹಿಳಾ ದಿನಾಚರಣೆಯ ಅಂಗವಾಗಿ ಸಿಂಗಾಪುರ ಮೂಲದ ಖ್ಯಾತ ಸ್ಟ್ಯಾಂಡ್-ಅಪ್ ಕಾಮಿಡಿಯನ್ ಶಾರುಲ್ ಚನ್ನಾ ಅವರು ತಮ್ಮ "ಸಾರೆ, ದೀಸ್ ಆರ್ ಜಸ್ಟ್ ಜೋಕ್ಸ್" ಕಾಮಿಡಿ ಕಾರ್ಯಕ್ರಮವನ್ನು ಮಾರ್ಚ್ 20ರಂದು ಬೆಂಗಳೂರಿನ ಜಾಗೃತಿ ಥಿಯೇಟರ್ನಲ್ಲಿ ಪ್ರದರ್ಶಿಸಲಿದ್ದಾರೆ. ಏಷ್ಯಾದ ಪ್ರಮುಖ ಕಾಮಿಡಿಯನ್ನಗಳಲ್ಲಿ ಒಬ್ಬರಾಗಿರುವ ಅವರು, ಸಂಸ್ಕೃತಿ, ಸಂಬಂಧಗಳು ಹಾಗೂ ಸಾಮಾಜಿಕ ವಿಚಾರಗಳನ್ನು ಹಾಸ್ಯದ ಮೂಲಕ ನಿರೂಪಿಸುವಲ್ಲಿ ವಿಶೇಷ ಖ್ಯಾತಿ ಪಡೆದಿದ್ದಾರೆ.



ಎಂಟು ನಗರಗಳಲ್ಲಿ ನಡೆಯುತ್ತಿರುವ ಭಾರತ ಪ್ರವಾಸದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮವು ಸಂಜೆ 7.30ಕ್ಕೆ ನಡೆಯಲಿದ್ದು, ಟಿಕೆಟ್ಗಳು ಬುಕ್ಮೈಶೋನಲ್ಲಿ ಲಭ್ಯವಿವೆ

# ಡಾ. ಸಿ.ಸೋಮಶೇಖರ ದೀಕ್ಷಿತ್‌ಗೆ ಹಂಸ ಸಮ್ಮಾನ್ ಪ್ರಶಸ್ತಿ



ಕೋಲಾರ

ಕೋಲಾರಮ್ಮ ದೇವಾಲಯದ ಪ್ರಧಾನ ಅರ್ಚಕ ಡಾ. ಸಿ. ಸೋಮಶೇಖರ ದೀಕ್ಷಿತ್ ಅವರಿಗೆ ದಿನಾಂಕ 16-03-2026ರಂದು ಸೋಮವಾರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಂಸ ಜ್ಯೋತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಂಸ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಕಾರ್ಯನಿರ್ವಾಹಕ ಸಂಸ್ಥಾಪಕ ವ್ಯವಸ್ಥಾಪಕ ಎಂ.ಮುರಳೀಧರ, ವಿಶ್ರಾಂತ ನ್ಯಾಯಮೂರ್ತಿ ಸಂತೋಷ್‌ಹೆಗಡೆ, ಲೋಕಾಯುಕ್ತ ಬಿ.ವೀರಪ್ಪ ಇವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಡಾ. ಸಿ.ಸೋಮಶೇಖರ ದೀಕ್ಷಿತ್: 1963ರ ಮಾರ್ಚ್ 23ರಂದು ಶ್ರೀ ಎಸ್.ಚಂದ್ರಶೇಖರ್ ದೀಕ್ಷಿತ್ ಮತ್ತು ಶ್ರೀಮತಿ ಗಿರಿಜಮ್ಮ ದಂಪತಿಗಳ ಮಗನಾಗಿ ಕೋಲಾರದಲ್ಲಿ ಜನಿಸಿ, ಎಸ್.ಎಸ್.ಎಲ್.ಸಿ.ವರೆವಿಗೂ ವಿದ್ಯಾಭ್ಯಾಸವನ್ನು ಪಡೆದ ನಂತರ ವೇದಶಾಸ್ತ್ರ ಹಾಗೂ ಆಗಮ ಶಾಸ್ತ್ರಗಳಲ್ಲಿ ಅಧ್ಯಯನ ನಡೆಸಿ ಅದರಲ್ಲಿ ಪರಿಣತಿಯನ್ನು ಪಡೆದರು. ನಂತರ ವಂಶಪರಂಪರ್ಯವಾಗಿ ಬಂದಂತಹ, ಅರ್ಚಕ ವೃತ್ತಿಯನ್ನು ಕೈಗೊಂಡು ಕೋಲಾರಮ್ಮ ದೇವಾಲಯ ಹಾಗೂ ಸೋಮೇಶ್ವರ ದೇವಾಲಯದಲ್ಲಿ ಅರ್ಚಕ ವೃತ್ತಿಯನ್ನು ಕೈಗೊಂಡರು. ಇದಲ್ಲದೆ ಹಲವಾರು ದೇವಾಲಯಗಳಲ್ಲಿ ಉತ್ತಮ ಪೂಜಾ ಕಾರ್ಯಗಳು ನಡೆಯುವಲ್ಲಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಕಳೆದ 40 ವರ್ಷಗಳಿಂದ ಅರ್ಚಕ ವೃತ್ತಿಯೊಂದಿಗೆ ಶಿಥಿಲವಾದ ಹಲವಾರು ದೇವಾಲಯಗಳ ಅಭಿವೃದ್ಧಿ ಪಡಿಸಿದ್ದಾರೆ. ಕೋಲಾರ ಜಿಲ್ಲಾ ಅರ್ಚಕರ ಸಂಘದ ಅಧ್ಯಕ್ಷರಾಗಿರುವುದರ ಜೊತೆಗೆ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ ಹಾಗೂ ಅರ್ಚಕರ ಹಿತಚಿಂತಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದುವರೆವಿಗೂ ಸಲ್ಲಿಸುತ್ತಿರುವ ಸೇವೆಗಾಗಿ ಕೊಲ್ಕತ್ತಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಒಳಗೊಂಡಂತೆ ಅನೇಕ ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿರುತ್ತಾರೆ.

ಭಕ್ತ-ಭಗವಂತ ಇವರ ನಡುವಿನ ಸೇತುವೆಯಾಗಿ ಉತ್ತಮ ಕಾರ್ಯ ನಿರ್ವಹಿಸುತ್ತಿರುವ ಡಾ. ಸಿ. ಸೋಮಶೇಖರ ದೀಕ್ಷಿತ್ ಅವರ ಸೇವೆಯನ್ನು ಪರಿಗಣಿಸಿ ಹಂಸಜ್ಯೋತಿ ಸಂಸ್ಥೆಯು ದಿನಾಂಕ 16-03-2026ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಿದ ಹಂಸ ಸಾಂಸ್ಕೃತಿಕ ಸೌರಭ ಹಾಗೂ ಹಂಸಸಮ್ಮಾನ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಹಂಸ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಹಂಸಜ್ಯೋತಿ ಸಂಸ್ಥೆಯು ದಿನಾಂಕ 16-03-2026ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ತನ್ನ ಸುವರ್ಣ ಸಂಭ್ರಮ ವರ್ಷಾಚರಣೆ ಪ್ರಯುಕ್ತ ನಡೆಸಿದ, ಹಂಸ ಸಾಂಸ್ಕೃತಿಕ ಸಂಭ್ರಮ ಹಾಗೂ ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

# 'ಡಿವಿಜಿ ಆದರ್ಶಗಳನ್ನು ಪ್ರತಿಯೊಬ್ಬ ಪತ್ರಕರ್ತ ಪಾಲಿಸುವಂತಾಗಬೇಕು'

ಕೋಲಾರ

ಪ್ರಸ್ತುತ ಪತ್ರಿಕೋದ್ಯಮ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಪತ್ರಕರ್ತರಾದವರು ಆತ್ಮ ಅವಲೋಕನ ಮಾಡಿಕೊಳ್ಳುವುದಲ್ಲದೆ, ಡಿ.ವಿ.ಜಿ ರವರ ಆದರ್ಶಗಳನ್ನು ಪ್ರತಿಯೊಬ್ಬ ಪತ್ರಕರ್ತ ಪಾಲಿಸುವಂತಾಗಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್ ಕಿವಿಮಾತು ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಡಿ.ವಿ.ಗುಂಡಪ್ಪ ಅವರ 139 ನೇ ಜಯಂತಿ ಆಚರಣೆಯಲ್ಲಿ ಅವರು ಭಾಗವಹಿಸಿ ಮಾತನಾಡುತ್ತಾ, ಡಿವಿಜಿಯವರು ನಮ್ಮ ಕೋಲಾರ ಜಿಲ್ಲೆಯವರು ಎಂದು ಹೇಳಿಕೊಳ್ಳುವುದಕ್ಕೆ ಪ್ರತಿಯೊಬ್ಬ ಪತ್ರಕರ್ತರಿಗೆ ಹೆಮ್ಮೆ ಪಡಬೇಕು.

ಕೆಯುಡಬ್ಲ್ಯೂಜೆ ಸಂಸ್ಥಾಪಕರಾದ ಡಿ.ವಿ.ಗುಂಡಪ್ಪ ನವರು ಕಟ್ಟಿದ ಸಂಘಕ್ಕೆ 2032 ನೇ ಇಸವಿಗೆ ನೂರು ವರ್ಷಗಳು ತುಂಬಲಿದ್ದು, ರಾಜ್ಯ ಸಂಘ ದೊಡ್ಡ ಮಟ್ಟದ ಶತಮಾನೋತ್ಸವ ಆಚರಣೆ ಮಾಡಲು ತೀರ್ಮಾನ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು.

ಈ ಹಿಂದೆ ಪತ್ರಕರ್ತರು ಸರ್ಕಾರಗಳ ಲೋಪದೋಷಗಳ ಬಗ್ಗೆ ಬರೆದಾಗ ಜನಪ್ರತಿನಿಧಿಗಳು, ಸರ್ಕಾರದ ಅಧಿಕಾರಿಗಳಿಂದ ಸ್ಪಂದನೆ ಸಿಗುತ್ತಿತ್ತು. ಆದರೆ ಇವತ್ತು ಪತ್ರಿಕೋದ್ಯಮವನ್ನು ನೋಡುವ ರೀತಿ ಬೇರೆಯಾಗಿದೆ. ಇದರ ನಡುವೆಯೂ ಕೆಲವು



ಪತ್ರಕರ್ತರು ತಮ್ಮ ವೃತ್ತಿಗೆ ಚ್ಯುತಿ ಬಾರದಂತೆ ಕೆಲಸ ಮಾಡುತ್ತಿರುವುದರಿಂದ ಪತ್ರಿಕೋದ್ಯಮ ಇನ್ನೂ ಜೀವಂತವಾಗಿದೆ ಎಂದು ಹೇಳಿದರು.

ನಿಕಟ ಪೂರ್ವ ಅಧ್ಯಕ್ಷರಾದ ಬಿ.ವಿ.ಗೋಪಿನಾಥ್ ಮಾತನಾಡಿ, ಮಹನೀಯರ ಆಚರಣೆಗಳು ಕೇವಲ ತೋರಿಕೆಗೆ ಆಗದೆ ಅವರು ನಡೆದುಕೊಂಡ ರೀತಿಯಲ್ಲಿ ಬಾಳುವಂತಾಗಬೇಕು, ನಾವು ಪ್ರತಿ ವಿಷಯವನ್ನು ಬರೆಯುವಂತಾಗಬೇಕು, ಸಮಾಜಕ್ಕೆ ಏನಾದರೂ ಕೊಡುವಂತಾಗಬೇಕು, ಕನಿಷ್ಠ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಬಗ್ಗೆ ಅರಿತರೆ ಬದುಕಿನ ಭಾಗ್ಯದ ಅರಿವು ಆಗುತ್ತದೆ.

ಡಿ.ವಿ.ಜಿ ಯವರ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವಂತೆ ಸಮಾಜಕ್ಕೆ ನೀಡಿ ಬದುಕಿದವರು. ಅದರಂತೆ ನಾವು ನಡೆದುಕೊಳ್ಳುತ್ತಿದ್ದೀವ ಎಂದು ಯೋಜಿಸಬೇಕು. ಅವರ ಮಂಕುತಿಮ್ಮನ ಕಗ್ಗ ಸಂಗ್ರಹ ಕನ್ನಡದ ಭಗವದ್ಗೀತೆ, ರಾಮಾಯಣ, ಮಹಾಭಾರತ ಇದ್ದಂತೆ. ದಾರ್ಶನಿಕರು ಜೀವನ ನಮಗೆ ದಾರಿ ದೀಪವಾಗಲಿ ಎಂದು ಹೇಳಿದರು.

ರಾಜ್ಯ ಕಾರ್ಯಕಾರಿಣಿ ಸದಸ್ಯ ವಿ.ಮುನಿರಾಜು ಮಾತನಾಡಿ, ಡಿ.ವಿ.ಜಿ ಯವರ ಹಾದಿಯಲ್ಲಿ ನಾವು ಸಾಗೋಣ ಆಗ ಮಾತ್ರ ನಮ್ಮ ಪತ್ರಿಕೋದ್ಯಮಕ್ಕೆ ಬೆಲೆ ಸಿಗುತ್ತದೆ ಎಂದರು.

ಹಿರಿಯ ಪತ್ರಕರ್ತ ಅನಂತರಾಮ ಮಾತನಾಡಿ, ಎಲ್ಲಾ ಅರ್ಹತೆ ಇರುವ ಡಿ.ವಿ.ಜಿ ರವರಿಗೆ ಜ್ಞಾನ ಪೀಠ ಪ್ರಶಸ್ತಿ ನೀಡಬೇಕಾಗಿತ್ತು. ಕನಿಷ್ಟ ಅವರಿಗೆ ಮರಣೋತ್ತರ ಜ್ಞಾನ ಪೀಠ ಪ್ರಶಸ್ತಿ ನೀಡಲಿ. ಇದರ ಬಗ್ಗೆ ಸರ್ಕಾರದ ಗಮನ ಸೆಳೆಯುವ ಕೆಲಸ ಆಗಬೇಕಾಗಿದೆ ಎಂದರು.

945 ಕಗ್ಗಗಳನ್ನು ಓದಿದಾಗ ಅರ್ಥ ಮಾಡಿ ಕೊಳ್ಳುವುದು ಕಷ್ಟ ಆದರೂ ಕಗ್ಗದ ತಾತ್ಪರ್ಯ ಓದಿದಾಗ ನಾವು ಹೇಗೆ ಬದುಕ ಬೇಕು ಎಂದು ಅರ್ಥ ಆಗುತ್ತದೆ.ಕಗ್ಗಗಳ ಬಗ್ಗೆ ಪತ್ರಕರ್ತರ ಸಂಘದ ಪದಾಧಿಕಾರಿಗಳು ವಿಚಾರ ಸಂಕಿರಣಗಳನ್ನು ನಡೆಸಿದರೆ ನಮ್ಮಗಳ ಜ್ಞಾನ ಹೆಚ್ಚಿಸಿಕೊಳ್ಳಲು ಅನುಕೂಲ ಆಗುತ್ತದೆ. ಇದರ ಬಗ್ಗೆ ಪತ್ರಕರ್ತರ ಸಂಘದ ಪದಾಧಿಕಾರಿಗಳು ಗಮನ ಹರಿಸುವಂತೆ ಮನವಿ ಮಾಡಿದರು.

ಪತ್ರಕರ್ತ ಕೋ.ನಾ. ಮಂಜುನಾಥ್ ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ಹುಟ್ಟಿದ ಡಿ.ವಿ.ಜಿ ರವರು ರಾಷ್ಟ್ರ ಮಟ್ಟದಲ್ಲಿ ಹೆಸರು ಗಳಿಸಿದಂತವರು, ಅವರ ಜನ್ಮ ದಿನಾಚರಣೆಯನ್ನು ಪ್ರತಿ ವರ್ಷವೂ ಆಚರಣೆ ಮಾಡುತ್ತೇವೆ ಆದರೆ ಡಿ.ವಿ.ಜಿ ರವರ ಹಾದಿಯಲ್ಲಿ ನಡೆಯುತ್ತಿದೇವ, ಅವರ ಆದರ್ಶಗಳನ್ನು ಅಳವಡಿಸಿಕೊಂಡಿದ್ದೇವ ಎಂದು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ ಎಂದರಲ್ಲದೆ ಡಿ.ವಿ.ಜಿ ಯವರ ಆದರ್ಶಗಳನ್ನು ಪಾಲಿಸೋಣ ಎಂದರು.

ಕಾರ್ಯಕ್ರಮದ ಮುನ್ನ ಡಿ.ವಿ.ಜಿ ಯವರ ಚಿತ್ರಪಟಕ್ಕೆ ಎಲ್ಲಾ ಪತ್ರಕರ್ತರು ಪುಷ್ಪ ನಮನಗಳನ್ನು ಸಲ್ಲಿಸುವ ಮೂಲಕ ಗೌರವ ಸಮರ್ಪಣೆ ನೆರವೇರಿಸಲಾಯಿತು.

ಈ ಕಾರ್ಯಕಾರಿ ಸಮಿತಿ ಸದಸ್ಯ ಸಿ.ವಿ ನಾಗರಾಜ್ ಅವರು ನಿರೂಪಿಸಿದ ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎ.ಜಿ.ಸುರೇಶ್‌ಕುಮಾರ್, ಖಜಾಂಚಿ ಬಿ.ಎಲ್. ರಾಜೇಂದ್ರಸಿಂಹ ಸೇರಿದಂತೆ ಹಿರಿಯ ಹಾಗೂ ಪತ್ರಕರ್ತರು ಭಾಗವಹಿಸಿದ್ದರು.

# ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಕಲ ಸಿದ್ಧತೆ: ಡಿಸಿ ರವಿ

ಕೋಲಾರ



ಜಿಲ್ಲೆಯಲ್ಲಿ ಇದೇ ಮಾರ್ಚ್ 18ರಿಂದ ಆರಂಭವಾಗುವ 2026ರ ಎಸ್.ಎಸ್.ಎಲ್.ಸಿ ಪರೀಕ್ಷೆ-1 ಅನ್ನು ಸುಗಮವಾಗಿ ನಡೆಸಲು ಜಿಲ್ಲಾಡಳಿತವು ಎಲ್ಲಾ ರೀತಿಯ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳಾದ ಡಾ.ಎಂ.ಆರ್.ರವಿ ತಿಳಿಸಿದರು.

ಮಂಗಳವಾರ ನಿರ್ಮಿತಿ ಕೇಂದ್ರದ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪರೀಕ್ಷಾ ಕ್ರಮಗಳ ಕುರಿತು ಅವರು ವಿವರಗಳನ್ನು ಹಂಚಿಕೊಂಡರು.

ಪರೀಕ್ಷೆಯು 18-03-2026 ರಿಂದ 02-04-2026 ರವರೆಗೆ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:15 ಗಂಟೆಯವರೆಗೆ ನಡೆಯಲಿದೆ ಎಂದರು.

ಈಗಾಗಲೇ ಜಿಲ್ಲೆಯಲ್ಲಿ 3 ಹಂತದ ಪೂರ್ವಸಿದ್ಧತೆ ಪರೀಕ್ಷೆಗಳನ್ನು ನಡೆಸಲಾಗಿದ್ದು, ಮೊದಲ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಶೇ 58%, ಎರಡನೇ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ 75.9%, 3ನೇ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ 85.59% ಫಲಿತಾಂಶದೊಂದಿಗೆ ಕೋಲಾರ ಜಿಲ್ಲೆಯು ಬೆಂಗಳೂರು ವಿಭಾಗದಲ್ಲಿ 2ನೇ ಸ್ಥಾನ ಹಾಗೂ ರಾಜ್ಯಮಟ್ಟದಲ್ಲಿ 7ನೇ ಸ್ಥಾನ ಪಡೆದಿರುತ್ತದೆ. ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆದಿರುತ್ತದೆ.

ಈ ಬಾರಿ ಜಿಲ್ಲೆಯಲ್ಲಿ ಒಟ್ಟು 19,474 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಇದರಲ್ಲಿ 17,961 ಹೊಸಬರು, 1,003 ಪುನರಾವರ್ತಿತ ಮತ್ತು 510 ಖಾಸಗಿ ಅಭ್ಯರ್ಥಿಗಳಿದ್ದಾರೆ. ಇವರಲ್ಲಿ 9,848 ಬಾಲಕಿಯರು, 9,626 ಬಾಲಕರು ಹಾಗೈ 87 ವಿಶೇಷ ಚೇತನ ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಜಿಲ್ಲೆಯಾದ್ಯಂತ ಕೋಲಾರ 18, ಮುಳಬಾಗಿಲು 12, ಶ್ರೀನಿವಾಸಪುರ 10, ಕೆಜಿಎಫ್ 09, ಮಾಲೂರು 08 ಮತ್ತು ಬಂಗಾರಪೇಟೆ: 08 ಸೇರಿದಂತೆ ಒಟ್ಟು 65 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ 65 ಕೇಂದ್ರಗಳ ಒಟ್ಟು 1053 ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿಯಲ್ಲಿ ವೆಬ್ ಕಾಸ್ಟಿಂಗ್ ಮೂಲಕ ದೃಶ್ಯಾವಳಿಗಳನ್ನು ವೀಕ್ಷಿಸಲು 12 ಅಧಿಕಾರಿಗಳ ತಂಡವನ್ನು ನೇಮಿಸಲಾಗಿದೆ.

ಪರೀಕ್ಷಾ ಅಕ್ರಮ ತಡೆಯಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಜಾಗೃತ ದಳಗಳನ್ನು ಹಾಗೂ ಇಬ್ಬರು ವಿಶೇಷ ಜಾಗೃತ ದಳದ ಸದಸ್ಯರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಪ್ರಶ್ನೆಪತ್ರಿಕೆಗಳನ್ನು ಸುರಕ್ಷಿತವಾಗಿ ತಲುಪಿಸಲು 29 ಮಾರ್ಗಗಳನ್ನು ರಚಿಸಲಾಗಿದ್ದು, 'ಎಸ್ಕಾರ್ಟ್' ವ್ಯವಸ್ಥೆಯನ್ನು ಬಳಸಲಾಗುತ್ತಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಕೆ.ಎಸ್.ಆರ್.ಟಿ.ಸಿ ಬಸ್ ಸೌಲಭ್ಯ, ನಿರಂತರ ವಿದ್ಯುತ್ ಪೂರೈಕೆಗೆ ಬೆಸ್ಕಾಂ ಮತ್ತು ಆರೋಗ್ಯ ರಕ್ಷಣೆಗೆ ಆಶಾ ಕಾರ್ಯಕರ್ತೆಯರ ನಿಯೋಜನೆಗೆ ಸೂಚಿಸಲಾಗಿದೆ.

ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಿಗ್ಗೆ 8:00 ರಿಂದ ಮಧ್ಯಾಹ್ನ 2:00 ಗಂಟೆಯವರೆಗೆ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಈ ವ್ಯಾಪ್ತಿಯಲ್ಲಿರುವ ಜೆರಾಕ್ಸ್, ಕಂಪ್ಯೂಟರ್ ಅಂಗಡಿ ಮತ್ತು ಟ್ಯೂಷನ್ ಕೇಂದ್ರಗಳನ್ನು ಮುಚ್ಚಲು ಆದೇಶಿಸಲಾಗಿದೆ. ಎಲ್ಲಾ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕೆಂದು ವಿದ್ಯಾರ್ಥಿಗಳು ಕಿವಿ ಜಿಲ್ಲಾಧಿಕಾರಿಗಳು ನುಡಿದರು. ಪತ್ರಿಕಾಗೋಷ್ಠಿಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕಿ ಅಲ್ಮಸ್ ಪರ್ವಿನ್ ತಾಜ್ ಉಪಸ್ಥಿತರಿದ್ದರು.

# *ವಾಣಿಜ್ಯ ಸಿಲಿಂಡರ್‌ಗೆ 4200 ಕೊಟ್ಟು ಖರೀದಿಸುತ್ತಿರುವ ಇಂದಿರಾ ಕ್ಯಾಂಟೀನ್ ಸಿಬ್ಬಂದಿ*

ವಿಜಯಪುರ

*ವಾಣಿಜ್ಯ ಸಿಲಿಂಡರುಗಳ ಬಿಕ್ಕಟ್ಟಿನಿಂದಾಗಿ, ಪಟ್ಟಣದ ಇಂದಿರಾ ಕ್ಯಾಂಟೀನ್ ನ ಸಿಬ್ಬಂದಿ ಒಂದು ಸಿಲಿಂಡರ್ ಗೆ 4,200 ರೂಪಾಯಿ ಕೊಟ್ಟು, ಖರೀದಿಸಿಕೊಂಡು ಬಂದು ಅಡುಗೆ ಮಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.*

*ಇಂದಿರಾ ಕ್ಯಾಂಟೀನ್ ಗೆ ಬರುವ ಗ್ರಾಹಕರಿಗೆ ಪ್ರತಿನಿತ್ಯ ಆಹಾರ ತಯಾರಿಸಿ ಕೊಡಲುವುದಕ್ಕಾಗಿ ಸಿಲಿಂಡರುಗಳಿಲ್ಲದೆ, ಇಲ್ಲಿನ ಸಿಬ್ಬಂದಿ ಪರದಾಡುತ್ತಿದ್ದಾರೆ. ವಾಣಿಜ್ಯ ಸಿಲಿಂಡರುಗಳು ಪೂರೈಕೆಯಾಗದ ಕಾರಣ, ಒಂದು ಸಿಲಿಂಡರ್ ಗೆ 4200 ರೂಪಾಯಿ ಕೊಟ್ಟು, ದೊಡ್ಡಬಳ್ಳಾಪುರದಿಂದ ತಂದು ಆಹಾರ ತಯಾರಿಸುತ್ತಿದ್ದೇವೆ. ಬೆಳಿಗ್ಗೆ 7 ಗಂಟೆಯಷ್ಟೊತ್ತಿಗೆ ತಿಂಡಿ ತಯಾರಾಗಬೇಕು, ಮಧ್ಯಾಹ್ನ 12 ಗಂಟೆಯಷ್ಟೊತ್ತಿಗೆ ಊಟ ತಯಾರಿಸಬೇಕು, ಪುನಃ ರಾತ್ರಿ 7 ಗಂಟೆಯಷ್ಟರೊಳಗೆ ಆಹಾರ ತಯಾರಿಸಬೇಕಾಗುತ್ತದೆ. ನಾಲ್ಕು ದಿನಕ್ಕೆ ಒಂದು ಸಿಲಿಂಡರ್ ಖರ್ಚಾಗುತ್ತಿದೆ.*

*ನಮಗೆ ಸಿಲಿಂಡರುಗಳು ಪೂರೈಕೆಯಾಗದ ಕಾರಣ, ಬ್ಲಾಕ್ ನಲ್ಲಿ ತರಬೇಕಾಗಿದೆ. ಮೊದಲು 1800 ರಿಂದ 2000 ಕ್ಕೆ ಸಿಗುತ್ತಿತ್ತು. ಈಗ ಬ್ಲಾಕ್ ನಲ್ಲಿ 4200 ರೂಪಾಯಿ ಕೊಟ್ಟು ಖರೀದಿಸಿಕೊಂಡು ತರುತ್ತಿದ್ದೇವೆ. ಸಮಯಕ್ಕೆ ಸರಿಯಾಗಿ ಆಹಾರ ಕೊಡದಿದ್ದರೆ, ಜನರು ಬಂದು ಗಲಾಟೆ ಮಾಡುತ್ತಾರೆ. ವಿಧಿಯಿಲ್ಲದೆ ತಂದು ಅಡುಗೆ ತಯಾರಿಸುತ್ತಿದ್ದೇವೆ ಎಂದು ಇಲ್ಲಿನ ಸಿಬ್ಬಂದಿ ಅಳಲು ತೋಡಿಕೊಂಡರು.*

*ಆಹಾರದ ಬೆಲೆ ಹೆಚ್ಚಿಸುವಂತಿಲ್ಲ: ಒಂದು ಊಟ 10 ರೂಪಾಯಿಗೆ ನೀಡಬೇಕು. ದರವನ್ನು ಏರಿಕೆ ಮಾಡುವಂತಿಲ್ಲ. ಬೆಳಗಿನ ಉಪಹಾರ 350 ಮಂದಿಗೆ, ಮಧ್ಯಾಹ್ನದ ಊಟ 350 ಮಂದಿಗೆ ರಾತ್ರಿ 300 ಮಂದಿಗೆ ಆಹಾರ ತಯಾರಿಸಬೇಕು. ದಿನಕ್ಕೆ 1 ಸಾವಿರ ಆಗುತ್ತೆ, ಸಿಲಿಂಡರ್, ತರಕಾರಿ, ಆಹಾರಧಾನ್ಯಗಳು ಖರೀದಿಸಲು ಸಾಕಾಗುವುದಿಲ್ಲ. ಈಗ ಸಿಲಿಂಡರ್ ಬರೆ ಬೀಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.*

# ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ; 4955 ವಿದ್ಯಾರ್ಥಿಗಳು ನೋಂದಣಿ: ಬಿಇಓ

ಕೋಲಾರ

ತಾಲ್ಲೂಕಿನಲ್ಲಿ 18 ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಹೊಸ ಅಭ್ಯರ್ಥಿಗಳು 4518 ಮತ್ತು ಪುನರಾವರ್ತಿತ ಅಭ್ಯರ್ಥಿಗಳು 448 ಸೇರಿದಂತೆ ಒಟ್ಟು 4955 ಮಕ್ಕಳು ಪರೀಕ್ಷೆ ಬರೆಯುತ್ತಿದ್ದು, ಮೂಲಸೌಲಭ್ಯಗಳ ಕೊರತೆ ಎದುರಾಗದಂತೆ ಅಗತ್ಯ ಕ್ರಮವಹಿಸಲಾಗಿದ್ದು ಶಾಲಾ ಶಿಕ್ಷಣ ಇಲಾಖೆ ಸಕಲ ಸಿದ್ದತೆ ನಡೆಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಧುಮಾಲತಿ ಪಡುವಣೆ ತಿಳಿಸಿದರು.

ಮಂಗಳವಾರ ನಗರದ ಮಹಿಳಾ ಸಮಾಜ ಶಾಲೆ ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಮಂಗಳವಾರ ಭೇಟಿ ನೀಡಿದ್ದ ಅವರು, ಕೊಠಡಿಗಳಿಗೆ ಭೇಟಿ ನೀಡಿ, ಸಿಸಿ ಕ್ಯಾಮರಾ ಸೌಲಭ್ಯ, ಡೆಸ್ಕ್ ಅಳವಡಿಕೆ, ಗಾಳಿ,ಬೆಳಕಿನ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿ ಮಾತನಾಡುತ್ತಿದ್ದರು.

ತಾಲ್ಲೂಕಿನಲ್ಲಿ ಹೊಸ ಅಭ್ಯರ್ಥಿಗಳು 2092 ಬಾಲಕರು, 2426 ಮಂದಿ ಬಾಲಕಿಯರು ಪರೀಕ್ಷೆ ಬರೆಯುತ್ತಿದ್ದಾರೆ ಎಂದು ತಿಳಿಸಿದ ಅವರು



ಗೊಂದಲಕ್ಕಡೆಯಿಲ್ಲದಂತೆ ಪರೀಕ್ಷೆ ನಡೆಸಲು ಸೂಚಿಸಲಾಗಿದೆ ಎಂದರು.

18 ಕೇಂದ್ರಗಳಿಗೆ 18 ಮಂದಿ ಮುಖ್ಯ ಅಧೀಕ್ಷಕರು, 3 ಉಪ ಮುಖ್ಯ ಅಧೀಕ್ಷಕರು, 18 ಮಂದಿ ಪ್ರಶ್ನೆಪತ್ರಿಕೆ ಪಾಲಕರು, 18 ಸ್ಥಾನಿಕ ಜಾಗೃತದಳ ಸಿಬ್ಬಂದಿ, 360 ಮಂದಿ ಕೊಠಡಿ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಮೂಲಸೌಲಭ್ಯಗಳಿಗೆ ಕೊರತೆಯಾಗದಂತೆ ಮುಖ್ಯ ಅಧೀಕ್ಷಕರು ಕ್ರಮವಹಿಸಿ, ಒಟ್ಟಾರೆ ವಿದ್ಯಾರ್ಥಿ ಸ್ನೇಹಿಯಾಗಿ ಪರೀಕ್ಷೆ ನಡೆಸಿ ಎಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು,ಉಪಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕಾ ಪಾಲಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಧುಮಾಲತಿ ಪಡುವಣೆ ಸೂಚನೆ ನೀಡಿದರು. ಪ್ರವೇಶದ್ವಾರ, ಕೇಂದ್ರದ ಕಾರಿಡಾರ್, ಬಂಡಲ್ ಕಟ್ಟುವ ಕಚೇರಿಯಲ್ಲಿ ಸಿಸಿ ಕ್ಯಾಮರಾ ಅಳವಡಿಸಿರುವ ಕುರಿತು ಖಾತ್ರಿಪಡಿಸಿಕೊಳ್ಳಿ ಎಂದು ಸೂಚಿಸಿದರು. ಮಕ್ಕಳಿಗೆ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಯಾವುದೇ ಅಡ್ಡಿ ಎದುರಾಗಬಾರದು ಎಂದ ಅವರು ಪರೀಕ್ಷೆ ಹಬ್ಬದಂತಿರಲಿ, ಯಾವುದೇ ಅವ್ಯವಹಾರಗಳಿಗೆ ಅವಕಾಶ ನೀಡಬೇಡಿ, ಮಕ್ಕಳನ್ನು ಕೇಂದ್ರಕ್ಕೆ ಸಂತಸದಿಂದ ಸ್ವಾಗತಿಸಿ ಆತ್ಮಸ್ಥೈರ್ಯ ತುಂಬಿ ಪರೀಕ್ಷಾ ಭಯ ಹೋಗಲಾಡಿಸಿ ಎಂದು ಸಲಹೆ ನೀಡಿದರು. ಕೊಠಡಿಗಳಲ್ಲಿ ಅಗತ್ಯ ಪ್ರಮಾಣದಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿ, ಬೇಸಿಗೆಯ ತಾಪಮಾನ ಅಧಿಕವಾಗಿರುವುದರಿಂದ ಉತ್ತಮಗಾಳಿ ಸಂಚಾರ ಇರುವಂತೆ ನೋಡಿಕೊಳ್ಳಿ ಎಂದು ತಿಳಿಸಿದರು. ಕೇಂದ್ರದಲ್ಲಿ ಶೌಚಾಲಯ ಸುಸ್ಥಿತಿಯಲ್ಲಿರಲಿ, ನೀರಿನ ಸಂಗ್ರಹಣೆ ಇರಲಿ, ಶುದ್ದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ, ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಬರುವುದರಿಂದ ಅವರು ತಮ್ಮ ನೋಂದಣಿ ಸಂಖ್ಯೆ ಹುಡುಕಿಕೊಂಡು ಕೊಠಡಿಗಳಿಗೆ ಹೋಗಲು ಸೂಕ್ತ ಸೂಚನಾ ಫಲಕ ಅಳವಡಿಸಿ, ಮಕ್ಕಳಿಗೆ ಆತಂಕವಾಗದಂತೆ ನೋಡಿಕೊಳ್ಳಿ ಎಂದರು. ಪರೀಕ್ಷಾ ಕೇಂದ್ರಗಳ ಸುತ್ತ ಜಿಲ್ಲಾಧಿಕಾರಿಗಳ ಸೂಚನೆಯಂತೆ 200ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ ಎಂದ ಅವರು ಮುಖ್ಯ ಅಧೀಕ್ಷಕರು ಸ್ಥಳೀಯ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಿ, ಆರೋಗ್ಯ ರಕ್ಷಣೆಗೂ ಒತ್ತು ನೀಡಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಓರ್ವ ಆರೋಗ್ಯ ಸಹಾಯಕರು ಕೇಂದ್ರದಲ್ಲಿ ಪರೀಕ್ಷೆ ಸಂದರ್ಭದಲ್ಲಿ ಹಾಜರಿರಲು ಕ್ರಮವಹಿಸಿ ಎಂದರು. ಪರೀಕ್ಷಾ ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸಿರುವಂತೆ ಕ್ರಮವಹಿಸಿ, ಕೇಂದ್ರಕ್ಕೆ ಅನಧಿಕೃತ ವ್ಯಕ್ತಿಗಳ ಪ್ರವೇಶಕ್ಕೆ ಅವಕಾಶ ನೀಡದಿರಿ, ಮುಖ್ಯ ಅಧೀಕ್ಷರು ಹೊರತುಪಡಿಸಿ ಉಳಿದ ಸಿಬ್ಬಂದಿ ಮೊಬೈಲ್ ತರಬಾರದು, ನೀವು ಕೇಂದ್ರಕ್ಕೆ ನಿಗಧಿತ ಸಮಯಕ್ಕೆ ಹಾಜರಿದ್ದು, ಮಾರ್ಗಾಧಿಕಾರಿಗಳಿಂದ ಪ್ರಶ್ನೆಪತ್ರಿಕೆ ಸ್ವೀಕರಿಸಿ ಎಂದರು. ಪರೀಕ್ಷಾ ಕೇಂದ್ರದಲ್ಲಿ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಿ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಕೇಂದ್ರದ ಮುಖ್ಯ ಅಧೀಕ್ಷಕಿ ಗಾಯತ್ರಿ ದೇವಿ, ತಾಲ್ಲೂಕು ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ರಾಧಾ ಮತ್ತಿತರರು ಹಾಜರಿದ್ದರು.

# 'ಉದ್ಯಮಿಗಳಿಗೆ ಮಣೆ ಹಾಕಬೇಡಿ'

ಕೋಲಾರ

ಕಾರ್ಯಕರ್ತರು ತ್ಯಾಗ ಮಾಡಿ ಕಟ್ಟಿ ಬೆಳೆಸಿದ ಪಕ್ಷವನ್ನು ಯಾವುದೇ ಕಾರಣಕ್ಕೂ ಉದ್ಯಮಗಳಿಗೆ ಅಡವಿಡಬೇಡಿ ಎಂದು ಜಿಲ್ಲಾ ಜೆಡಿಎಸ್ ಎಸ್ಸಿ ಘಟಕದ ಉಪಾಧ್ಯಕ್ಷ ಯಲುವಗುಳಿ ನಾಗರಾಜ್ ಆಗ್ರಹಿಸಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಕೋಲಾರ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷಕ್ಕೆ ತನ್ನದೇ ಆದ ವರ್ಚಸ್ಸು ಹೊಂದಿದೆ. ಆರು ಕ್ಷೇತ್ರಗಳಲ್ಲಿ ಕನಿಷ್ಠ ನಾಲ್ಕು ಕ್ಷೇತ್ರ ಗೆಲ್ಲುವ ಸಾಮರ್ಥ್ಯ ಹೊಂದಿದೆ. ಎಲ್ಲಾ ಕ್ಷೇತ್ರಗಳಲ್ಲಿ ಗಟ್ಟಿ ಬೇರು ಹೊಂದಿದ್ದು, ಅದಕ್ಕಾಗಿ ಹತ್ತಾರು ವರ್ಷಗಳಿಂದ ಹಲವರು ಮನೆ ಮಠ ಬಿಟ್ಟು ದುಡಿದಿದ್ದಾರೆ. ಆದರೆ, ಪಕ್ಷಕ್ಕೆ ಕಿಂಚಿತ್ ಕೊಡುಗೆ ನೀಡದ ಯಾವುದೋ ಉದ್ಯಮಿಯು ಪಕ್ಷದ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಟವೆಲ್ ಹಾಕುತ್ತಿರುವುದು ಹಾಸ್ಯಾಸ್ಪದ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ಪಕ್ಷವನ್ನು ಯಾವತ್ತೂ ದುಡ್ಡಿನಿಂದ ಕಟ್ಟಲು ಸಾಧ್ಯವಿಲ್ಲ. ಅದಕ್ಕೆ ತಳಮಟ್ಟದಿಂದ ದುಡಿದು ಬೆವರು ಹರಿಸಬೇಕು. ಬಂಟಿಂಗ್ಸ್, ಬ್ಯಾನರ್ ಕಟ್ಟಿ ಶ್ರಮ ಪಡಬೇಕು. ಆಡಳಿತರೂಢ ಸರ್ಕಾರಗಳು ತಪ್ಪು ಎಸಗಿದಾಗ ಹೋರಾಟ ನಡೆಸಬೇಕು, ಬೀದಿಗಿಳಿದು ಪ್ರತಿಭಟನೆ ಮಾಡಬೇಕು. ಆದರೆ, ಒಮ್ಮೆಯೂ ಬೀದಿಗಿಳಿಯದ, ಕಾರ್ಯಕರ್ತರ ಒಡನಾಟವೇ ಇಲ್ಲದ, ಆಡಳಿತರೂಢ ಸರ್ಕಾರದ ವಿರುದ್ಧ ದನಿ ಎತ್ತದವರು ಅಧ್ಯಕ್ಷ ಸ್ಥಾನದ ರೇಸ್‌ನಲ್ಲಿರುವುದು ನಗೆಪಾಟಲಿನ ವಿಷಯ ಎಂದು ಕಿಡಿಕಾರಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇಂಥ ಭ್ರಷ್ಟ ಸರ್ಕಾರ ತೊಲಗಿಸಲು ಜಿಲ್ಲಾಮಟ್ಟದಲ್ಲಿ ಜನರನ್ನು ಸಂಘಟಿಸಬೇಕಿದೆ ಎಂದು ಒತ್ತಾಯಿಸಿದ್ದಾರೆ.

# ತೆರಿಗೆ ವಸೂಲಾತಿಯಲ್ಲಿ ಕೋಲಾರ ಜಿ.ಪಂ. ಉತ್ತಮ ಸಾಧನೆ: ಸಿಇಓ

ಕೋಲಾರ

ಬೇಸಿಗೆ ಮುಂಜಾಗ್ರತೆಯಾಗಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಎಚ್ಚರ ವಹಿಸಲು ಹಾಗೂ ಎಲ್ಲಾ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಲ್ಲಾ ತಾಲ್ಲೂಕೂಗಳಲ್ಲಿ ಸಹಾಯವಾಣಿ ತೆರೆಯಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರವೀಣ್ ಪಿ ಬಾಗೇವಾಡಿ ಮಾಹಿತಿ ನೀಡಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಉಪಲೋಕಾಯುಕ್ತರು ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯ್ತಿ ಅಧಿಕಾರಿಗಳ ಕಚೇರಿ ಭೇಟಿ ಮಾಡಿದ ಸಂದರ್ಭದಲ್ಲಿ ಗುರುತಿಸಲಾದ ಅಂಶಗಳ ಕುರಿತು ಆಡಳಿತಾಧಿಕಾರಿಗಳ ಮಹತ್ವದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು, ತೆರಿಗೆ ವಸೂಲಾತಿ ಮತ್ತು ಸಾರ್ವಜನಿಕ ಸೇವೆಗಳ ಅನುಷ್ಠಾನದ ಕುರಿತು ಸಮಗ್ರ ಚರ್ಚೆ ನಡೆಸುತ್ತಾ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಒಟ್ಟು 246 ನ್ಯಾಯಾಲಯ ಪ್ರಕರಣಗಳು ಬಾಕಿ ಇದ್ದು, ಈ ಪೈಕಿ 139 ಪ್ರಕರಣಗಳಲ್ಲಿ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಿಇಒ ಅವರು, ಶೀಘ್ರವಾಗಿ ಅಫಿಡವಿಟ್ ಸಲ್ಲಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸೂಚಿಸಿದರು.

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು 18,771 ನಾಯಿಗಳನ್ನು ಗುರುತಿಸಲಾಗಿದೆ. ನಾಯಿಗಳ



ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಲು ಪ್ರತಿ ತಾಲ್ಲೂಕಿಗೆ 100 ಲಕ್ಷ ರೂ.ಗಳಂತೆ ಒಟ್ಟು 600 ಲಕ್ಷ ರೂ.ಗಳ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 1,239 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಈ ಪೈಕಿ 1,103 ಘಟಕಗಳು ಸುಸ್ಥಿತಿಯಲ್ಲಿವೆ ಮತ್ತು 136 ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. ಈ ಘಟಕಗಳನ್ನು ತಕ್ಷಣವೇ ದುರಸ್ತಿಗೊಳಿಸಿ ಸಾರ್ವಜನಿಕರಿಗೆ ನೀರು ಪೂರೈಸಲು ಅಧಿಕಾರಿಗಳಿಗೆ ಆದೇಶಿಸಿದರು.

2025-26ನೇ ಸಾಲಿನ ತೆರಿಗೆ ವಸೂಲಾತಿಯಲ್ಲಿ ಜಿಲ್ಲೆಯು ಶೇ. 82% ರಷ್ಟು 40.44ಕೋಟಿ ವಸೂಲಿ ಮಾಡಿ ಸಾಧನೆ ಮಾಡಿದೆ. ಬಂಗಾರಪೇಟೆ ತಾಲ್ಲೂಕು ಶೇ. 83.21 ರಷ್ಟು ಪ್ರಗತಿಯೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಶ್ರೀನಿವಾಸಪುರ (ಶೇ. 81.04) ಮತ್ತು ಮಾಲೂರು (ಶೇ. 80.75) ನಂತರದ ಸ್ಥಾನಗಳಲ್ಲಿವೆ. 22 ಗ್ರಾಮಪಂಚಾಯಿತಿ ಗಳುಶೇ 100% ತೆರಿಗೆ ವಸೂಲಿ ಮಾಡಿ ಸರ್ಕಾರಕ್ಕೆ ಪಾವತಿ ಮಾಡಲಾಗಿದೆ. ತೆರಿಗೆ ಬಾಕಿ ಇರುವ ಪಂಚಾಯತ್‌ಗಳು ಮಾರ್ಚ್ ಅಂತ್ಯದೊಳಗೆ ಶೇ. 100 ಗುರಿ ತಲುಪಲು ಕ್ರಮ ವಹಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 1,887 ಕೆರೆಗಳಿದ್ದು, ಇವುಗಳಲ್ಲಿ 879 ಕೆರೆಗಳಲ್ಲಿ ಒತ್ತುವರಿ ಗುರುತಿಸಲಾಗಿದೆ. ಇದುವರೆಗೆ 706 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಬಾಕಿ ಇರುವ 173 ಕೆರೆಗಳ ಒತ್ತುವರಿಯನ್ನು ಶೀಘ್ರವಾಗಿ ತೆರವುಗೊಳಿಸಲು ಸರ್ವೆ ಕಾರ್ಯ ಚುರುಕುಗೊಳಿಸಲು ಸೂಚಿಸಿದರು.

ಪ್ರಸಕ್ತ ಸಾಲಿನ ಮಾನವ ದಿನಗಳ ಸೃಜನೆಯಲ್ಲಿ ಜಿಲ್ಲೆಯು ಉತ್ತಮ ಪ್ರಗತಿ ಸಾಧಿಸುತ್ತಿದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ಶೇ. 31.31 ರಷ್ಟು ಆರ್ಥಿಕ ಪ್ರಗತಿಯಾಗಿದೆ. ಕೂಸಿನ ಮನೆ ಮತ್ತು ಶಾಲಾ ಶೌಚಾಲಯಗಳ ನಿರ್ಮಾಣ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ತಿಳಿಸಲಾಯಿತು.

ಜಿಲ್ಲೆಯಲ್ಲಿ 100% ಭಿಕ್ಷುಕರ ಕರ ವಸೂಲಿ ಮಾಡಲಾಗಿದ್ದು ಈ ಸಂಬಂಧ 3.14 ಕೋಟಿ ರೂ ಗಳನ್ನು ಸರ್ಕಾರಕ್ಕೆ ಪಾವತಿಸಲಾಗಿದೆ ಎಂದರು.

ಸಭೆಯಲ್ಲಿ ಬಯೋ ಮೆಟ್ರಿಕ್ ಹಾಜರಾತಿ ಕಡ್ಡಾಯಗೊಳಿಸುವ ಬಗ್ಗೆ ಚರ್ಚಿಸಲಾಯಿತು. ಕರ್ತವ್ಯ ಲೋಪ ಎಸಗುವ ಅಥವಾ ಅಭಿವೃದ್ಧಿ ಕಾಮಗಾರಿಗಳಲ್ಲಿ ವಿಳಂಬ ಧೋರಣೆ ಅನುಸರಿಸುವ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಡಾ. ಪ್ರವೀಣ್ ಪಿ ಬಾಗೇವಾಡಿ ಅವರು ಎಚ್ಚರಿಸಿದರು.

ಸಭೆಯಲ್ಲಿ ಜಿ.ಪಂ. ಉಪಕಾರ್ಯದರ್ಶಿ ಟಿ.ಕೆ. ರಮೇಶ್, ಯೋಜನಾ ನಿರ್ದೇಶಕ ವೆಂಕಟಾಚಲಪತಿ, ಎಲ್ಲಾ ಪಂಚಾಯತ್ ಆಡಳಿತಾಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಕೋಲಾರ ಜಿಲ್ಲೆಯಲ್ಲಿ ಅರಣ್ಯ ಅಕ್ರಮ ಹಾಗೂ ಒತ್ತುವರಿಯಾಗಿದೆ: ಈಶ್ವರ್ ಖಂಡ್ರೆ

ಬೆಂಗಳೂರು

ಅರಣ್ಯ, ಪರಿಸರ, ಜೀವಿಶಾಸ್ತ್ರ ಇಲಾಖೆಯು ಪ್ರಕೃತಿ ಸಂರಕ್ಷಣೆಗೆ ನ್ಯಾಯಾಲಯಗಳ ಆದೇಶದಂತೆ ಪಾಲಿಸುತ್ತಿದೆ. ಕೋಲಾರ ಜಿಲ್ಲೆಯಲ್ಲಿ 50 ಸಾವಿರ ಎಕರೆ ಅರಣ್ಯ ಪ್ರದೇಶವಿದ್ದು ಇದರಲ್ಲಿ 9860 ಎಕರೆ ಅರಣ್ಯ ಪ್ರದೇಶ ಅಕ್ರಮವಾಗಿ ಜಮೀನುಗಳನ್ನಾಗಿ ಪರಿವರ್ತಿಸಿದ್ದು, 4 ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶ ಒತ್ತುವರಿಯಾಗಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸಚಿವರಾದ ಈಶ್ವರ್ ಭೀಮಣ್ಣ ಖಂಡ್ರೆ ಅವರು ಸದನಲ್ಲಿ ತಿಳಿಸಿದರು.

ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ ಅವರು ಕೋಲಾರ ಜಿಲ್ಲೆಯ ಅರಣ್ಯ ಇಲಾಖೆ ಕುರಿತಂತೆ 4 ಬಾರಿ ಸಚಿವರಿಗೆ ನಾನು ಪ್ರಶ್ನೆ ಕೇಳಿದ್ದೆ. ಜಿಲ್ಲೆಯ ಅರಣ್ಯ ಅಧಿಕಾರಿಗಳು ಹದ್ದುಮೀರಿ ವರ್ತಿಸುತ್ತಿದ್ದಾರೆ. ರಾತ್ರಿ 8 ಗಂಟೆಗೆ ಬಂದು ರೈತರಿಗೆ ತೊಂದರೆ ನೀಡುತ್ತಿದ್ದಾರೆ. ಪೊಲೀಸರನ್ನು ಕರೆದುಕೊಂಡು ಬರುವುದು ದೌರ್ಜನ್ಯ ಅಲ್ಲವೇ? ಯಾರಿಗೂ ಅನ್ಯಾಯವಾಗಬಾರದು. ನಾವು ಕ್ಷೇತ್ರದಲ್ಲಿ ಶಾಸಕರೆಂದು ಗುರುತಿಸಿಕೊಂಡಿದ್ದೇವೆ. ನಮ್ಮ ಗಮನಕ್ಕೆ ಬರದೇ ಹೀಗೆ ವರ್ತಿಸುವುದು ಸರಿಯೇ? ಸ.ನಂ: 73, 72 ರಲ್ಲಿ ಗೋಮಾಳ ಜಮೀನು ಇದೆ. ಶಾಲೆ, ಅಂಗನವಾಡಿ ಕೇಂದ್ರ, ಕುಡಿಯುವ ನೀರಿನ ವ್ಯವಸ್ಥೆ ಇದೆ. ಅರಣ್ಯಾಧಿಕಾರಿಗಳು ಏಕಾಏಕಿ ದಾಳಿ ನಡೆಸಿದರೆ ಸ್ಥಳೀಯರು ಎಲ್ಲಿ ಹೋಗಬೇಕು? ಶಾಸಕರ ಬಳಿ ಬರಬೇಕಲ್ಲವೇ? ಅಧಿಕಾರಿಗಳು ಹೀಗೆ ತಡೆ ನೀಡಿದರೆ ಹೇಗೆ? ಸರ್ಕಾರವೇ ಒಂದು ಕಡೆ ಇದ್ದರೆ, ಅರಣ್ಯ ಇಲಾಖೆಯೇ ಮತ್ತೊಂದು ಕಡೆ ಇದೆ. ಕೋಲಾರ ಜಿಲ್ಲೆಯ ಎಲ್ಲ ತಾಲೂಕುಗಳಲ್ಲೂ ಇದೇ ಸಮಸ್ಯೆ ಇದೆ. ಸರ್ಕಾರವೇ 25 ಎಕರೆ ಭೂಮಿ ನೀಡಿದೆ. ಸಚಿವರಿಗೆ ಕಾಳಜಿ ಇದ್ದರೆ, ಅಧಿಕಾರಿಗಳಿಗೇಕೆ ಕಾಳಜಿ ಇಲ್ಲ? ಸಾರ್ವಜನಿಕವಾಗಿ ಎಲ್ಲೋ ಒಂದು ಕಡೆ ನಮಗೆ ಅವಮಾನ ಆಗುತ್ತಿದೆ. ಜಮೀನು ಅರಣ್ಯ ಇಲಾಖೆಯದ್ದೇ ಆಗಿದ್ದರೆ ಒಂದು ನೋಟೀಸ್ ಕೊಟ್ಟು ಮುಂದಿನ ಕ್ರಮ ಕೈಗೊಳ್ಳಬೇಕಿತ್ತು? ಎಂದು ಕೇಳಿದ ಪ್ರಶ್ನೆಗಳಿಗೆ ಸಚಿವರು ಈ ರೀತಿ ಉತ್ತಸಿದರು.



**ಮೀಸಲು ಅರಣ್ಯ ಘೋಷಣೆ:**

1890ರಲ್ಲಿಯೇ ಅಧಿಸೂಚಿತ ಅರಣ್ಯವೆಂದು ಅಧಿಸೂಚನೆ ಆಗಿತ್ತು. ಮೀಸಲು ಅರಣ್ಯವೆಂದು ಒಂದು ಬಾರಿ ಘೋಷಣೆ ಆಗಿದೆ. ಎಫ್.ಸಿ.ಇಲ್ಲದೇ ಈ ಅರಣ್ಯ ಭೂಮಿಯನ್ನು ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ನ್ಯಾಯಾಲಯದ ಸೂಚನೆ ಮೀರಿ ನಡೆಯುವ ಹಾಗಿಲ್ಲ. ಈ ಕುರಿತು ನ್ಯಾಯಾಲಯವು ಕಾಲ ಕಾಲಕ್ಕೆ ತೀರ್ಪು ನೀಡುತ್ತಾ ಬರುತ್ತಿದೆ. ಒಂದುವೇಳೆ ಒತ್ತುವರಿ ಆಗಿದ್ದರೆ ವಿಶೇಷ ತಂಡ ರಚನೆ ಮಾಡಿ ವಾಪಸ್ಸು ಅರಣ್ಯಕ್ಕೆ ಕೊಡಲು ತೀರ್ಮಾನಿಸಲಾಗುತ್ತದೆ. ಇದೇರೀತಿ ಬೆಂಗಳೂರಿನಲ್ಲಿ ಸುಮಾರು 850 ಎಕರೆ ಅರಣ್ಯ ಒತ್ತುವರಿ ಆಗಿದೆ. ಸುಮಾರು 40 ಸಾವಿರ ಕೋಟಿ ಆಸ್ತಿಯದು. ಕುಮುದೇನಹಳ್ಳಿ, ಶೆಟ್ಟಿಬೆನಕನಹಳ್ಳಿ ಮತ್ತು ಹತ್ತಿಗುಂಟೆಗಳಲ್ಲಿ 351 ಎಕರೆಯಲ್ಲಿ 25 ಎಕರೆ ಒತ್ತುವರಿ ಆಗಿದೆ. ಒತ್ತುವರಿದಾರರಿಗೆ ನೋಟೀಸ್ ಕೊಡಲಾಗಿದೆ. ಒತ್ತುವರಿದಾರರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಅವೆಲ್ಲ ಕೋರ್ಟ್ನಲ್ಲಿ ಡಿಸ್ ಮಿಸ್ ಆಗಿವೆ. ಎಸಿಎಫ್ ನಲ್ಲಿ 64 ಮಾಡಲಾಗುತ್ತಿದೆ. ಮುಂದೆ ಸಿಎಲ್ ಗೆ ಅಪೀಲ್ ಹೋಗಬಹುದು. ಈ ಬಗ್ಗೆ ಮಾಹಿತಿ ನೀಡಿ ಒತ್ತುವರಿ ತೆರವು ಮಾಡಲಾಗಿದೆ. ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಇದನ್ನು ಮಾಡಲಾಗಿದೆ. ಶಾಸಕರನ್ನು ಬಿಟ್ಟು ಮಾಡುವ ಉದ್ದೇಶವಿಲ್ಲ. ಅಧಿಕಾರಿಗಳು ತಮಗೆ ಈ ಕುರಿತು ಮಾಹಿತಿ ನೀಡುತ್ತಾರೆ. ಕಾಯ್ದೆಯಂತೆಯೇ ನಿಯಮಗಳನ್ನು ಪಾಲಿಸಿ ಜಂಟಿ ಸಮೀಕ್ಷೆ ನಡೆಸಲಾಗಿದೆ. ಅರಣ್ಯ, ಕಂದಾಯ ಮತ್ತು ಮೋಜಿಣಿ ಈ ಮೂರು ಇಲಾಖೆಗಳಿಂದ ಸರ್ವೇ ಮಾಡಿ ನಕ್ಷೆ ನೀಡಲಾಗಿದೆ. ಅರಣ್ಯವಲ್ಲದ ಪ್ರದೇಶಗಳಲ್ಲಿ ಯಾವುದೇ ತೆರವು ಕಾರ್ಯಾಚರಣೆ ನಡೆಸಿಲ್ಲವೆಂದು ಸ್ಪಷ್ಟಪಸಿದರು.

## ಸಚಿವರಿಗೆ ದಿಕ್ಕು ತಪ್ಪಿಸುವ ಕೆಲಸವಾಗುತ್ತಿದೆ

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಸಮೃದ್ಧಿ ಮಂಜುನಾಥ್, ಅಧಿಕಾರಿಗಳು ಸಚಿವರಿಗೆ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಅಭಿವೃದ್ಧಿ ಸಭೆ(ಕೆಡಿಪಿ) ಯಲ್ಲಿ ಒಂದು ಮಾತು ಹೇಳುತ್ತಾರೆ, ತಮ್ಮ ಮುಂದೆ ಇನ್ನೊಂದು ಹೇಳುತ್ತಾರೆ. ಸರ್ಕಾರ ಗೋಮಾಳ ಜಮೀನು ನೀಡಿ 32 ವರ್ಷ ಆಗಿದೆ. ಅದು ಅರಣ್ಯ ಇಲಾಖೆಯದ್ದೇ ಆಗಿದ್ದಿದ್ದರೆ ಮೊದಲು ನೋಟೀಸ್ ನೀಡಬೇಕಾಗಿತ್ತು. ಆರ್.ಎಫ್.ಓ., ಡಿ.ಎಫ್.ಓ., ಒಬ್ಬರಿಗೊಬ್ಬರು ವ್ಯತಿರಿಕ್ತ ಹೇಳಿಕೆ ನೀಡುತ್ತಿದ್ದಾರೆ. ಎರಡು ಕೋಳಿ ಜಗಳಗಳ ನಡುವೆ ನಾವೂ ಜಗಳ ಮಾಡುವ ಪರಿಸ್ಥಿತಿ ಬಂದಿದೆ. ಜನಪ್ರತಿನಿಧಿಗಳಾಗಿ ನಾವು ಎಲ್ಲಿಗೆ ಹೋಗಬೇಕು? ಕೂಡಲೇ ಎಲ್ಲ ಶಾಸಕರ ಸಭೆಯನ್ನು ಕರೆಯಿರಿ ಎಂದು ತಾಕೀತು ಮಾಡಿದರು.

**ಅಕ್ರಮಗಳಿಗೆ ಆಸ್ಪದ ಇಲ್ಲ:**

ಇದಕ್ಕೆ ಉತ್ತರಿಸಿದ ಸಚಿವ ಈಶ್ವರ್ ಖಂಡ್ರೆ ಅವರು, ಅರಣ್ಯ ಇಲಾಖೆಯಲ್ಲಿ ಯಾವುದೇ ರೀತಿಯ ಅಕ್ರಮಗಳಿಗೆ ಆಸ್ಪದ ಇಲ್ಲ. ತಾವು ಅಕ್ರಮಗಳು ನಡೆದಿರುವ ಕುರಿತು ದಾಖಲೆ ಸಮೇತ ದೂರು ನೀಡಿದರೆ ವಿಶೇಷ ತನಿಖಾ ತಂಡ ರಚಿಸುತ್ತೇನೆ. ಸಮಗ್ರ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇನೆ. ಈ ಕುರಿತು ನಿಮಗೆ ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚಿಸುತ್ತೇನೆ. ಮುಳಬಾಗಿಲು ನಲ್ಲಿ ಸ್ಟೇಡಿಯಂ ನಿರ್ಮಾಣದಿಂದ ತೊಂದರೆ ಆಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದರು. ಕೂಡಲೇ ಎದ್ದುನಿಂತ ಶಾಸಕ ಸಮೃದ್ಧಿ ಮಂಜುನಾಥ್ ಅಣ್ಣಾ, ಒಂದು ಬಾರಿ ನಮ್ಮ ಕೋಲಾರ ಜಿಲಲೆ ಬಂದು ಸಭೆ ನಡೆಸಿ ಎಂದು ಮನವಿ ಮಾಡಿದರು.

**ಟ್ರಾಕ್ಟರ್ ಸೀಜ್:**

ಈ ನಡುವೆ ಕೋಲಾರ ಶಾಸಕ ಕೊತ್ತೂರು ಮಂಜುನಾಥ್ ಮಾತನಾಡಿ, ಅರಣ್ಯಾಭಿವೃದ್ಧಿ ವಿಷಯದಲ್ಲಿ ನಮ್ಮದೇನೂ ತಕರಾರು ಇಲ್ಲ. ಶ್ರೀನಿವಾಸಪುರ ತಾಲೂಕಿನಲ್ಲಿ ವ್ಯಕ್ತಿಯೊಬ್ಬರು ಕೋರ್ಟ್ ಗೆ ಹೋದಾಗ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನ್ಯಾಯಾಲಯ ಸೂಚಿಸಿದೆ. ಅತಿಕ್ರಮಣದ ವಿಷಯವಾಗಿ ಕೆ.ಡಿ.ಪಿ.ಸಭೆಯಲ್ಲಿ ಈ ಕುರಿತು ತೀರ್ಮಾನಿಸಲಾಗಿದೆ. ಮಂತ್ರಿಗಳ ಕಚೇರಿಗೂ ಕೋಲಾರ ಜಿಲ್ಲೆಯ ಎಲ್ಲ ಶಾಸಕರು ಭೇಟಿ ಮಾಡಿ ಈ ಕುರಿತು ಚರ್ಚಿಸಿದ್ದೇವೆ. ನಂಜೇಗೌಡರು, ಎಸ್ ಎ ನಾರಾಯಣಸ್ವಾಮಿ ಮತ್ತು ನಾನು ಹೋಗಿದ್ದೆವು. ರೈತರ ಫಸಲನ್ನು ಕಿತ್ತು ಹಾಕುವುದು, ಮಾವು ಮತ್ತು ಇತರೆ ಗಿಡಗಳನ್ನು ಕತ್ತರಿಸಿ ಹಾಕುವುದು ನಡೆದಿದೆ. 300 ಜನ ಪೊಲೀಸರನ್ನು ಕರೆದುಕೊಂಡು ಬಂದು ಟ್ರಾಕ್ಟರ್ ಗಳೆಲ್ಲವನ್ನೂ ಸೀಜ್ ಮಾಡಲಾಗಿದೆ. ರೈತರಿಗೆ ತೊಂದರೆ ಕೊಡಲಾಗುತ್ತಿದೆ. ಮಂತ್ರಿಗಳೇ ಖುದ್ದಾಗಿ 2–3 ಎಕರೆ ಜಮೀನು ಮಾಡುವ ರೈತರನ್ನು ಒಕ್ಕಲೆಬ್ಬಿಸಬಾರದೆಂದು ಹೇಳಿದ್ದರು ಎಂದರು.

**ಸಭೆಯಲ್ಲಿ ಇತ್ಯರ್ಥ:**

ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವ ಈಶ್ವರ್ ಖಂಡ್ರೆ ಅವರು, ಈಗಾಗಲೇ 150 ಪ್ರಕರಣಗಳು ನಡೆಯುತ್ತಿವೆ. ನ್ಯಾಯಾಲಯದ ಆದೇಶವನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಅಧಿಕಾರಿಗಳೂ ಕೂಡ ಯಥಾವತ್ತಾಗಿ ಪಾಲಿಸಬೇಕು. ಉಸ್ತುವಾರಿ ಮಂತ್ರಿಗಳು ಮತ್ತು ನಾವು ಸಭೆ ಸೇರಿ ಇತ್ಯರ್ಥ ಪಡಿಸುತ್ತೇವೆ ಎಂದರು.

# ಅಬಕಾರಿ ಸಚಿವರಿಗೆ ಟ್ರೇನಿಂಗ್ ಇಲ್ಲ: ಮುನಿರತ್ನ

ಬೆಂಗಳೂರು

ಕೋತಿ ತಾನು ತಿಂದು ಮೇಕೆಯ ಮೂತಿಗೆ ಒರೆಸಿತು ಎನ್ನುವ ಗಾದೆಯೇ ಇದೆ. ಅಬಕಾರಿ ಇಲಾಖೆಗೆ ಸಚಿವರಾಗಿರುವವರಿಗೆ ಸೂಕ್ತ ತರಬೇತಿ ನೀಡಿಲ್ಲ ಎಂದು ಮುನಿರತ್ನ ಸಚಿವರ ಕಾಲೆಳೆದ ಪ್ರಸಂಗ ಜರುಗಿತು.



ವಿಧಾನಸಭೆಯ ಕಲಾಪದಲ್ಲಿ ಹಲವಾರು ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲಿದ ಅವರನ್ನು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನೀವು ಒಳ್ಳೆಯ ನಟರು ಅಂದಿದ್ದಕ್ಕೆ ಶಾಸಕ ಮುನಿರತ್ನ ಕೌಂಟರ್ ಕೊಟ್ಟ ಪ್ರಸಂಗವೂ ವಿಧಾನಸಭೆಯಲ್ಲಿ ನಡೆಯಿತು. ನಾನು ನಟ ಅಲ್ಲ, ನಿರ್ಮಾಪಕ. ಒಂದು ವೇಳೆ ಈಗ ಕಲ್ಪನಾ, ಮಂಜುಳಾ ಇದ್ದಿದ್ರೆ ನಿಮ್ಮ ನಟನೆ ನೋಡಿ ಅವರು ಸತ್ತೇ ಹೋಗ್ತಿದ್ರು ಅಂತ ವ್ಯಂಗ್ಯವಾಡಿದರು.

ವಿಧಾನಸಭೆಯಲ್ಲಿ ಬೆಂಗಳೂರು ನಗರದ ಸಮಸ್ಯೆ ಬಗ್ಗೆ ಮಾತನಾಡುವಾಗ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತು ಮುನಿರತ್ನ ಅವರ ನಡುವೆ ವ್ಯಂಗ್ಯ ಮಾತಿನ ವಿನಿಮಯವಾಯಿತು. ಏರ್‌ಪೋರ್ಟ್ನಿಂದ ನಗರಕ್ಕೆ ಆಗಮಿಸುವ ಸಂದರ್ಭದಲ್ಲಿ ಎರಡು ಇಂದಿರಾ ಕ್ಯಾಂಟೀನ್ ಗಳಿವೆ. ಕಾಂಗ್ರೆಸ್ ನ ಎಲ್ಲ ಶಾಸಕರು ನನ್ನೊಂದಿಗೆ ಬನ್ನಿ. ನಾನು ಇಂದಿರಾ ಕ್ಯಾಂಟೀನ್ ಆಹಾರ ಸೇವಿಸುತ್ತೇನೆ. ನೀವೂ ಸೇವಿಸಬೇಕು. ನಾನು ಆಹಾರದ ಬಗ್ಗೆ ಹೇಳುತ್ತಿಲ್ಲ. ಅವುಗಳ ಪಕ್ಕದಲ್ಲಿ ಇರುವ ಕಸ ಮತ್ತು ತ್ಯಾಜ್ಯ ವಿಲೇವಾರಿ ಕೇಂದ್ರಗಳಿರುವುದರಿಂದ ವಾಸನೆ ಬಡಿಯುತ್ತಿದೆ. ಒಂದು ನೊಣವಾದರೆ ಓಡಿಸಬಹುದು. ನೂರಾರು ನೊಣಗಳನ್ನು ಓಡಿಸಿ ಊಟ ಮಾಡುವುದಾದರೂ ಹೇಗೆ? ಸಾಲದ್ದಕ್ಕೆ ನೂರಾರು ತ್ಯಾಜ್ಯ ವಿಲೇವಾರಿ ವಾಹನಗಳು ಅಲ್ಲಿ ನಿಂತಿರುತ್ತವೆ ಎಂದು ಸದನದಲ್ಲಿ ಹೇಳಿದರು.

ಮೆಟ್ರೋ ಕಾಮಗಾರಿಗಳೂ ವಿಳಂಬವಾಗುತ್ತಿವೆ. ಮೆಟ್ರೋ ನಿಲ್ದಾಣ ನಿರ್ಮಾಣ ಎಷ್ಟು ಮುಖ್ಯವೋ ಅಷ್ಟೇ ಪ್ರಮಾಣದಲ್ಲಿ ವಾಹನ ನಿಲುಗಡೆಯೂ ಮುಖ್ಯ. ಸರ್ಕಾರ ಉದ್ಯಮಗಳಿಗೆ ಹೆಚ್ಚಿನ ಜಾಗ ಕೊಟ್ಟು, ಸಣ್ಣ ಪ್ರಮಾಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿದೆ. ಮೆಟ್ರೋದಲ್ಲಿ ಓಡಾಡುವವರು ಆಡಿ ಯಂತಹ ಕಾರಿನಲ್ಲಿ ಬರುವವರಲ್ಲ. ಬೈಕ್ ನಲ್ಲಿ ಬರುವವರು. ಅಂಥವರಿಗೆ ಪಾರ್ಕಿಂಗ್ ಮಾಡಲು ಸ್ಥಳಾವಕಾಶ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದರೆ ಹೇಗೆ? ಎಂದು ಸದನದ ಗಮನ ಸೆಳೆದರು. ಇದೇ ಸಂದರ್ಭದಲ್ಲಿ ರಾಜ ರಾಜೇಶ್ವರಿ ನಗರದ ಬಗ್ಗೆ ಮಾತನಾಡಿದರೆ ನಾನು ಜೈಲಿಗೆ ಹೋಗಬೇಕಾಗುತ್ತದೆ ಎಂದು ಡಿಕೆ ಸಹೋದರಿಗೆ ಟಾಂಗ್ ನೀಡಿದರು.

ವಿಕ್ಟೋರಿಯಾ ಆಸ್ಪತ್ರೆಗೆ ಶಾಂತವೇರಿ ಗೋಪಾಲಗೌಡ ಎಂದು ಹೆಸರಿಟ್ಟಿದ್ದಕ್ಕೆ ವಿರೋಧ ವ್ಯಕ್ತಪಡಿಸಿದ ಮುನಿರತ್ನ, ಆ ಆಸ್ಪತ್ರೆ ಹಳೆಯ ಕಟ್ಟಡ, ಆಸ್ಪತ್ರೆಗೆ ಶಾಂತವೇರಿ ಅವರ ಹೆಸರಿಡುವ ಬದಲು ಹೊಸ ಕಟ್ಟಡ ಕಟ್ಟಿ ಶಾಂತವೇರಿ ಗೌಡರ ಹೆಸರಿಡಬಹುದು. ವಿಕ್ಟೋರಿಯಾ ಆಸ್ಪತ್ರೆಯ ಕಟ್ಟಡಕ್ಕೆ ಶಾಂತವೇರಿ ಗೋಪಾಲಗೌಡರ ಹೆಸರಿಟ್ಟು ಅವರಿಗೆ ಅವಮಾನ ಮಾಡಬೇಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸ್ಪೀಕರ್ ಅವರ ಸಲಹೆಯಂತೆ ಅವಸವಸರವಾಗಿ ತಮ್ಮ ಹೇಳಿಕೆಗಳನ್ನು ಸದನದಲ್ಲಿ ಪ್ರಸ್ತಾಪಿಸಿದ ಮುನಿರತ್ನ ಅವರು, ರಾಜಾಕಾಲುವೆ ಪಕ್ಕ ಮೋರಿಗಳನ್ನು ಅಗಲ ಮಾಡುವ ಕಾಮಗಾರಿಗಳಲ್ಲಿ ಅಕ್ರಮ ನಡೆಯುತ್ತಿದೆ. ನೀವು ನನ್ನ ಮೇಲೆ ಅಭಿಮಾನ ಇಟ್ಟಿದ್ದಕ್ಕಾಗಿ ನೀವು ಸೂಚಿಸಿದ ಸಮಯದಲ್ಲಿಯೇ ನನ್ನ ವಿಚಾರ ಹೇಳಿ ಮುಗಿಸುತ್ತೇನೆ ಅಧ್ಯಕ್ಷರೇ ಎಂದು ಮಾತನ್ನು ಮುಂದುವರಿಸಿದರು.

ಉದ್ಯಮಿಗಳು ಬೆಂಗಳೂರು ಬಿಟ್ಟು ಹೋಗುತ್ತಿದ್ದಾರೆ. ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಬೆಂಗಳೂರು ಬಗ್ಗೆ ಮಾತಾಡ್ತಾರೆ. ತಮಿಳುನಾಡು ಭಾರತದಲ್ಲೇ ಕೈಗಾರಿಕೆಯಲ್ಲಿ ಮೊದಲ ಸ್ಥಾನ. ನಾವು ಇರೋರನ್ನು ಓಡಿಸ್ತಿದ್ದೇವೆ. ಇರೋದನ್ನು ಕಳೆದುಕೊಳ್ಳುತ್ತಿದ್ದೀವಿ. ಉದ್ಯಮಿಗಳನ್ನು ಬೆಂಗಳೂರಿನಲ್ಲಿ ಇರಲು ನಾವು ಬಿಡುತ್ತಿಲ್ಲ. ಬಿಲ್ಡರ್ ಗಳು ಬೆಂಗಳೂರು ತೊರೆದು ಹೋಗುತ್ತಿದ್ದಾರೆ. ಯಾಕೆ ಅಂತ ವಿಚಾರಿಸಿದಾಗ ಬೆಂಗಳೂರಿನಲ್ಲಿ ಭ್ರಷ್ಟಾಚಾರ ಕಮ್ಮಿ ಆಗಿದೆ ಎಂದು ವಾಸ್ತವ ಪರಿಸ್ಥಿತಿಗೆ ಟಾಂಗ್ ನೀಡಿದರು.

# ಭಯೋತ್ಪಾದನೆ: 7 ಜನರ ಬಂಧನ

ನವದೆಹಲಿ

ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸುತ್ತಿದ್ದ ಆರೋಪದ ಮೇಲೆ ಭಾರತದ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್ಐಎ) ಅಧಿಕಾರಿಗಳು 6 ಉಕ್ರೇನಿಯನ್ನರು ಮತ್ತು ಒಬ್ಬ ಅಮೇರಿಕನ್ ಪ್ರಜೆಯನ್ನು ಬಂಧಿಸಿದ್ದಾರೆ.

ರಾಷ್ಟ್ರೀಯ ತನಿಖಾ ಸಂಸ್ಥೆ ಶುಕ್ರವಾರ 3 ವಿಮಾನ ನಿಲ್ದಾಣಗಳಲ್ಲಿ 7 ವಿದೇಶಿ ಪ್ರಜೆಗಳನ್ನು ಗಂಕಂ ಅಡಿಯಲ್ಲಿ ಬಂಧಿಸಿತ್ತು. ಆರೋಪಿಗಳು ಪ್ರಸ್ತುತ ಎನ್ಐಎ ವಶದಲ್ಲಿದ್ದಾರೆ. ಅವರನ್ನು ಪಟಿಯಾಲ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಜನಾಂಗೀಯ ಸಶಸ್ತ್ರ ಗುಂಪುಗಳಿಗೆ ಡ್ರೋನ್ ಯುದ್ಧದಲ್ಲಿ ತರಬೇತಿ ನೀಡುವ ಪಿತೂರಿಯ ತನಿಖೆಗಾಗಿ ದೆಹಲಿ ನ್ಯಾಯಾಲಯವು ಭಯೋತ್ಪಾದನಾ ನಿಗ್ರಹ ಸಂಸ್ಥೆಗೆ 11 ದಿನಗಳ ಕಾಲಾವಕಾಶ ನೀಡಿದ ನಂತರ ಒಬ್ಬ ಅಮೆರಿಕನ್, 6 ಮಂದಿ ಉಕ್ರೇನಿಯನ್ ಪ್ರಜೆಗಳು ಸೇರಿದಂತೆ 7 ವಿದೇಶಿ ಪ್ರಜೆಗಳು ಕಸ್ಟಡಿಯಲ್ಲಿದ್ದಾರೆ.

# ಡಿವಿಜಿ ಹಾಕಿಕೊಟ್ಟ ಮಾರ್ಗವೇ ಪತ್ರಕರ್ತರ ಸಂಘಟನೆಗೆ ದಾರಿದೀಪ: ತಗಡೂರು

ಬೆಂಗಳೂರು

ಆಧುನಿಕ ಕನ್ನಡ ಸಾಹಿತ್ಯದ ಸರ್ವಜ್ಞ, ಸಾಹಿತ್ಯ ದಿಗ್ಗಜ ಡಿ.ವಿ.ಗುಂಡಪ್ಪನವರು ಕೇವಲ ಸಾಹಿತಿಯಷ್ಟೇ ಅಲ್ಲದೆ, ಪತ್ರಕರ್ತರ ಹಿತರಕ್ಷಣೆಗಾಗಿ 95 ವರ್ಷಗಳ ಹಿಂದೆಯೇ ಸಂಘಟನೆಯನ್ನು ಕಟ್ಟಿದ ದೂರದರ್ಶಿ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಬಣ್ಣಿಸಿದರು.

ನಗರದಲ್ಲಿ ಬೆಂಗಳೂರು ಜಿಲ್ಲಾ ಘಟಕದ ನೂತನ ಕಚೇರಿ ಪೂಜೆ ಹಾಗೂ ಡಿ.ವಿ.ಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡಿ.ವಿ.ಜಿ ಅವರು ಅಂದು ಹಾಕಿಕೊಟ್ಟ ಅಡಿಪಾಯದ ಮೇಲೆ 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ' ಹೆಮ್ಮರವಾಗಿ ಬೆಳೆದಿದೆ.




ಸುಮಾರು 10,000 ಸದಸ್ಯರನ್ನು ಹೊಂದಿರುವ ಇದು ದೇಶದ ಅತಿದೊಡ್ಡ ಪತ್ರಕರ್ತ ಸಂಘಟನೆಗಳಲ್ಲಿ ಒಂದಾಗಿದೆ. ಹಿರಿಯ ಖಾದ್ರಿ ಶಾಮಣ್ಣ ಸಮಿತಿಯ ಶಿಫಾರಸಿನ ಮೇರೆಗೆ ಹುಬ್ಬಳ್ಳಿಯಲ್ಲಿ ನಡೆದ ಸಮ್ಮೇಳನದಲ್ಲಿ ಈ ಸಂಘಕ್ಕೆ ಮರುನಾಮಕರಣ ಮಾಡಲಾದ ಇತಿಹಾಸವನ್ನು ತಗಡೂರು ಸ್ಮರಿಸಿದರು.

ಕರ್ನಾಟಕ ಭೂ ಕಬಳಿಕೆ ನಿಷೇಧ ನ್ಯಾಯಾಲಯದ (ಕಂದಾಯ)ಸದಸ್ಯ ಕೆ.ಎಚ್. ಅಶ್ವತ್ಥನಾರಾಯಣ ಮಾತನಾಡಿ, ಡಿ.ವಿ.ಜಿ ಅವರು ಪ್ರೌಢಶಾಲೆವರೆಗೆ ಓದಿದ್ದರೂ, ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯಲ್ಲಿ ಅವರು ಹೊಂದಿದ್ದ ಪಾಂಡಿತ್ಯ ಅಪ್ರತಿಮವಾದುದು. ಅವರ "ಮಂಕುತಿಮ್ಮನ ಕಗ್ಗ" ಅಪ್ರತಿಮ ಕೃತಿಯು ಸಮಾಜದ ಪ್ರತಿಯೊಂದು ಸಮಸ್ಯೆಗೆ ಪರಿಹಾರ ನೀಡುವ ಶಕ್ತಿ ಹೊಂದಿವೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಮಾತನಾಡಿ, "ದೇಶಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಹೇಗೋ, ಪತ್ರಕರ್ತರು ಮತ್ತು ಸಾಮಾನ್ಯ ಜನರ ಬದುಕಿಗೆ ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ' ಸಂವಿಧಾನದಂತಿದೆ. ಡಿ.ವಿ.ಜಿ ಅವರು ಎಷ್ಟೇ ಬಡತನವಿದ್ದರೂ ಸರ್ಕಾರದ ಚೆಕ್‌ಗಳನ್ನು ನಗದೀಕರಿಸದೆ ಸ್ವಾಭಿಮಾನಿಯಾಗಿ ಬದುಕಿದ ಆದರ್ಶ ವ್ಯಕ್ತಿತ್ವದವರು," ಎಂದು ಕೊಂಡಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಜೆ.ಸಿ.ಲೋಕೇಶ್, ಹಾಗೂ ಬೆಂಗಳೂರು ನಗರ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಬೆಂಗಳೂರು ನಗರ ಜಿಲ್ಲೆ ಅಧ್ಯಕ್ಷರಾದ ಎಸ್.ಸೋಮಶೇಖರ ಗಾಂಧಿ ಸ್ವಾಗತ ಮಾಡಿದರು, ಬೆಂಗಳೂರು ನಗರ ಜಿಲ್ಲೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ರವೀಶ್ ವಂದನಾರ್ಪಣೆ ಮಾಡಿದರು.

# ಶುದ್ಧ ಕುಡಿಯುವ ನೀರು ಒದಗಿಸಿ: ಎಸ್.ಆರ್.ವಿಶ್ವನಾಥ್ ಆಗ್ರಹ

ಬೆಂಗಳೂರು

ಕೆ.ಸಿ.ವ್ಯಾಲಿ, ಹೆಚ್.ಎನ್.ವ್ಯಾಲಿ ಮತ್ತು ವೃಷಭಾವತಿ ಯೋಜನೆಗಳಡಿ ಹರಿದು ಬರುವ ನೀರು ಕಲುಷಿತಗೊಂಡಿದ್ದು ಕೋಲಾರ, ಚಿಕ್ಕಬಳ್ಳಾಪುರ ಭಾಗದಲ್ಲಿ ಬೆಳೆಯುವ ತರಕಾರಿ ವಿಷಪೂರಿತವಾಗುತ್ತಿದೆ. ರಾಜ್ಯ ಸರ್ಕಾರ ಈ ಭಾಗದಲ್ಲಿ ಶುದ್ಧ ಕುಡಿಯುವ ಮತ್ತು ಕೃಷಿಯೋಗ್ಯವಾದ ನೀರನ್ನು ಒದಗಿಸಬೇಕೆಂದು ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ವಿಧಾನಸಭಾ ಕಲಾಪದಲ್ಲಿ 9 ನೇ ದಿನವಾದ ಇಂದು ಪಾಲ್ಗೊಂಡು ಮಾತನಾಡಿದ ಅವರು, ಮೇಕೆದಾಟು ಯೋಜನೆಗೆ ತಮಿಳುನಾಡು ರಾಜ್ಯ ಕ್ಯಾತೆ ತೆಗೆದಿದೆ. ಹಾಲಿ ಇರುವ ಯೋಜನೆಗಳಡಿ ಬೆಂಗಳೂರಿನ ತ್ಯಾಜ್ಯ ನೀರೆಲ್ಲ ಬೆಂಗಳೂರು ಹೊರ ಜಿಲ್ಲೆಗಳಿಗೆ ಹರಿದು ಹೋಗುತ್ತಿದ್ದು ಈ ಹಿಂದೆ 1200 ಅಡಿ ಕೊಳಾಯಿ ಕೊರೆಸಿದರೂ ನೀರು ಬರುತ್ತಿರಲಿಲ್ಲ. ಇದೀಗ 400 ಅಡಿ ಕೊರೆಸಿದರೆ ಸಾಕು ನೀರು ಬರುತ್ತಿದೆ. ಇದೇ ನೀರನ್ನು ಬಳಸಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಪ್ರದೇಶದ ರೈತರು ಆಹಾರ ಧಾನ್ಯಗಳು ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಸಮೀಕ್ಷೆಗಳು ವರದಿ ಮಾಡಿರುವಂತೆ ಈ ಭಾಗದಲ್ಲಿ ಬೆಳೆಯುವ ತರಕಾರಿ, ಆಹಾರ ಧಾನ್ಯಗಳಲ್ಲಿ ವಿಷ ಸೇರಿದೆ. ಇದನ್ನು ಸೇವಿಸುತ್ತಿರುವ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ದೊಡ್ಡಬಳ್ಳಾಪುರ, ದಾಬಸ್ ಪೇಟೆ ಭಾಗದಲ್ಲಿ ಕೈಗಾರಿಕೆಗಳಿಗಾಗಿ ಸಾಕಷ್ಟು ಪ್ರಮಾಣದ ಭೂಸ್ವಾಧೀನವಾಗಿದ್ದಲ್ಲದೆ, ಕಾವೇರಿ ನೀರು ಪಡೆದುಕೊಳ್ಳಲು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಪೈಪ್ ಲೈನ್ ಮಾಡಿದ್ದಾರೆ. ಕೈಗಾರಿಕೆಗಳಿಗೆ ಕಾವೇರಿ ನೀರು ಕೊಡುವುದಾದರೆ ಜನರಿಗೆ ಕುಡಿಯಲು ಮತ್ತು ಕೃಷಿಗಾಗಿ ಕಾವೇರಿ ನೀರೇಕೆ ಕೊಡುತ್ತಿಲ್ಲ? ಎಂದು ಪ್ರಶ್ನಿಸಿದರು.

ಹೆಚ್.ಎನ್.ವ್ಯಾಲಿ ಮತ್ತು ಕೆ.ಸಿ.ವ್ಯಾಲಿ ಯೋಜನೆಯ ನೀರನ್ನು ತಕ್ಷಣ ಶುದ್ಧೀಕರಿಸುವ ಕೆಲಸವಾಗಬೇಕು. ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಈಗ ಬೆಳೆಯುತ್ತಿರುವ ತರಕಾರಿಯಲ್ಲಿ ಯಥೇಚ್ಛ ಪ್ರಮಾಣದ ರಾಸಾಯನಿಕ ಬೆರೆತ ವಿಷಕಾರಿ ವಸ್ತುಗಳಿವೆ ಎನ್ನುವುದು ವೈಜ್ಞಾನಿಕ ವರದಿಗಳಿಂದ ದೃಢಪಟ್ಟಿದೆ. ನಂದಿಬೆಟ್ಟ, ಚಿಕ್ಕಬಳ್ಳಾಪುರದ ಭಾಗದಿಂದ ನೈಸರ್ಗಿಕ ಶುದ್ಧ ಕುಡಿಯುವ ನೀರು ಪೂರೈಕೆಯಾದರೆ, ನಾವು ಮಾತ್ರ ಬೆಂಗಳೂರಿನ ತ್ಯಾಜ್ಯ ನೀರನ್ನು ಒದಗಿಸುತ್ತಿದ್ದೇವೆ. ಇಂತಹ ಯೋಜನೆಯಡಿ ಬರುವ ನೀರು ಅನ್ನೈಸರ್ಗಿಕವಾಗಿದ್ದು, ಇದನ್ನು ಯಾವುದೇ ಸರ್ಕಾರ ಪೂರೈಸಿದರೂ ತಪ್ಪೇ. ವರ್ತೂರು ಮತ್ತು ಬೆಳ್ಳಂದೂರು ಭಾಗದಲ್ಲಿ ಬೆಳೆಯುವ ತರಕಾರಿಯಲ್ಲೂ ವಿಷಕಾರಕ ಅಂಶಗಳಿವೆ. ಕೋಟ್ಯಾಂತರ ಜನರು ಈ ಭಾಗದಿಂದ ಬರುವ ವಿಷಕಾರಕ ತರಕಾರಿಯನ್ನು ಸೇವಿಸಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ವರ್ಷಪೂರ್ತಿ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಬಗೆಹರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ರಾಜ್ಯರಾಜಧಾನಿ ಬೆಂಗಳೂರಿನಲ್ಲಿ ಸಾಕಷ್ಟು ಅಪಾರ್ಟ್ಮೆಂಟ್‌ಗಳಿವೆ. ಇಂತಹ ಅಪಾರ್ಟ್ಮೆಂಟ್‌ಗಳಲ್ಲಿ ವಾಸ ಮಾಡುವ ಬಹುತೇಕರು ಐಟಿ, ಬಿಟಿ ಮತ್ತು ಇತರೆ ಉದ್ಯಮಗಳಲ್ಲಿ ಕೆಲಸ ಮಾಡುವವರೇ ಆಗಿರುತ್ತಾರೆ. ಕಾವೇರಿ ನೀರು ಪೂರೈಸಿ, ಕಸ ವಿಲೇವಾರಿ ಮಾಡುವ ಯೋಜನೆ ಜಾರಿಯಲ್ಲಿದೆ. ಅಪಾರ್ಟ್ಮೆಂಟ್ ವೆಲ್‌ಫೇರ್ ಅಸೋಷಿಯೇಷನ್ ಮತ್ತು ಅಪಾರ್ಟ್ಮೆಂಟ್



ಕೋ ಆಪರೇಟಿವ್ ಸೊಸೈಟಿಗಳಿವೆ. ಅಪಾರ್ಟ್ಮೆಂಟ್ ಗಳಲ್ಲಿ ವಾಸ ಮಾಡುವವರಿಗೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಅನುದಾನ ಒದಗಿಸಬೇಕು. ಕಾಂಗ್ರೆಸ್ ಪಕ್ಷದವರಿಗೆ ಅಪಾರ್ಟ್ಮೆಂಟ್ ವಾಸಿಗಳೆಂದರೆ ಅಸಹ್ಯ ಪಡುತ್ತಿದ್ದಾರೆ. ಸ್ವತಃ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ಸಭೆ ನಡೆಸಿ ಅಪಾರ್ಟ್ಮೆಂಟ್ ನಲ್ಲಿ ವಾಸ ಮಾಡುವವರು ಮತದಾನ ಮಾಡುವುದಿಲ್ಲವೆಂದು ಹೇಳಿದ್ದಾರೆ. ಸರ್ಕಾರ ನಡೆಸುವವರು ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಲ್ಲವೇ? ಎಂದು ಪ್ರಶ್ನಿಸಿದ ಎಸ್.ಆರ್.ವಿಶ್ವನಾಥ್ ಅವರು, ಅಲ್ಲಿನ ಕಸ ವಿಲೇವಾರಿಗೆ ಕೆ.ಜಿ.ಯೊಂದಕ್ಕೆ ರೂ.12 ನಿಗದಿಮಾಡಿದ್ದಕ್ಕೆ ಅಚ್ಚರಿ ವ್ಯಕ್ತಪಡಿಸಿದರು.

> ರಾಜ್ಯರಾಜಧಾನಿ ಬೆಂಗಳೂರಿನಲ್ಲಿ ಸಾಕಷ್ಟು ಅಪಾರ್ಟ್ಮೆಂಟ್‌ಗಳಿವೆ. ಇಂತಹ ಅಪಾರ್ಟ್ಮೆಂಟ್‌ಗಳಲ್ಲಿ ವಾಸ ಮಾಡುವ ಬಹುತೇಕರು ಐಟಿ, ಬಿಟಿ ಮತ್ತು ಇತರೆ ಉದ್ಯಮಗಳಲ್ಲಿ ಕೆಲಸ ಮಾಡುವವರೇ ಆಗಿರುತ್ತಾರೆ. ಕಾವೇರಿ ನೀರು ಪೂರೈಸಿ, ಕಸ ವಿಲೇವಾರಿ ಮಾಡುವ ಯೋಜನೆ ಜಾರಿಯಲ್ಲಿದೆ. ಅಪಾರ್ಟ್ಮೆಂಟ್ ವೆಲ್‌ಫೇರ್ ಅಸೋಷಿಯೇಷನ್ ಮತ್ತು ಅಪಾರ್ಟ್ಮೆಂಟ್ ಕೋ ಆಪರೇಟಿವ್ ಸೊಸೈಟಿಗಳಿವೆ. ಅಪಾರ್ಟ್ಮೆಂಟ್ ಗಳಲ್ಲಿ ವಾಸ ಮಾಡುವವರಿಗೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಅನುದಾನ ಒದಗಿಸಬೇಕು. ಕಾಂಗ್ರೆಸ್ ಪಕ್ಷದವರಿಗೆ ಅಪಾರ್ಟ್ಮೆಂಟ್ ವಾಸಿಗಳೆಂದರೆ ಅಸಹ್ಯ ಪಡುತ್ತಿದ್ದಾರೆ.

ಬೆಂಗಳೂರಿನಲ್ಲಿ ಕಸ, ತ್ಯಾಜ್ಯದ ವಿಚಾರ ಹೇಳುವ ಹಾಗಿಲ್ಲ. ಇದು ಅಂತಾರಾಷ್ಟ್ರೀಯ ಮಟ್ಟದ ಸುದ್ದಿಯಾಗಿದೆ. ಆದರೂ ತ್ಯಾಜ್ಯ ವಿಲೇವಾರಿಯಲ್ಲಿ ನಿರೀಕ್ಷಿತ ಮಟ್ಟಿಗೆ ಕೆಲಸವಾಗುತ್ತಿಲ್ಲ. ಇನ್ನು ಬೆಂಗಳೂರು ಬೃಹತ್ ನಗರವಾಗಿದ್ದರಿಂದ ಬೃಹತ್ ಸಂಚಾರ ದಟ್ಟಣೆಯೂ ಅಧಿಕವಾಗಿದೆ. ಗೃಹ ಸಚಿವ ಪರಮೇಶ್ವರ್ ಅವರಿಗೆ 3ನೇ ಕಣ್ಣಿದೆ. ಬಹುಶಃ ಎಲ್ಲರೂ ಸೇರಿ ಆ ಮೂರನೇ ಕಣ್ಣನ್ನು ಆಪರೇಷನ್ ಮಾಡಿದ್ದಾರೆ ಎಂದು ಹಾಸ್ಯ ವ್ಯಕ್ತಪಡಿಸಿದ ಅವರು, ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ವಾಹನ ಸವಾರರಿಗೆ ಪೊಲೀಸರ ಬಗ್ಗೆ ಭಯವೇ ಇಲ್ಲದಂತಾಗಿದೆ. ಎಗ್ಗಾದಿಗ್ಗಾ ವಾಹನಗಳನ್ನು ಓಡಿಸುತ್ತಿದ್ದಾರೆ. ಸಂಚಾರಿ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲ. ರಾಜ್ಯ ಸರ್ಕಾರ ಪೊಲೀಸರಿಗೆ ಸಂಚಾರಿ ದಟ್ಟಣೆ ಕಡಿಮೆಗೊಳಿಸಲು ಸ್ವತಂತ್ರ ಅಧಿಕಾರ ನೀಡಬೇಕು. ಬೆಂಗಳೂರಿನಲ್ಲಿ ಎಲ್ಲಿ ಬೇಕೆಂದರೆ ಅಲ್ಲಿ ಮೋಟಾರ್ ಬೈಕ್ ಗಳನ್ನು ನಿಲ್ಲಿಸುತ್ತಿದ್ದಾರೆ. ಯಾರಿಗೂ ಸಂಚಾರಿ ನಿಯಮ ಪಾಲಿಸುವ ದರ್ದು ಇಲ್ಲದಂತಾಗಿದೆ. ಈ ಹಿಂದೆ ಸಂಚಾರಿ ವಿಭಾಗದಲ್ಲಿ ದಕ್ಷ ಪೊಲೀಸ್ ಅಧಿಕಾರಿ ಸಲೀಂ ಅಲಿ ಅವರು ಇದ್ದಾಗ ಸಂಚಾರಿ ನಿಯಮಕ್ಕೆ ಒಂದು ಕಡಿವಾಣ ಇತ್ತು. ಎಲ್ಲೆಡೆ ಸಂಚಾರಿ ಸುಗಮತೆ ಗೋಚರಿಸಿತ್ತು. ವಾಹನ ಸವಾರರನ್ನು ತಹಬದಿಗೆ ತಂದಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು ಬೃಹತ್ ನಗರ ನಿರ್ವಹಣೆಗೆಂದು ಐದು ವಿಭಾಗಗಳನ್ನಾಗಿ ಮಾಡಲಾಗಿದೆ. ಅದರಂತೆ ಸಂಚಾರಿ ದಟ್ಟಣೆ ನಿರ್ವಹಣೆಗೂ ನಾಲ್ಕು ವಿಭಾಗಗಳನ್ನಾಗಿ ರೂಪಿಸಬೇಕು.

ಬೆಂಗಳೂರಿನಲ್ಲಿ ಪೊಲೀಸರ ಬಗ್ಗೆ ಭಯ ಇಲ್ಲದಂತಾಗಿದೆ. ಇದರಿಂದಾಗಿ ಕ್ರೈಂ ರೇಟ್ ಹೆಚ್ಚುತ್ತಿದೆ. ಇದನ್ನು ಕಂಟ್ರೋಲ್ ಮಾಡಲು ವಿಭಾಗವಾರು ಕಚೇರಿಗಳನ್ನು ತೆರೆಯಬೇಕು. ಸಂಚಾರಿ ದಟ್ಟಣೆ ನಿರ್ವಹಣೆಗೆ ಮತ್ತು ಸುಗಮ ಸಂಚಾರಕ್ಕೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಪೊಲೀಸರಿಗೆ ಸ್ವತಂತ್ರ ಅಧಿಕಾರ ಕಲ್ಪಿಸಬೇಕೆಂದು ಹೇಳಿದರು. ಇದೂ ಅಲ್ಲದೇ ಬೆಂಗಳೂರು ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರ ಮಂಡಿಸಿರುವ ಅನೇಕ ಯೋಜನೆಗಳ ಹೆಸರು ಬಳಸಿ, ಸರ್ಕಾರಕ್ಕೆ ಕಣ್ತೆರೆಸುವ ವಿಚಾರಗಳನ್ನು ಮಂಡಿಸಿದರು.

ನಾವು ವಿರೋಧ ಮಾಡುವುದಕ್ಕೋಸ್ಕರ ವಿರೋಧ ಮಾಡುತ್ತಿಲ್ಲ. ಬೆಂಗಳೂರು ನಗರಾಭಿವೃದ್ಧಿಗೆ ರಾಜ್ಯ ಸರ್ಕಾರ ಗಮನಹರಿಸಬೇಕೆ ವಿನಾ ಸ್ಥಳೀಯ ಆಡಳಿತದಲ್ಲಿ ಮೂಗು ತೂರಿಸಬಾರದು. ಸಂವಿಧಾನದ ಪರಿಚ್ಛೇದ 73 ಮತ್ತು 74ರಲ್ಲಿ ಸ್ಥಳೀಯ ಆಡಳಿತಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಾಗಬೇಕು. ಬೆಂಗಳೂರನ್ನು ಕಡೆಗಣಿಸಿದರೆ ಬೆಂಗಳೂರು ಖಂಡಿತ ಶುದ್ಧಿಏ ಆಗಲು ಸಾಧ್ಯವಿಲ್ಲ. ನಿರ್ಲಕ್ಷ್ಯವಹಿಸಿದರೆ ಬೆಂಗಳೂರು ತೆರೆದ ಹೃದಯದ ಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ಇದು ಕೇವಲ ನನ್ನೊಬ್ಬನಿಗೆ ಸೇರಿದ್ದಲ್ಲ. ಇದು ರಾಜ್ಯದ 224 ಕ್ಷೇತ್ರದ ಶಾಸಕರಿಗೂ ಸೇರಿದ ಊರಾಗಿದೆ. ಟನಲ್ ಗಳು, ಸೇತುವೆಗಳು, ಫ್ಲೈ ಓವರ್, ಡಬ್ಬಲ್ ಡೆಕ್ಕರ್ ಇತ್ಯಾದಿಗಳನ್ನು ಮಾಡುವ ಘೋಷಣೆಯನ್ನು ಬಜೆಟ್ ನಲ್ಲಿ ಮಂಡಿಸಿದ್ದೀರಿ. ಇದು ಕಿವಿಗೆ ಹೂವು ಇಡುವ ಕಾರ್ಯಕ್ರಮವೆಂದು ಛೇಡಿಸಿದ ಅವರು, ಮೊದಲು ಬೆಂಗಳೂರಿನ ಗುಂಡಿಗಳನ್ನು ಮುಚ್ಚಲು ಹಣ ನೀಡಿ. ಉದ್ಯಾನವನದಲ್ಲಿ ಮಕ್ಕಳು ಮತ್ತು ಯುವಕರಿಗಾಗಿ ಅಳವಡಿಸಿದ್ದ ಆಟೋಟಗಳು, ದೈಹಿಕ ಕಸರತ್ತು ನಡೆಸುವ ಉಪಕರಣಗಳು ದುಃಸ್ಥಿತಿ ತಲುಪಿದ್ದು ಅವುಗಳನ್ನು ಬದಲಾಯಿಸಿ. ಉದ್ಯಾನವನಗಳ ನಿರ್ವಹಣೆಗೆ ಹಣ ಒದಗಿಸಿ. ತುಮಕೂರು ರಸ್ತೆ, ಸರ್ಜಾಪುರ, ಹೆಬ್ಬಾಳ್, ಮೇಖ್ರಿ ಸರ್ಕಲ್ ಇನ್ನೂ ಅನೇಕ ಕಡೆಗೆ ರಸ್ತೆ ಅಭಿವೃದ್ಧಿ, ಮೆಟ್ರೋ ನಿರ್ಮಾಣ ಇನ್ನೂ ಅನೇಕ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ಯೋಜನೆ ರೂಪಿಸಿದ್ದೀರಿ.

ಇವುಗಳನ್ನೆಲ್ಲ ನಿಗದಿಯೊಳಗೆ ಪೂರೈಸುವ ಅಥವಾ ಕಾರ್ಯರೂಪಕ್ಕೆ ಬರುವ ಅನುಮಾನ ವ್ಯಕ್ತಪಡಿಸಿದರು.

ಭಾರತ ಸಾರಥಿ
19/03/2026
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಹಬ್ಬದ ವೇಳೆ ಅಕ್ರಮ ಗೋಹತ್ಯೆ ತಡೆಗೆ ಆಗ್ರಹ: ಹಿಂದೂ ಸಂಘಟನೆಗಳ ಮನವಿ

ಬೆಂಗಳೂರು

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಕೆಲವು ಹಬ್ಬಗಳ ಸಂದರ್ಭದಲ್ಲಿ ಅಕ್ರಮವಾಗಿ ಗೋಸಾಗಾಟ ಮತ್ತು ಗೋಹತ್ಯೆ ನಡೆಯುತ್ತಿದೆ. ಇದನ್ನು ತಡೆಯಲು ಸರ್ಕಾರ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಗೃಹ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಯೋಜಕ ಮೋಹನ್ ಗೌಡ ಅವರು,



"ಹಿಂದೂ ಪರಂಪರೆಯಲ್ಲಿ ಹಸುವನ್ನು ಗೋಮಾತೆ ಎಂದು ಪೂಜಿಸಲಾಗುತ್ತದೆ. ಭಗವಾನ್ ಶ್ರೀಕೃಷ್ಣನು ಗೋರಕ್ಷಣೆಗೆ ಅಪಾರ ಮಹತ್ವ ನೀಡಿದ್ದಾನೆ. ಗೋವುಗಳು ಕೇವಲ ಧಾರ್ಮಿಕ ಸಂಕೇತ ಮಾತ್ರವಲ್ಲದೆ, ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿವೆ," ಎಂದರು.

ಸಾರ್ವಜನಿಕ ಆರೋಗ್ಯದ ಆತಂಕ: "ರಂಜಾನ್ ಸೇರಿದಂತೆ ಪ್ರಮುಖ ಹಬ್ಬಗಳ ಸಮಯದಲ್ಲಿ ರಾಜ್ಯದ ವಿವಿಧೆಡೆ ಅಕ್ರಮ ಗೋಸಾಗಾಟ ನಡೆಯುತ್ತಿರುವ ಬಗ್ಗೆ ವರದಿಗಳು ಲಭ್ಯವಾಗುತ್ತಿವೆ. ಕೆಲವು ಕಡೆಗಳಲ್ಲಿ ರಸ್ತೆ ಬದಿಯಲ್ಲೇ ಪ್ರಾಣಿ ವಧೆ ಮಾಡಲಾಗುತ್ತಿದ್ದು, ಇದರಿಂದ ಸಾರ್ವಜನಿಕ ಆರೋಗ್ಯ ಮತ್ತು ಪರಿಸರಕ್ಕೆ ಹಾನಿಯಾಗುತ್ತಿದೆ. ಜೊತೆಗೆ ಇದು ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ," ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಸರ್ಕಾರದ ಗಮನಕ್ಕೆ ಐದು ಪ್ರಮುಖ ಅಂಶಗಳು:

ಅಕ್ರಮ ತಡೆ: ಗಡಿ ಭಾಗಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಅಕ್ರಮ ಗೋಸಾಗಾಟ ಪತ್ತೆ ಹಚ್ಚಲು ವಿಶೇಷ ತಂಡಗಳನ್ನು ರಚಿಸಬೇಕು.

ಕಾನೂನು ಪಾಲನೆ: ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಜ್ಯಾದ್ಯಂತ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

ಸಾರ್ವಜನಿಕ ಸ್ಥಳಗಳ ಮೇಲ್ವಿಚಾರಣೆ: ರಸ್ತೆ ಬದಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿ ವಧೆ ನಡೆಯದಂತೆ ಪೊಲೀಸರು ನಿಗಾ ವಹಿಸಬೇಕು.

ಜಾಗೃತಿ: ಅಕ್ರಮ ಗೋಹತ್ಯೆ ತಡೆಗೆ ಸ್ಥಳೀಯ ಆಡಳಿತಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು.

ಈ ಸಂದರ್ಭದಲ್ಲಿ ಶ್ರೀರಾಮ ಸೇನೆಯ ಸುಂದ್ರೇಶ್ ನರ್ಗಲ್, ಹಿಂದೂ ಮುಖಂಡರಾದ ಸಂತೋಷ್ ಕರ್ತಾಳ್, ನ್ಯಾಯವಾದಿ ತ್ಯಾಗರಾಜ್, ಡಾ. ನಾಗೇಂದ್ರಪ್ಪ ಸೇರಿದಂತೆ ಹಲವು ಹಿಂದೂ ಸಂಘಟನೆಗಳ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸರ್ಕಾರಿ ಸ್ವತ್ತು ದುರುಪಯೋಗ; ಅಮಾನತ್ತಿಗೆ ಆಗ್ರಹಿಸಿ ಮನವಿ



ಬೇತಮಂಗಲ

ಬಂಗಾರಪೇಟೆ-ಕೆಜಿಎಫ್ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿನಿಲಯಗಳಲ್ಲಿ ಮಕ್ಕಳಿಗೆ ಸೇರಬೇಕಾದ ಮೂಲಭೂತ ಸೌಕರ್ಯಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಅಂಬೇಡ್ಕರ್ ವೀರಸೇನೆ ಗಂಭೀರವಾಗಿ ಆರೋಪಿಸಿದೆ.

ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಶಿವಕುಮಾರಿ ಅವರಿಗೆ ಈ ಕುರಿತು ಮನವಿ ಸಲ್ಲಿಸಿದ ಸಂಘಟನೆಯ ಪದಾಧಿಕಾರಿಗಳು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದರು.

"ಅಂಬೇಡ್ಕರ್ ಬಾಲಕಿಯರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯದ ವಾರ್ಡನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಶಿವಲೀಲ ಅವರು, ನಿಲಯದ ಬೆಡ್‌ಗಳು ಮತ್ತು ಫ್ಯಾನ್‌ಗಳನ್ನು ಯಾವುದೇ ಅನುಮತಿ ಇಲ್ಲದೆ ಕಾಳಸಂತೆಯಲ್ಲಿ ಮಾರಾಟ ಮಾಡಿದ್ದಾರೆ. ಈ ಅಕ್ರಮದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೀಡಿಯೋ ಸಮೇತ ಹರಿದಾಡುತ್ತಿವೆ. ಸರ್ಕಾರದ ಸ್ವತ್ತುಗಳನ್ನು ಎತ್ತುವಳಿ ಮಾಡಿ ದುರುಪಯೋಗಪಡಿಸಿಕೊಳ್ಳಲಾಗಿದೆ," ಎಂದು ಸಂಸ್ಥಾಪಕ ಅಧ್ಯಕ್ಷ ಬಟ್ರಕುಪ್ಪ ಅರುಣ್ ಕಿಡಿಕಾರಿದರು.

ವಿದ್ಯಾರ್ಥಿನಿಲಯದ ಅಡುಗೆಯವರಾದ ಮಹೇಶ್ ಎಂಬುವವರು ತಾವು 'ಪ್ರಭಾರ ವಾರ್ಡನ್' ಎಂದು ಪತ್ರದಲ್ಲಿ ಸಹಿ ಮಾಡಿ ನಿಲಯದ ವಸ್ತುಗಳನ್ನು ಸಾಗಿಸಿದ್ದಾರೆ. "ಅಡುಗೆಯವರಿಗೆ ವಾರ್ಡನ್ ಆಗಿ ಮುಂಬಡ್ತಿ ನೀಡಿದವರು ಯಾರು? ಅಕ್ರಮ ಬಯಲಾದ ತಕ್ಷಣ ಶಿವಲೀಲ ಅವರನ್ನು ಕೇವಲ ವರ್ಗಾವಣೆ ಮಾಡಿ ಇಲಾಖೆ ಕೈತೊಳೆದುಕೊಂಡಿರುವುದು ಸರಿಯಲ್ಲ," ಎಂದು ಸಂಘಟನೆ ಪ್ರಶ್ನಿಸಿದೆ.

ಸರ್ಕಾರಿ ಕೆಲಸ ದುರುಪಯೋಗಪಡಿಸಿಕೊಂಡಿರುವ ವಾರ್ಡನ್ ಶಿವಲೀಲ ಮತ್ತು ಅಡುಗೆಯವ ಮಹೇಶ್ ಅವರನ್ನು ತಕ್ಷಣವೇ ಕೆಲಸದಿಂದ ವಜಾ ಮಾಡಬೇಕು. ಹತ್ತು ದಿನಗಳೊಳಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ವೀರಸೇನೆ ಎಚ್ಚರಿಸಿದೆ.

ಮನವಿ ಸಲ್ಲಿಕೆ ಸಂದರ್ಭದಲ್ಲಿ ಮುಖಂಡರಾದ ಅಂಬರೀಶ್, ಸುಮಂತ್, ರವಿಕುಮಾರ್ ಉಪಸ್ಥಿತರಿದ್ದರು.

# ನಿರ್ಭೀತಿಯಿಂದ ಪರೀಕ್ಷೆ ಬರೆಯಿರಿ: ಡಿಡಿಪಿಐ ಹಾರೈಕೆ

ವಿಜಯಪುರ

ಇಂದಿನಿಂದ ಪ್ರಾರಂಭವಾಗಲಿರುವ 2026-27ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ್ಯಂತ ಶಿಕ್ಷಣ ಇಲಾಖೆಯು ಸರ್ವಸನ್ನದ್ಧವಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಡಿಡಿಪಿಐ) ಬೈಲಾಂಜಿನಪ್ಪ ತಿಳಿಸಿದ್ದಾರೆ.



ಜಿಲ್ಲೆಯಲ್ಲಿ ಒಟ್ಟು 278 ಪ್ರೌಢಶಾಲೆಗಳಿದ್ದು, ಪರೀಕ್ಷೆಗಾಗಿ 52 ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಒಟ್ಟು 13,446 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ತಾಲೂಕುವಾರು ಪರೀಕ್ಷಾ ಕೇಂದ್ರಗಳು: ದೇವನಹಳ್ಳಿ 13 ಕೇಂದ್ರಗಳು, ದೊಡ್ಡಬಳ್ಳಾಪುರ 14 ಕೇಂದ್ರಗಳು, ನೆಲಮಂಗಲ 13 ಕೇಂದ್ರಗಳು, ಹೊಸಕೋಟೆ 12 ಕೇಂದ್ರಗಳು ನೋಂದಾಯಿಸಿಕೊಂಡಿದ್ದಾರೆ.

ಹೈಟೆಕ್ ಕಣ್ಗಾವಲು ಮತ್ತು ಬಿಗಿ ಭದ್ರತೆ: ಪರೀಕ್ಷೆಯಲ್ಲಿ ಅಕ್ರಮ ನಡೆಯದಂತೆ ತಡೆಯಲು ಪ್ರತಿಯೊಂದು ಪರೀಕ್ಷಾ ಕೊಠಡಿಯಲ್ಲೂ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ವಿಶೇಷವಾಗಿ ಜಿಲ್ಲಾಧಿಕಾರಿಗಳ ಕಚೇರಿಯಿಂದಲೇ 'ವೆಬ್ ಕಾಸ್ಟಿಂಗ್' ಮೂಲಕ ಪ್ರತಿ 4-5 ಕೊಠಡಿಗಳ ಮೇಲೆ ನಿಗಾ ಇಡಲು ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತ 144ನೇ ವಿಧಿಯನ್ವಯ ನಿಷೇಧಾಜ್ಞೆ ಜಾರಿಯಲ್ಲಿರಲಿದ್ದು, ಹತ್ತಿರದ ಎಲ್ಲಾ ಜೆರಾಕ್ಸ್ ಅಂಗಡಿಗಳನ್ನು ಕಡ್ಡಾಯವಾಗಿ ಮುಚ್ಚಲು ಆದೇಶಿಸಲಾಗಿದೆ.

ಪರೀಕ್ಷಾ ನಿಯಮಗಳು:

ಮೊಬೈಲ್ ನಿಷೇಧ: ಕಸ್ಟೋಡಿಯನ್ ಹೊರತುಪಡಿಸಿ ಉಳಿದ ಯಾವುದೇ ಸಿಬ್ಬಂದಿ ಅಥವಾ ವಿದ್ಯಾರ್ಥಿಗಳಿಗೆ ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

ಶಿಕ್ಷಕರ ನೇಮಕ: ಸರ್ಕಾರಿ ಶಾಲಾ ಶಿಕ್ಷಕರನ್ನು ಮಾತ್ರ ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದ್ದು, ಖಾಸಗಿ ಶಿಕ್ಷಕರಿಗೆ ಅವಕಾಶ ನೀಡಿಲ್ಲ. ಅಷ್ಟೇ ಅಲ್ಲದೆ, ಆಯಾ ವಿಷಯದ ಶಿಕ್ಷಕರನ್ನು ಅದೇ ವಿಷಯದ ಪರೀಕ್ಷಾ ದಿನದಂದು ನೇಮಕ ಮಾಡದಂತೆ ಕ್ರಮ ವಹಿಸಲಾಗಿದೆ.

ಜಾಗೃತ ದಳ: ಅಕ್ರಮ ತಡೆಯಲು ಸ್ಥಾನಿಕ ಹಾಗೂ ಮೂರು ಸಂಚಾರಿ ಜಾಗೃತ ದಳಗಳನ್ನು ರಚಿಸಲಾಗಿದೆ.

ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯ: ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷೆ ಬರೆಯಲು ಪೂರಕ ವಾತಾವರಣ ಕಲ್ಪಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಬೆಳಕು, ಶೌಚಾಲಯ ಹಾಗೂ ಸುಸಜ್ಜಿತ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಬೆಸ್ಕಾಂ, ಪೊಲೀಸ್ ಇಲಾಖೆ, ಆರ್.ಟಿ.ಓ ಮತ್ತು ಖಜಾನೆ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಲಿದ್ದಾರೆ ಎಂದು ಡಿಡಿಪಿಐ ಮಾಹಿತಿ ನೀಡಿದ್ದಾರೆ.

# 2.5 ಲಕ್ಷ ರೂ. ಮೌಲ್ಯದ 4 ಕೆಜಿ ಗಾಂಜಾ ವಶ: ಆರೋಪಿ ಬಂಧನ

ಬಂಗಾರಪೇಟೆ

ಪಟ್ಟಣದ ದೇಶಿಹಳ್ಳಿ ರೈಲ್ವೆ ಗೇಟ್ ಬಳಿ ಮಾದಕ ವಸ್ತು ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಬಿಹಾರ ಮೂಲದ ವ್ಯಕ್ತಿಯನ್ನು ಬಂಗಾರಪೇಟೆ ಪೊಲೀಸರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಮಾಲು ಸಮೇತ ಬಂಧಿಸಿದ್ದಾರೆ.



ಬಂಧಿತ ಆರೋಪಿಯನ್ನು ಬಿಹಾರ ರಾಜ್ಯದ ಮಧುಬನಿ ಜಿಲ್ಲೆಯ ಮುಕೇಶ್ ಕುಮಾರ್ ಸಿಂಗ್ (24) ಎಂದು ಗುರುತಿಸಲಾಗಿದೆ. ಈತನಿಂದ ಸುಮಾರು 2.5 ಲಕ್ಷ ರೂಪಾಯಿ ಮೌಲ್ಯದ 4.160 ಕೆಜಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

ದೇಶಿಹಳ್ಳಿಯ ಬಂಗಾರಪೇಟೆ-ಮಾರಿಕುಪ್ಪಂ ರೈಲ್ವೆ ಗೇಟ್ ಸಮೀಪವಿರುವ ಶ್ರೀ ಆಂಜನೇಯಸ್ವಾಮಿ ದೇವಾಲಯದ ಬಳಿ ವ್ಯಕ್ತಿಯೊಬ್ಬ ಗಾಂಜಾ ಮಾರಾಟಕ್ಕಾಗಿ ಗಿರಾಕಿಗಳಿಗಾಗಿ ಕಾಯುತ್ತಿದ್ದಾನೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ಲಭಿಸಿತ್ತು. ಕೆಜಿಎಫ್ ಜಿಲ್ಲಾ ಪೊಲೀಸ್ ಡಿವೈಎಸ್‌ಪಿ ವಿ. ಲಕ್ಷ್ಮಯ್ಯ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ತಂಡವು ಆರೋಪಿಯನ್ನು ರೆಡ್ ಹ್ಯಾಂಡ್ ಆಗಿ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ತಹಸೀಲ್ದಾರ್ ಕೆ.ಎನ್. ಸುಜಾತ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಸಿ. ರವಿಕುಮಾರ್ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ನರಸಿಂಗ್, ಕಂದಾಯ ನಿರೀಕ್ಷಕ ಅಜಯ್, ಗ್ರಾಮ ಆಡಳಿತಾಧಿಕಾರಿ ಅಮರೇಶ್ ಹಾಗೂ ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು. ಮಾದಕ ವ್ಯಸನದ ವಿರುದ್ಧ ಕ್ರಮ ಕೈಗೊಂಡ ತಂಡದ ಕಾರ್ಯದಕ್ಷತೆಯನ್ನು ಕೆಜಿಎಫ್ ಎಸ್ಪಿ ಶಿವಾಂಶು ರಜಪೂತ್ ಶ್ಲಾಘಿಸಿದ್ದಾರೆ.

# ಎನ್‌ಡಿಎ ವಿರುದ್ಧ ಬ್ಲಾಕ್ ಕಾಂಗ್ರೆಸ್ ವಾಗ್ದಾಳಿ



ಕುಣಿಗಲ್

ತಾಲೂಕಿನ ಸಹಕಾರ ಕ್ಷೇತ್ರವು ದಶಕಗಳಿಂದ ಒಂದು ಕುಟುಂಬದ ಹಿಡಿತದಲ್ಲಿದ್ದು, ಅಧಿಕಾರ ಕಳೆದುಕೊಳ್ಳುವ ಭೀತಿಯಿಂದ ಬಿಜೆಪಿ-ಜೆಡಿಎಸ್ (ಎನ್‌ಡಿಎ) ಮೈತ್ರಿಕೂಟದವರು ಅಧಿಕಾರಿಗಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಣ್ಣ ಗೌಡ ಆರೋಪಿಸಿದ್ದಾರೆ.

ಪಟ್ಟಣದ ಶಾಸಕರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಡಿಎ ಮೈತ್ರಿಕೂಟದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

40 ವರ್ಷಗಳ ಕುಟುಂಬ ರಾಜಕಾರಣ: "ತಾಲೂಕಿನ ಪಿಎಲ್‌ಡಿ ಬ್ಯಾಂಕ್, ಟಿಎಪಿಸಿಎಂಎಸ್, ಹಾಲು ಒಕ್ಕೂಟ ಹಾಗೂ ವಿಎಸ್‌ಎಸ್‌ಎನ್‌ಗಳಂತಹ ಪ್ರಮುಖ ಸಹಕಾರ ಸಂಸ್ಥೆಗಳು ಕಳೆದ 40 ವರ್ಷಗಳಿಂದ ಒಂದೇ ಕುಟುಂಬದ ಹಿಡಿತದಲ್ಲಿವೆ. ಈ ಹಿಂದೆ ಜೆಡಿಎಸ್ ಪಕ್ಷವು ದೌರ್ಜನ್ಯ ಮತ್ತು ದಬ್ಬಾಳಿಕೆಯ ಮೂಲಕ ಈ ಸಂಸ್ಥೆಗಳನ್ನು ತನ್ನ ವಶದಲ್ಲಿರಿಸಿಕೊಂಡಿತ್ತು. ಈಗ ಶಾಸಕ ಡಾ. ರಂಗನಾಥ್ ಅವರು ಸಹಕಾರ ಕ್ಷೇತ್ರವನ್ನು ಕಾಂಗ್ರೆಸ್ ತೆಕ್ಕೆಗೆ ತರಲು ಪ್ರಯತ್ನಿಸುತ್ತಿರುವುದನ್ನು ಕಂಡು ಹತಾಶರಾಗಿರುವ ವಿರೋಧ ಪಕ್ಷದವರು ಗುಂಡಾಗಿರಿ ನಡೆಸುತ್ತಿದ್ದಾರೆ," ಎಂದು ದೂರಿದರು.

ಅಧಿಕಾರಿಗಳ ಮೇಲೆ ಹಲ್ಲೆ ಆರೋಪ: ಸಂತೆ ಮಾವತ್ತೂರು ವಿಎಸ್‌ಎಸ್‌ಎನ್ ಚುನಾವಣೆ ಸಂದರ್ಭದಲ್ಲಿ ಎನ್‌ಡಿಎ ಕಾರ್ಯಕರ್ತರು ಅಧಿಕಾರಿಗಳ ಮೇಲೆ ಇಲ್ಲಸಲ್ಲದ ಆರೋಪ ಮಾಡಿ, ಹಲ್ಲೆ ನಡೆಸಿದ್ದಾರೆ. ಚುನಾವಣಾ ನಿಯಮಗಳನ್ನು ಗಾಳಿಗೆ ತೂರಿ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. "ಕಾಂಗ್ರೆಸ್‌ನವರು ನಕಲಿ ಮತಪತ್ರ ತಂದಿದ್ದಾರೆ ಎಂದು ಸುಳ್ಳು ಹರಡಲಾಗುತ್ತಿದೆ. ಈ ಬಗ್ಗೆ ಸಮಗ್ರ ತನಿಖೆಯಾಗಲಿ, ಸತ್ಯಾಂಶ ಏನೆಂಬುದು ಜನರಿಗೆ ತಿಳಿಯಲಿ," ಎಂದು ಅವರು ಸವಾಲು ಹಾಕಿದರು.

ವಿರೋಧ ಪಕ್ಷಗಳಿಗೆ ಎಚ್ಚರಿಕೆ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಸಿ.ಎಚ್. ರವಿಕುಮಾರ್, "ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಲು ಅಡ್ಡಿಪಡಿಸುತ್ತಿರುವ ಮೈತ್ರಿಕೂಟದವರು ಸುಳ್ಳು ದೂರು ನೀಡುವುದನ್ನು ನಿಲ್ಲಿಸಬೇಕು," ಎಂದರು. ಮತ್ತೊಬ್ಬ ಮುಖಂಡ ಬೇಗೂರು ಮೂರ್ತಿ ಮಾತನಾಡಿ, "ಹೊಡಿರಿ, ಬಡಿರಿ ಎಂಬ ಸಂಸ್ಕೃತಿಯನ್ನು ಬಿಡದಿದ್ದರೆ ಚುನಾವಣಾ ಅಧಪತನಕ್ಕೆ ನೀವೇ ಹೊಣೆಯಾಗುತ್ತೀರಿ," ಎಂದು ಎಚ್ಚರಿಸಿದರು.

ವಿರೋಧ ಪಕ್ಷಗಳಿಗೆ ಎಚ್ಚರಿಕೆ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಸಿ.ಎಚ್. ರವಿಕುಮಾರ್, "ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಲು ಅಡ್ಡಿಪಡಿಸುತ್ತಿರುವ ಮೈತ್ರಿಕೂಟದವರು ಸುಳ್ಳು ದೂರು ನೀಡುವುದನ್ನು ನಿಲ್ಲಿಸಬೇಕು," ಎಂದರು. ಮತ್ತೊಬ್ಬ ಮುಖಂಡ ಬೇಗೂರು ಮೂರ್ತಿ ಮಾತನಾಡಿ, "ಹೊಡಿರಿ, ಬಡಿರಿ ಎಂಬ ಸಂಸ್ಕೃತಿಯನ್ನು ಬಿಡದಿದ್ದರೆ ಚುನಾವಣಾ ಅಧಪತನಕ್ಕೆ ನೀವೇ ಹೊಣೆಯಾಗುತ್ತೀರಿ," ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಮೋದೂರು ಸುರೇಶ್, ಜಿಲ್ಲಾ ರೈತ ಪರ್ವದ ಅಧ್ಯಕ್ಷ ಮುನಿಯಪ್ಪ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

# ಅರ್ಧದಿನ ಕಚೇರಿ, ಅರ್ಧದಿನ ಫೀಲ್ಡ್‌ಗಿಳಿಯಿರಿ: ಡಿಸಿ ಶುಭ ಕಲ್ಯಾಣ

ಕೊರಟಗೆರೆ

"ಅಧಿಕಾರಿಗಳು ದಿನದ ಅರ್ಧದಿನ ಕಚೇರಿಯಲ್ಲಿ ಜನರ ಕೆಲಸ ಮಾಡಿ, ಇನ್ನುಳಿದ ಅರ್ಧದಿನ ಕ್ಷೇತ್ರಕ್ಕೆ ಭೇಟಿ ನೀಡಿ ಕಾಮಗಾರಿಗಳ ಪರಿಶೀಲನೆ ನಡೆಸಬೇಕು. ಆಗ ಮಾತ್ರ ಆರು ತಿಂಗಳಲ್ಲಿ ಆಗುವ ಕೆಲಸ ಕೇವಲ ಮೂರು ತಿಂಗಳಲ್ಲಿ ಪೂರ್ಣಗೊಳ್ಳಲು ಸಾಧ್ಯ," ಎಂದು ತುಮಕೂರು ಜಿಲ್ಲಾಧಿಕಾರಿ ಶುಭಕಲ್ಯಾಣ್ ಅಧಿಕಾರಿಗಳಿಗೆ ಚಾಟಿ ಬೀಸಿದರು.

ಪಟ್ಟಣದ ಆಡಳಿತ ಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲೂಕು ಮಟ್ಟದ ಜನಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಮಗಾರಿ ವಿಳಂಬಕ್ಕೆ ಆಕ್ರೋಶ: "ಸರ್ಕಾರದಿಂದ ಅನುಮೋದನೆ ಸಿಕ್ಕಿದೆ, ಅನುದಾನವೂ ಬಿಡುಗಡೆಯಾಗಿದೆ. ಆದರೂ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು?" ಎಂದು ಪ್ರಶ್ನಿಸಿದ ಜಿಲ್ಲಾಧಿಕಾರಿಗಳು, ಕಾಮಗಾರಿ ಪೂರ್ಣಗೊಳಿಸಲು ಅನಗತ್ಯ ವಿಳಂಬ ಮಾಡುವುದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು. "ಗ್ರಾಮೀಣ ಭಾಗದ ಬಡ ಜನರು ಕಚೇರಿಗಳಿಗೆ ಅಲೆದಾಡುವಂತಾಗಬಾರದು. ಜನರ ಸಮಸ್ಯೆಗಳು ಬಗೆಹರಿಯದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು," ಎಂದರು.



**ಅರ್ಜಿದಾರರ ಅಲೆ; 225 ಸಮಸ್ಯೆಗಳ ಮಹಾಪೂರ:**
ಜನಸಂಪರ್ಕ ಸಭೆಯಲ್ಲಿ ಒಟ್ಟು 225 ಅರ್ಜಿಗಳು ಸಲ್ಲಿಕೆಯಾದವು. ಕಂದಾಯ ಇಲಾಖೆಗೆ ಸಂಬಂಧಿಸಿದ 141 ಅರ್ಜಿಗಳಿದ್ದರೆ, ತಾಲ್ಲೂಕು ಪಂಚಾಯಿತಿಗೆ 36 ಅರ್ಜಿಗಳು ಬಂದಿದ್ದವು. ಈ ಪೈಕಿ 27 ಅರ್ಜಿಗಳಿಗೆ ಜಿಲ್ಲಾಧಿಕಾರಿಗಳು ಸ್ಥಳದಲ್ಲೇ ಪರಿಹಾರ ಸೂಚಿಸಿದರು. ಉಳಿದ ಅರ್ಜಿಗಳನ್ನು ವಾರದೊಳಗೆ ವಿಲೇವಾರಿ ಮಾಡುವಂತೆ ತಂತ್ರಾಂಶದ ಮೂಲಕ ಆಯಾ ಇಲಾಖೆಗಳಿಗೆ ಕಳುಹಿಸಲಾಯಿತು.

ಸ್ವಚ್ಛತೆಗೆ ಆದ್ಯತೆ ನೀಡಿ: ಗ್ರಾಮ ಪಂಚಾಯಿತಿ ಪಿಡಿಒಗಳಿಗೆ ಸೂಚನೆ ನೀಡಿದ ಡಿಸಿ, "ಗ್ರಾಮಗಳ ನೈರ್ಮಲ್ಯಕ್ಕೆ ಮೊದಲ ಆದ್ಯತೆ ನೀಡಿ. 15ನೇ ಹಣಕಾಸು ಯೋಜನೆ ಅಥವಾ ವರ್ಗ-1ರ ಹಣವನ್ನು ಸ್ವಚ್ಛತೆಗಾಗಿ ಬಳಸಿ. ಅನಾರೋಗ್ಯ ಹರಡದಂತೆ ತಡೆಯುವುದು ನಿಮ್ಮ ಜವಾಬ್ದಾರಿ," ಎಂದು ತಿಳಿಸಿದರು. ತಮಗೆ ಈ ಹಿಂದೆ ಜಿಪಂ ಸಿಇಒ ಆಗಿ ಕೆಲಸ ಮಾಡಿದ ಅನುಭವವಿರುವುದರಿಂದ ಪಂಚಾಯತ್ ಅನುದಾನಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದು ಅಧಿಕಾರಿಗಳಿಗೆ ನೆನಪಿಸಿದರು.

ಸಭೆಯಲ್ಲಿ ಕೇಳಿಬಂದ ಪ್ರಮುಖ ಅಹವಾಲುಗಳು:

**ಸಿಲಿಂಡರ್ ಅಭಾವವಿಲ್ಲ ಆತಂಕ ಬೇಡ:**
ಜಿಲ್ಲೆಯಲ್ಲಿ ಗ್ಯಾಸ್ ಸಿಲಿಂಡರ್ ಕೊರತೆ ಇಲ್ಲ ಎಂದು ಡಿಸಿ ಸ್ಪಷ್ಟಪಡಿಸಿದರು. "ಜಿಲ್ಲೆಗೆ ದಿನಕ್ಕೆ 2 ಸಾವಿರ ಸಿಲಿಂಡರ್ ಬೇಡಿಕೆಯಿದ್ದು, ಸದ್ಯ 25 ಗೋಡೌನ್‌ಗಳಲ್ಲಿ 20 ಸಾವಿರ ದಾಸ್ತಾನು ಇದೆ. ಇಂದು 3,500 ಹೊಸ ಸಿಲಿಂಡರ್‌ಗಳು ಜಿಲ್ಲೆಗೆ ಬರುತ್ತಿವೆ. ಜನರು ಆತಂಕಪಡುವ ಅಗತ್ಯವಿಲ್ಲ," ಎಂದರು.

ಕಣ್ಣೀರಿಟ್ಟ ರೈತ: ವಿದ್ಯುತ್ ಸಂಪರ್ಕ ಸಿಗದೆ ರೈತರೊಬ್ಬರು ಜಿಲ್ಲಾಧಿಕಾರಿಗಳ ಮುಂದೆ ಕಣ್ಣೀರಿಟ್ಟ ಘಟನೆ ನಡೆಯಿತು.

ಒತ್ತುವರಿ ತೆರವು: ಬೈಪಾಸ್ ರಸ್ತೆಯ ರಾಜಕಾಲುವೆ ಒತ್ತುವರಿ ತೆರವುಗೊಳಿಸಲು ಮತ್ತು ಟ್ರಾಫಿಕ್ ಸಿಗ್ನಲ್ ಅಳವಡಿಕೆಗೆ ಸಾರ್ವಜನಿಕರು ಆಗ್ರಹಿಸಿದರು.

ಖಾತೆ ವಿಳಂಬ: ಸಾಗುವಳಿ ಚೀಟಿ ದೊರೆತು 20 ವರ್ಷ ಕಳೆದರೂ ಖಾತೆ ಮಾಡಿಕೊಟ್ಟಿಲ್ಲ ಎಂದು ರೈತರು ಅಳಲು ತೋಡಿಕೊಂಡರು.

ಸ್ವಚ್ಛತೆ ಕೊರತೆ: ಬೈಚಾಪುರ ಗ್ರಾಪಂ ವ್ಯಾಪ್ತಿಯಲ್ಲಿ ಸ್ವಚ್ಛತೆ ಮಾಯವಾಗಿದೆ ಎಂಬ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಪಿಡಿಒಗೆ ಡಿಸಿ ತಾಕೀತು ಮಾಡಿದರು.

ಜಿಪಂ ಸಿಇಓ ಅಶ್ವಿಜಾ, ಮಧುಗಿರಿ ಎಸಿ ಶಿವಪ್ಪ ಗೋಟೋರು, ತಹಶೀಲ್ದಾರ್ ಮಂಜುನಾಥ, ತಾಪಂ ಇಓ ಅಪೂರ್ವ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ಬಿ.ಸಿ.ಬಸವರಾಜು ಬಾನಂದೂರು ಹಾಲಿನ ಡೇರಿಗೆ ಅಧ್ಯಕ್ಷರಾಗಿ ಆಯ್ಕೆ

ರಾಮನಗರ

ತಾಲೂಕಿನ ಬಾನಂದೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ನಿರ್ದೇಶಕ ಬಿ.ಸಿ. ಬಸವರಾಜು ಅವರು ಭರ್ಜರಿ ಜಯ ದಾಖಲಿಸಿ, ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷರಾಗಿದ್ದ ಪಾಪಣ್ಣ (ನಾಗರಾಜು) ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಬಿ.ಸಿ. ಬಸವರಾಜು ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ನಾಮನಿರ್ದೇಶಿತ ನಿರ್ದೇಶಕ ಕೇಶವಮೂರ್ತಿ ಕಣಕ್ಕಿಳಿದಿದ್ದರು.

ಚುನಾವಣಾ ಫಲಿತಾಂಶ: ಒಟ್ಟು ಮತಗಳಲ್ಲಿ ಬಿ.ಸಿ. ಬಸವರಾಜು ಅವರು 9 ಮತಗಳನ್ನು ಪಡೆಯುವ ಮೂಲಕ ಗೆಲುವಿನ ನಗೆ ಬೀರಿದರು. ಪ್ರತಿಸ್ಪರ್ಧಿ



ಕೇಶವಮೂರ್ತಿ ಅವರು 4 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾ ಪ್ರಕ್ರಿಯೆಯಲ್ಲಿ ಸಂಘದ ಎಲ್ಲಾ ನಿರ್ದೇಶಕರು ಭಾಗವಹಿಸಿ ಹಕ್ಕು ಚಲಾಯಿಸಿದರು. ಸಹಕಾರ ಇಲಾಖೆಯ ಅಧಿಕಾರಿ ಪುರುಶೋತ್ತಮ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಅಭಿವೃದ್ಧಿಯೇ ಮೂಲ ಮಂತ್ರ: ಗೆಲುವಿನ ನಂತರ ಮಾತನಾಡಿದ ನೂತನ ಅಧ್ಯಕ್ಷ ಬಿ.ಸಿ. ಬಸವರಾಜು, "ನಿಕಟಪೂರ್ವ ಶಾಸಕರಾದ ಎ. ಮಂಜುನಾಥ್ ಹಾಗೂ ಬಿಡದಿ ಹೋಬಳಿ ಜೆಡಿಎಸ್ ಅಧ್ಯಕ್ಷ ಜಗದೀಶ್ ಗೌಡ ಅವರ ಮಾರ್ಗದರ್ಶನದಲ್ಲಿ ಈ ಗೆಲುವು ಸಾಧ್ಯವಾಗಿದೆ. ರೈತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಾಲಕಾಲಕ್ಕೆ ತಲುಪಿಸುವುದು ಮತ್ತು ಹೈನುಗಾರರ ಆರ್ಥಿಕ ಮಟ್ಟವನ್ನು ಸುಧಾರಿಸುವುದು ನನ್ನ ಮೊದಲ ಆದ್ಯತೆ," ಎಂದು ತಿಳಿಸಿದರು.

ನೂತನ ಅಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಜೆಡಿಎಸ್ ಕಾರ್ಯಕರ್ತರು ಮತ್ತು ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಸಂಘದ ಉಪಾಧ್ಯಕ್ಷೆ ಶಂಬಮ್ಮ, ಬಿಡದಿ ಹೋಬಳಿ ಜೆಡಿಎಸ್ ಅಧ್ಯಕ್ಷ ಬಿ.ಎನ್. ಜಗದೀಶ್ ಗೌಡ ಸೇರಿದಂತೆ ಹಲವು ಗಣ್ಯರು ಬಸವರಾಜು ಅವರನ್ನು ಅಭಿನಂದಿಸಿದರು.

**"ಮಾಜಿ ಶಾಸಕರಾದ ಎ. ಮಂಜುನಾಥ್ ಅವರ ಸೂಚನೆಯಂತೆ ಒಗ್ಗಟ್ಟಿನಿಂದ ಶ್ರಮಿಸಿದ ಪಕ್ಷದ ಮುಖಂಡರು ಹಾಗೂ ನಿರ್ದೇಶಕರಿಗೆ ಧನ್ಯವಾದಗಳು. ನೂತನ ಅಧ್ಯಕ್ಷರ ನೇತೃತ್ವದಲ್ಲಿ ಬಾನಂದೂರು ಡೇರಿಯು ಮುಂದಿನ ದಿನಗಳಲ್ಲಿ ತಾಲೂಕಿಗೆ ಮಾದರಿಯಾಗಿ ರೂಪುಗೊಳ್ಳಲಿದೆ."**
**- ಬಿ.ಎನ್. ಜಗದೀಶ್ ಗೌಡ.**

# *ಮಾಲೂರಿನಲ್ಲಿ ಗ್ಯಾಸ್ ಕಾಳಸಂತೆ ಮಾರಾಟಕ್ಕೆ ಬ್ರೇಕ್: ಏಜೆನ್ಸಿಗಳ ಪರವಾನಗಿ ರದ್ಧತಿ ಎಚ್ಚರಿಕೆ*

ಮಾಲೂರು

*"ಕೊಲ್ಲಿ ರಾಷ್ಟ್ರಗಳ ಯುದ್ಧದ ನೆಪವೊಡ್ಡಿ ಅಡುಗೆ ಅನಿಲದ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಮಾಡುವ ಏಜೆನ್ಸಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಂತಹ ಏಜೆನ್ಸಿಗಳ ಪರವಾನಗಿಯನ್ನು ತಕ್ಷಣವೇ ರದ್ದುಪಡಿಸಲಾಗುವುದು," ಎಂದು ತಹಶೀಲ್ದಾರ್ ಎಂ.ವಿ. ರೂಪಾ ಖಡಕ್ ಎಚ್ಚರಿಕೆ ನೀಡಿದರು.*



*ನಗರಸಭೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಗ್ಯಾಸ್ ಏಜೆನ್ಸಿಗಳ ಮಾಲೀಕರ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.*

*ವಾಣಿಜ್ಯ ಬಳಕೆಗೆ ಕಟ್ಟುನಿಟ್ಟಿನ ನಿಷೇಧ: ಗೃಹ ಬಳಕೆಯ ಸಿಲಿಂಡರ್‌ಗಳನ್ನು ಹೋಟೆಲ್, ರೆಸ್ಟೋರೆಂಟ್ ಅಥವಾ ಇತರ ವಾಣಿಜ್ಯ ಉದ್ದೇಶಗಳಿಗೆ ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. "ಒಂದು ಸಿಲಿಂಡರ್‌ನಿಂದ ಮತ್ತೊಂದಕ್ಕೆ ಗ್ಯಾಸ್ ವರ್ಗಾಯಿಸುವ (ರಿಫಿಲ್ಲಿಂಗ್) ಅಕ್ರಮ ಜಾಲ ಪತ್ತೆಯಾದಲ್ಲಿ ಅಂತವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು," ಎಂದು ತಿಳಿಸಿದರು.*

*ವಿದ್ಯಾರ್ಥಿ ನಿಲಯಗಳಿಗೆ ನಿರಂತರ ಪೂರೈಕೆ: ಪ್ರಸ್ತುತ ಪರೀಕ್ಷಾ ಸಮಯವಾಗಿರುವುದರಿಂದ ಸರ್ಕಾರಿ ಹಾಗೂ ಖಾಸಗಿ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಡುಗೆಯ ತೊಂದರೆಯಾಗದಂತೆ ನಿರಂತರವಾಗಿ ಅನಿಲ ಸರಬರಾಜು ಮಾಡಲು ವಿತರಕರಿಗೆ ಸೂಚಿಸಿದರು. ಅಗತ್ಯ ಸೇವೆಗಳಾದ ಶಾಲೆಗಳು ಮತ್ತು ಹಾಸ್ಟೆಲ್‌ಗಳಿಗೆ ಮೊದಲ ಆದ್ಯತೆ ನೀಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.*

*ಗ್ರಾಹಕರಿಗೆ ಮಾಹಿತಿ ಮತ್ತು ಸಲಹೆ:*

*ಬುಕ್ಕಿಂಗ್ ನಿಯಮ: ಗೃಹ ಬಳಕೆಯ ಸಿಲಿಂಡರ್ ಪಡೆದ ನಂತರ ಮತ್ತೊಂದು ಬುಕ್ಕಿಂಗ್ ಮಾಡಲು ನಗರ ಪ್ರದೇಶದಲ್ಲಿ 25 ದಿನ ಹಾಗೂ ಗ್ರಾಮೀಣ ಪ್ರದೇಶದಲ್ಲಿ 45 ದಿನಗಳ ಅಂತರವಿರಬೇಕು.*

*ತಾಂತ್ರಿಕ ಬಳಕೆ: ಏಜೆನ್ಸಿಗೆ ನೇರವಾಗಿ ಹೋಗುವ ಬದಲು ಕಂಪನಿಯ ಆಪ್‌ಗಳು, ವಾಟ್ಸಾಪ್ ಅಥವಾ ಮಿಸ್ಡ್ ಕಾಲ್ ಮೂಲಕ ಬುಕ್ಕಿಂಗ್ ಮಾಡಲು ಅವಕಾಶವಿದೆ.*

*ಆತಂಕ ಬೇಡ: ತಾಲೂಕಿನಲ್ಲಿ ಐಒಸಿಎಲ್, ಎಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಕಂಪನಿಗಳಡಿ ಸಾಕಷ್ಟು ದಾಸ್ತಾನು ಇದ್ದು, ಯಾವುದೇ ಕೊರತೆಯಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ಸುಳ್ಳು ವದಂತಿಗಳನ್ನು ನಂಬಬಾರದು. ಸಾರ್ವಜನಿಕರು ಅನಗತ್ಯವಾಗಿ ಸಿಲಿಂಡರ್ ಸಂಗ್ರಹಿಸಿ ಕೃತಕ ಬೇಡಿಕೆ ಸೃಷ್ಟಿಸಬಾರದು ಎಂದು ತಹಶೀಲ್ದಾರ್ ಮನವಿ ಮಾಡಿದರು.*

# ಗ್ಯಾಸ್ ಅಭಾವವಿಲ್ಲ, ಆತಂಕ ಬೇಡ



ತಿಪಟೂರು

"ತಾಲೂಕಿನಲ್ಲಿ ಅಡುಗೆ ಅನಿಲ (ಗ್ಯಾಸ್) ವಿತರಣೆಯಲ್ಲಿ ಯಾವುದೇ ರೀತಿಯ ವ್ಯತ್ಯಯವಿಲ್ಲ. ಸಾರ್ವಜನಿಕರು ಅನಗತ್ಯ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ," ಎಂದು ತಹಸೀಲ್ದಾರ್ ಮೋಹನ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ನಗರದ ಆಡಳಿತ ಸೌಧದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಗ್ಯಾಸ್ ವಿತರಕರ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಮಾರ್ಗಸೂಚಿಯಂತೆ ವಿತರಣೆ: "ತಾಲೂಕಿನಲ್ಲಿ ಸಾಕಷ್ಟು ಪ್ರಮಾಣದ ಗ್ಯಾಸ್ ಸಿಲಿಂಡರ್‌ಗಳು ದಾಸ್ತಾನಿವೆ. ಸರ್ಕಾರದ ನಿಯಮದಂತೆ ಗ್ರಾಮೀಣ ಪ್ರದೇಶದ ಗ್ರಾಹಕರಿಗೆ 45 ದಿನಗಳಿಗೊಮ್ಮೆ ಹಾಗೂ ನಗರ ಪ್ರದೇಶದವರಿಗೆ 25 ದಿನಗಳಿಗೊಮ್ಮೆ ಸಿಲಿಂಡರ್ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಜಾಗತಿಕ ವಿದ್ಯಮಾನಗಳನ್ನು ಕಂಡು ಗ್ಯಾಸ್ ಸಿಗುವುದಿಲ್ಲ ಎಂಬ ಭಯ ಬೇಡ," ಎಂದು ಅವರು ತಿಳಿಸಿದರು.

ಅಕ್ರಮ ಎಸಗಿದರೆ ಕಠಿಣ ಕ್ರಮ: ಕೆಲವರು ಪರಿಸ್ಥಿತಿಯ ದುರುಪಯೋಗ ಮಾಡಿಕೊಂಡು ಕೃತಕ ಅಭಾವ ಸೃಷ್ಟಿಸುವ ಸಾಧ್ಯತೆಗಳ ಬಗ್ಗೆ ಎಚ್ಚರಿಸಿದ ತಹಸೀಲ್ದಾರ್, "ಗ್ಯಾಸ್ ಸಿಲಿಂಡರ್‌ಗಳನ್ನು ಅಕ್ರಮವಾಗಿ ದಾಸ್ತಾನು ಮಾಡುವುದು ಅಥವಾ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡುಬಂದರೆ ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು," ಎಂದು ವಿತರಕರಿಗೆ ಎಚ್ಚರಿಕೆ ನೀಡಿದರು. ಸರ್ವರ್ ಸಮಸ್ಯೆಗೆ ಸಮಾಧಾನ: ಒಂದೇ ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಬುಕ್ಕಿಂಗ್ ಮಾಡುತ್ತಿರುವುದರಿಂದ ಸರ್ವರ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇದು ತಾತ್ಕಾಲಿಕವಾಗಿದ್ದು, ಗ್ರಾಹಕರು ಗಾಬರಿಯಾಗುವ ಅವಶ್ಯಕತೆಯಿಲ್ಲ ಎಂದು ಅವರು ಮಾಹಿತಿ ನೀಡಿದರು. ಸಭೆಯಲ್ಲಿ ನಗರ ಪೊಲೀಸ್ ವೃತ್ತ ನಿರೀಕ್ಷಕ ಯತೀಶ್, ಆಹಾರ ನಿರೀಕ್ಷಕ ರೇಣುಕ ಪ್ರಸಾದ್ ಹಾಗೂ ವಿವಿಧ ಕಂಪನಿಗಳ ಗ್ಯಾಸ್ ವಿತರಕರು ಉಪಸ್ಥಿತರಿದ್ದರು.

# ವಾತ್ಸಲ್ಯ ಮನೆ ಹಸ್ತಾಂತರ



ಶಿಡ್ಲಘಟ್ಟ

"ಪ್ರತಿಯೊಬ್ಬರಿಗೂ ನೆಮ್ಮದಿಯ ಬದುಕಿಗಾಗಿ ಒಂದು ಸ್ವಂತ ಮನೆ ಇರಬೇಕೆಂಬ ಕನಸಿರುತ್ತದೆ. ಆದರೆ ಆರ್ಥಿಕ ಸಂಕಷ್ಟದಿಂದ ಸೂರು ನಿರ್ಮಿಸಿಕೊಳ್ಳಲಾಗದ ಅಶಕ್ತರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು 'ವಾತ್ಸಲ್ಯ ಮನೆ' ನಿರ್ಮಿಸಿಕೊಡುವ ಮೂಲಕ ಅವರ ಬದುಕಿನಲ್ಲಿ ಬೆಳಕು ಮೂಡಿಸುತ್ತಿರುವುದು ಮಾದರಿ ಕೆಲಸ," ಎಂದು ಮಾಜಿ ಶಾಸಕ ಎಂ. ರಾಜಣ್ಣ ತಿಳಿಸಿದರು.

ತಾಲೂಕಿನ ಹಂಡಿಗನಾಳ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ನೂತನ ಮನೆಯನ್ನು ಫಲಾನುಭವಿ ಕೃಷ್ಣಮ್ಮ ಅವರಿಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ಸ್ವಾಭಿಮಾನದ ಬದುಕಿಗೆ ಆಸರೆ: ಸ್ವಂತ ಮನೆಯಿಲ್ಲದೆ ಬದುಕು ಕಳೆಯುವ ಎಷ್ಟೋ ಮಂದಿಯ ನೋವಿಗೆ ಸ್ಪಂದಿಸಿರುವ ಧರ್ಮಸ್ಥಳ ಸಂಸ್ಥೆಯು, ಸಾಮಾಜಿಕ ಕಳಕಳಿಯಿಂದ ಅಶಕ್ತರಿಗೆ ನೆರವಾಗುತ್ತಿದೆ. ಇದರಿಂದ ಕೃಷ್ಣಮ್ಮ ಅವರಂತಹವರು ಸ್ವಾಭಿಮಾನದಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತಿದೆ ಎಂದು ಅವರು ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿದರು.

ಯೋಜನೆಯ ಸಾಮಾಜಿಕ ಮುಖ: ಜಿಲ್ಲಾ ನಿರ್ದೇಶಕ ಸಿ.ಎಸ್. ಪ್ರಶಾಂತ್ ಅವರು ಯೋಜನೆಯಡಿ ನಡೆಯುತ್ತಿರುವ ವಿವಿಧ ಸಾಮಾಜಿಕ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಎ.ಎಂ. ತ್ಯಾಗರಾಜ್, ಎಚ್.ಕೆ. ಸುರೇಶ್, ತಾಲೂಕು ಯೋಜನಾಧಿಕಾರಿ ಪ್ರಸಾದ್, ವಲಯ ಮೇಲ್ವಿಚಾರಕ ನಾಗರಾಜ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಅರುಣಾ, ಒಕ್ಕೂಟದ ಅಧ್ಯಕ್ಷೆ ಲಕ್ಷ್ಮಿದೇವಮ್ಮ, ಸೇವಾ ಪ್ರತಿನಿಧಿ ಮಮತಾ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರಕ್ಕೆ ನೂತನವಾಗಿ ಆಯ್ಕೆಯಾಗಿರುವ ವಿವಿಧ ಮೋರ್ಚಾಗಳ ಅಧ್ಯಕ್ಷರುಗಳಿಗೆ ಮಾಜಿ ಸಚಿವರು, ಬಿಜೆಪಿಯ ಹಿರಿಯ ಧುರೀಣರಾದ ಬಿ. ಶ್ರೀರಾಮುಲು ಅವರು ಸನ್ಮಾನಿಸಿ ಪಕ್ಷ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ತಿಳಿಸಿ ಶುಭ ಕೋರಿದರು. ಈ ವೇಳೆ ಭಾರತೀಯ ಜನತಾ ಪಾರ್ಟಿ ರೈತ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷರಾದ ಎಸ್. ಗುರುಲಿಂಗನಗೌಡ ಮತ್ತು ಮುಖಂಡರಾದ ಓಬಳೇಶ್ ಇನ್ನಿತರರು ಇದ್ದರು.

# ದೊಡ್ಡಬಳ್ಳಾಪುರದಲ್ಲಿ ಸಪ್ತದಿನಗಳ ಶಿಬಿರ ಮುಕ್ತಾಯ

ದೊಡ್ಡಬಳ್ಳಾಪುರ

"ವಿಪತ್ತುಗಳು ಸಂಭವಿಸಿದಾಗ ಧೈರ್ಯಗೆಡದೆ ಸಾರ್ವಜನಿಕರನ್ನು ರಕ್ಷಿಸುವ ಕಲೆ ಮತ್ತು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ತಂತ್ರಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಕಲಿಯಬೇಕು," ಎಂದು ಬೆಸೆಂಟ್ ಪಾರ್ಕ್ ಇನ್‌ಚಾರ್ಜ್ ಎಂ.ಎ. ಚಲ್ಲಯ್ಯ ತಿಳಿಸಿದರು.

ಪಟ್ಟಣದ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಹಾಗೂ ಶಿಬಿರ ಕೇಂದ್ರದಲ್ಲಿ ಆಯೋಜಿಸಲಾಗಿದ್ದ 'ಯುವ ಆಪದ್ ಮಿತ್ರ' ಯೋಜನೆಯಡಿ ಒಂದು ವಾರದ ವಿಪತ್ತು ನಿರ್ವಹಣಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಈ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಭೂಕಂಪನ, ಭೂಕುಸಿತ, ಪ್ರವಾಹ, ಸುನಾಮಿ ಹಾಗೂ ಕಾಡ್ಗಿಚ್ಚಿನಂತಹ ತುರ್ತು ಸಂದರ್ಭಗಳಲ್ಲಿ ಪ್ರಾಥಮಿಕ ಹಂತದ ಶೋಧನೆ ಮತ್ತು ರಕ್ಷಣೆ ಮಾಡುವ ಕುರಿತು ತರಬೇತಿ ನೀಡಲಾಯಿತು. ವಿಶೇಷವಾಗಿ ಹೃದಯಾಘಾತ ಸಂಭವಿಸಿದಾಗ ಪ್ರಾಣ ಉಳಿಸಲು ಸಹಕಾರಿಯಾದ ಸಿಪಿಆರ್ ಮಾಡುವುದು ಹೇಗೆ ಮತ್ತು ಸಮುದಾಯ ಆಧಾರಿತ ಆರೋಗ್ಯ ಪ್ರಥಮ ಚಿಕಿತ್ಸೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ 'ಮೈ ಭಾರತ್' ರಾಜ್ಯ ಸಂಚಾಲಕ ಅಶೋಕ್ ಕುಮಾರ್ ದಾಸ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಕಾರ್ಯಕ್ರಮ ಸಹಾಯಕಿ ಲತಾ ಬಿ.ವಿ., 'ನನ್ನ ಭಾರತ' ಸಂಯೋಜಕಿ ಜೆಮೈಮಾ ಜೇಸು ದಾಸ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# 'ಮಂಕುತಿಮ್ಮನ ಕಗ್ಗದ ಸೃಷ್ಟಿಕರ್ತ ಡಿವಿಜಿ ಅಮರ'

ಬಂಗಾರಪೇಟೆ

"ಆಧುನಿಕ ಸರ್ವಜ್ಞ ಎಂದೇ ಖ್ಯಾತರಾದ ಡಿ.ವಿ. ಗುಂಡಪ್ಪನವರು (ಡಿವಿಜಿ) ಕೇವಲ ಸಾಹಿತಿಯಲ್ಲ, ಅವರು ಕನ್ನಡಿಗರ ಆತ್ಮಗೌರವವನ್ನು ಎತ್ತಿಹಿಡಿದ ಮಹಾನ್ ದಾರ್ಶನಿಕ ಮತ್ತು ಪತ್ರಕರ್ತ," ಎಂದು ಕೆಜಿಎಫ್ ಕಾಲೇಜಿನ ಉಪನ್ಯಾಸಕ ಡಾ. ಶ್ರೀನಿವಾಸ ಪ್ರಸಾದ್ ಬಣ್ಣಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ತಾಲೂಕು ಅನಿಕೇತನ ಕನ್ನಡ ಬಳಗದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಡಿವಿಜಿಯವರ 139ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಸ್ವಾಭಿಮಾನದ ಬದುಕಿಗೆ ಡಿವಿಜಿ ಮಾದರಿ: "ಡಿವಿಜಿಯವರು ಕೋಲಾರ ಜಿಲ್ಲೆಯ ಹೆಮ್ಮೆಯ ಪುತ್ರ. ತಮಗೆ ಬಂದ ಒಂದು ಲಕ್ಷ ರೂಪಾಯಿ ಗೌರವ ಧನವನ್ನು ಸಾರ್ವಜನಿಕ ಸಂಸ್ಥೆಗೆ ದಾನ ಮಾಡಿದ ಅವರು, ಉದಾರತೆ ಮತ್ತು ಅಪರಿಗ್ರಹ ಗುಣಕ್ಕೆ ಸಾಕ್ಷಿಯಾಗಿದ್ದರು. ವಿಶ್ವೇಶ್ವರಯ್ಯನವರಂತಹ ಮಹನೀಯರ ಬಗ್ಗೆಯೂ ಅವರು ಇಟ್ಟುಕೊಂಡಿದ್ದ ವಿನಯ ಮತ್ತು ಗೌರವ ಇಂದಿನ ಪೀಳಿಗೆಗೆ ಮಾದರಿ," ಎಂದು ಡಾ. ಪ್ರಸಾದ್ ಸ್ಮರಿಸಿದರು.



ಪರಿಶ್ರಮವೇ ಸಾಧನೆಯ ಗುಟ್ಟು: ಕಾರ್ಯಕ್ರಮ ಉದ್ಘಾಟಿಸಿದ ಸಿವಿಲ್ ನ್ಯಾಯಾಧೀಶೆ ಅಶ್ವಿನಿ ಶ್ಯಾಮ್ ಕುಮಾರ್ ಮಾತನಾಡಿ, "ನಾನು ಸತತ ಎಂಟು ಬಾರಿ ಪ್ರಯತ್ನಿಸಿದ ನಂತರ ನ್ಯಾಯಾಧೀಶೆಯಾಗಲು ಸಾಧ್ಯವಾಯಿತು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಗುರಿ ಬೆನ್ನಟ್ಟಿದರೆ ಯಶಸ್ಸು ಖಚಿತ," ಎಂದು ತಮ್ಮ ಜೀವನದ ಅನುಭವ ಹಂಚಿಕೊಂಡರು.

ಗಮನ ಸೆಳೆದ ಕಗ್ಗ ಗಾಯನ ಮತ್ತು ಸನ್ಮಾನ: ಕನ್ನಡ ಸಾಹಿತ್ಯ ಲೋಕಕ್ಕೆ ಡಿವಿಜಿಯವರ ಕೊಡುಗೆಯನ್ನು ನಾಗಾನಂದ ಕೆಂಪರಾಜ್ ಮತ್ತು ವಾಣಿ ಪ್ರಹ್ಲಾದ ರಾವ್ ವಿವರಿಸಿದರು. ಶಿಕ್ಷಕ ಮಂಜುನಾಥ್ ನಡೆಸಿಕೊಟ್ಟ ಮಂಕುತಿಮ್ಮನ ಕಗ್ಗದ ಗಾಯನ ಸಭಿಕರ ಗಮನ ಸೆಳೆಯಿತು. ಇದೇ ವೇಳೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ತೌಸಿಫ್ ಉಲ್ಲಾ ಖಾನ್ ಅವರನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಶಕುಂತಲಾ ವಹಿಸಿದ್ದರು. ಕಸಾಪ ಅಧ್ಯಕ್ಷ ಅಶ್ವಥ್, ಅನಿಕೇತನ ಬಳಗದ ಅಧ್ಯಕ್ಷ ಎಂ.ಎಸ್. ರಾಮಪ್ರಸಾದ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಸೈನಿಕರ ಏಳಿಗೆಗೆ ಸಂಘ ಪ್ರಾರಂಭಿಸಿದ್ದೇವೆ: ರಾಮಕೃಷ್ಣಪ್ಪ



ಬೂದಿಕೋಟೆ

ದೇಶದ ಗಡಿಯಲ್ಲಿ ಹಗಲಿರುಳು ಎನ್ನದೆ ಸೇವೆ ಸಲ್ಲಿಸಿ ನಿವೃತ್ತರಾದ ಸೈನಿಕರ ಕ್ಷೇಮಾಭಿವೃದ್ಧಿಗಾಗಿ ಮತ್ತು ಅವರ ಕುಟುಂಬದ ಏಳಿಗೆಗಾಗಿ ಶ್ರಮಿಸುವ ಸಂಕಲ್ಪದೊಂದಿದ್ದೇವೆ ಎಂದು ಮಾಜಿ ಸೈನಿಕರ ಸಂಘದ ತಾಲ್ಲೂಕು ಅಧ್ಯಕ್ಷ ರಾಮಕೃಷ್ಣಪ್ಪ ಹೇಳಿದರು.

ನಗರದಲ್ಲಿ ಮಾಜಿ ಸೈನಿಕರ ಸಂಘದ ನೂತನ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದರು, ಸೈನಿಕರ ನಿವೃತ್ತಿ ನಂತರದ ಬದುಕಿನ ಸವಾಲುಗಳ ಬಗ್ಗೆ ಮಾರ್ಮಿಕವಾಗಿ ಮಾತನಾಡಿದರು. ದೇಶ ಸೇವೆ ಮುಗಿಸಿ ಬಂದ ಸೈನಿಕರಿಗೆ ಮತ್ತು ಅವರ ಕುಟುಂಬದವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ. ಈ ಕಚೇರಿಯು ಕೇವಲ ಒಂದು ಕಟ್ಟಡವಲ್ಲ, ಬದಲಿಗೆ ಪ್ರತಿಯೊಬ್ಬ ಮಾಜಿ ಸೈನಿಕನಿಗೆ ಅಗತ್ಯ ಮಾಹಿತಿ ನೀಡುವ ಮತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಸೇವಾ ಕೇಂದ್ರವಾಗಲಿದೆ ಎಂದು ತಿಳಿಸಿದರು.

ಅನೇಕ ಮಾಜಿ ಸೈನಿಕರು ಮತ್ತು ವೀರನಾರಿಯರು ತಮಗೆ ಸಿಗಬೇಕಾದ ಪೆನ್ಷನ್, ಆರೋಗ್ಯ ವಿಮೆ ಮತ್ತು ಮಕ್ಕಳ ಶಿಕ್ಷಣಕ್ಕೆ ಸಿಗುವ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ. ಅಂತಹವರಿಗೆ ಈ ಕಚೇರಿ ಮಾರ್ಗದರ್ಶನ ನೀಡಲಿದೆ.

ಸಂಘಟಿತ ಹೋರಾಟದ ಮೂಲಕ ತಾಲೂಕಿನ ಮಾಜಿ ಸೈನಿಕರ ಹಕ್ಕುಗಳನ್ನು ಪಡೆದುಕೊಳ್ಳುವುದು ಮತ್ತು ಅವರಿಗೆ ಗೌರವಯುತ ಜೀವನ ಕಲ್ಪಿಸುವುದು ಸಂಘದ ಮುಖ್ಯ ಉದ್ದೇಶವಾಗಿದೆ ಎಂದು ಭರವಸೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗೋಪಿನಾಥ್, ಪ್ರಧಾನ ಕಾರ್ಯದರ್ಶಿ ದೇವರಾಜ್, ಕಾರ್ಯದರ್ಶಿ ರಘು ಸೇರಿದಂತೆ ಅನೇಕ ನಿವೃತ್ತಿ ಯೋಧರು ಉಪಸ್ಥಿತರಿದ್ದರು.

# ಸಂತೆಮಾವತ್ತೂರು ವಿಎಸ್‌ಎಸ್‌ಎನ್ ಚುನಾವಣೆ ಅಕ್ರಮಕ್ಕೆ ಖಂಡನೆ

ತುಮಕೂರು

ಕುಣಿಗಲ್ ತಾಲ್ಲೂಕು ಸಂತೆಮಾವತ್ತೂರು ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯ ಸಂದರ್ಭದಲ್ಲಿ ನಡೆದ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಎನ್‌ಡಿಎ ನೇತೃತ್ವದಲ್ಲಿ ಬುಧವಾರ ಕುಣಿಗಲ್‌ನ ಹುಚ್ಚಮಾಸ್ತಿಗೌಡ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತುಮುಲ್ ನಿರ್ದೇಶಕ ಹಾಗೂ ಬಿಜೆಪಿ ಮುಖಂಡ ಡಿ. ಕೃಷ್ಣಕುಮಾರ್ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂತೆ ಮಾವತ್ತೂರು ಸೊಸೈಟಿ ಚುನಾವಣಾ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ತಮ್ಮ ಬಳಿ ಅಕ್ರಮವಾಗಿ ಚುನಾವಣಾ ಮತಪತ್ರಗಳನ್ನು ಇಟ್ಟು ಕಾಂಗ್ರೆಸ್ ಪರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಜೆಡಿಎಸ್ ಮೈತ್ರಿಕೂಟದ ಕೆಲವು ಕಾರ್ಯಕರ್ತರು ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಪ್ರಕರಣದ ಹಿಂದೆ ಶಾಸಕ ಡಾ.ರಂಗನಾಥ್ ಅವರ ಪ್ರಭಾವವಿದೆ. ಕನಕಪುರ ಶೈಲಿಯ ರಾಜಕಾರಣ ಕುಣಿಗಲ್‌ನಲ್ಲಿ ನಡೆಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು.



ಚುನಾವಣೆಗಳಿಗೆ ಇವಿಎಂ ಮಿಷನ್ ಬೇಡ, ಮತ ಪತ್ರ ಬೇಕು ಎಂದು ಹೇಳುವ ಕಾಂಗ್ರೆಸ್ ನಾಯಕರು, ಇಂತಹ ಅಕ್ರಮ ಮಾಡುವ ಉದ್ದೇಶದಿಂದಲೇ ಹೇಳುತ್ತಿದ್ದಾರೆ ಎಂದು ಟೀಕಿಸಿದ ಡಿ.ಕೃಷ್ಣಕುಮಾರ್, ಈ ಸಂಬಂಧ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಸಂತೆಮಾವತ್ತೂರು ಸೊಸೈಟಿ ಚುನಾವಣೆ ಅಕ್ರಮ ತನಿಖೆಗೆ ಸೂಚನೆ ನೀಡಬೇಕು ಎಂದು ಕೋರುವುದಾಗಿ ಹೇಳಿದರು.

ಕುಣಿಗಲ್ ತಾಲ್ಲೂಕಿ ಹಲವು ವಿಎಸ್‌ಎಸ್‌ಎನ್ ಚುನಾವಣೆಯಲ್ಲಿ ಇಂತಹುದ್ದೇ ಕೃತ್ಯವನ್ನು ಮಾಡಿದ್ದಾರೆ. ಇದಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಸೋದರ ಸಂಬಂಧಿ ಶಾಕ ಡಾ. ರಂಗನಾಥ್ ಅವರ ಸಂಪೂರ್ಣ ಸಹಕಾರ ಇದೆ. ಈ ವಿಚಾರದಲ್ಲಿ ವಿನಾಕಾರಣ ತಾವು ಸೇರಿದಂತೆ ಹಲವರ ವಿರುದ್ಧ ದೂರು ದಾಖಲಿಸಿದ್ದಾರೆ, ಈ ಬಗ್ಗೆ ತನಿಖೆ ಆಗಬೇಕು ಹಾಗೂ ದಾಖಲಾಗಿರುವ ಎಫ್‌ಐಆರ್ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ಕನಕಪುರ ಶೈಲಿಯ ದಬ್ಬಾಳಿಕೆ ರಾಜಕಾರಣ ಕುಣಿಗಲ್‌ನಲ್ಲಿ ನಡೆಯುವುದಿಲ್ಲ. ವೈ.ಕೆ. ರಾಮಯ್ಯನವರಿಗಿಂಥಾ ಈ ಶಾಸಕ ರಂಗನಾಥ್ ಪ್ರಭಾವಿಯೇನಲ್ಲ, ವೈ.ಕೆ. ರಾಮಯ್ಯನವರು ಅಭಿವೃದ್ಧಿ ಹಾಗೂ ಸಹಕಾರ ಸಂಘಗಳ ವಿಚಾರದಲ್ಲಿ ಯಾವತ್ತೂ ಕ್ಷುಲ್ಲಕ ರಾಜಕಾರಣ ಮಾಡಿಲ್ಲ, ಅಂತಹ ಕುಣಿಗಲ್‌ನಲ್ಲಿ ರಂಗನಾಥ್ ಆಟ ನಡೆಯುವುದಿಲ್ಲ ಎಂದು ಡಿ. ಕೃಷ್ಣಕುಮಾರ್ ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಚ್.ಎಸ್. ರವಿಶಂಕರ್ ಹೆಬ್ಬಾಕ ಮಾತನಾಡಿ, ಚುನಾವಣೆಗಳಲ್ಲಿ ಅಕ್ರಮ ಮಾಡುವುದು ಕಾಂಗ್ರೆಸ್ ಸಂಸ್ಕೃತಿ, ಈ ಕಾರಣಕ್ಕಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಚುನಾವಣೆಗಳಲ್ಲಿ ಇವಿಎಂ ಯಂತ್ರ ಬೇಡ, ಬ್ಯಾಲೆಟ್ ಪೇಪರ್ ಬೇಕು ಎಂದು ಒತ್ತಾಯ ಮಾಡುತ್ತಿರುವುದು ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸಾಗರನಹಳ್ಳಿ ವಿಜಯಕುಮಾರ್, ಕಾರ್ಯದರ್ಶಿ ಹೆಚ್. ಎಂ. ರವೀಶಯ್ಯ, ಜಿಲ್ಲಾ ವಕ್ತಾರ ಟಿ.ಆರ್. ಸದಾಶಿವಯ್ಯ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಕೆ.ವೇದಮೂರ್ತಿ, ಮರಿತಿಮ್ಮಯ್ಯ ಹಾಜರಿದ್ದರು.

# ಅಪ್ಪು ಜನ್ಮದಿನ ಸಂಭ್ರಮ



ತಿಪಟೂರು

"ಅಪ್ಪು ಎನ್ನುವ ಹೆಸರು ಕೋಟ್ಯಂತರ ಜೀವಗಳಿಗೆ ಸ್ಫೂರ್ತಿಯ ಚಿಲುಮೆ. ಅವರು ತೋರಿದ ದಾರಿಯಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ," ಎಂದು ಜಯಕರ್ನಾಟಕ ಜನಪರ ವೇದಿಕೆಯ ಅಧ್ಯಕ್ಷ ಬಿ.ಟಿ. ಕುಮಾರ್ ತಿಳಿಸಿದರು.

ನಗರದ ಕೆ.ಆರ್. ಬಡಾವಣೆಯಲ್ಲಿರುವ ಯಶಸ್ವಿನಿ ವೃದ್ಧಾಶ್ರಮದಲ್ಲಿ ಜಯಕರ್ನಾಟಕ ಜನಪರ ವೇದಿಕೆ ಮತ್ತು ಅಪ್ಪು ಅಭಿಮಾನಿ ಬಳಗದ ವತಿಯಿಂದ ಕರ್ನಾಟಕ ರತ್ನ ಡಾ. ಪುನೀತ್ ರಾಜಕುಮಾರ್ ಅವರ 51ನೇ ಜನ್ಮದಿನದ ಅಂಗವಾಗಿ ಆಯೋಜಿಸಲಾಗಿದ್ದ ಅನ್ನದಾಸೋಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಸಿದವರಿಗೆ ಅನ್ನದಾಸೋಹ: ಅಪ್ಪು ಅಭಿಮಾನಿ ಬಳಗದ ಮೋಹನ್ ಮಾತನಾಡಿ, "ಅಪ್ಪು ಅವರ ಕನಸುಗಳನ್ನು ನನಸು ಮಾಡಲು ನಾವು ಪ್ರತಿ ವರ್ಷ ಅವರ ಜನ್ಮದಿನ ಹಾಗೂ ಪುಣ್ಯಸ್ಮರಣೆಯಂದು ಹಸಿದವರಿಗೆ ಅನ್ನದಾಸೋಹ ಮತ್ತು ಬಡವರಿಗೆ ನೆರವಾಗುವ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದ್ದೇವೆ," ಎಂದು ತಿಳಿಸಿದರು.

ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಹಾಗೂ ಹಣ್ಣು-ಹಂಪಲು ವಿತರಿಸುವ ಮೂಲಕ ಸಾರ್ಥಕವಾಗಿ ಜನ್ಮದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಹರ್ಷವರ್ಧನ್, ಶ್ರೀಧರ್, ಹೇಮಂತ್, ಹಿರಿಯ ಪತ್ರಕರ್ತ ಎ.ಆರ್. ನಂಜಪ್ಪ, ಆಟೋ ಚೌಡಪ್ಪ, ವೃದ್ಧಾಶ್ರಮದ ಉಮೇಶ್ ಹಾಗೂ ಸಂಘಟನೆಯ ಪದಾಧಿಕಾರಿಗಳು ಮತ್ತು ಅಭಿಮಾನಿಗಳು ಉಪಸ್ಥಿತರಿದ್ದರು.

# 24ರಂದು ಒಳಮೀಸಲಾತಿ ರೋಸ್ಟರ್ ಹಂಚಿಕೆ ವಿರುದ್ಧ ಬೆಂಗಳೂರು ಚಲೋ

ತುಮಕೂರು

"ರಾಜ್ಯ ಸರ್ಕಾರವು ಒಳಮೀಸಲಾತಿ ರೋಸ್ಟರ್ ಹಂಚಿಕೆ ಮಾಡುವ ಮೂಲಕ ಕೆಲವು ಸಮುದಾಯಗಳನ್ನು ಕಡೆಗಣಿಸುತ್ತಿದೆ. ಇದನ್ನು ವಿರೋಧಿಸಿ ಇದೇ 24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಬೃಹತ್ ಹೋರಾಟಕ್ಕೆ ಜಿಲ್ಲೆಯ ಕೊರಚ, ಕೊರಮ, ಲಂಬಾಣಿ ಹಾಗೂ ಭೋವಿ ಸಮಾಜದ ಜನರು ಸಾಗರೋಪಾದಿಯಲ್ಲಿ ಬರಬೇಕು," ಎಂದು ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಊರುಕೆರೆ ಉಮೇಶ್ ಕರೆ ನೀಡಿದರು.

ನಗರದ ಭೋವಿ ಹಾಸ್ಟೆಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಜನಾಂಗದ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಗಮೋಹನದಾಸ್ ವರದಿ ವಿರುದ್ಧ ಆಕ್ರೋಶ: ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ನೀಡಿರುವ ದತ್ತಾಂಶಗಳು ಪೂರ್ವಾಗ್ರಹ ಪೀಡಿತವಾಗಿವೆ ಎಂದು ಆರೋಪಿಸಿದ ಉಮೇಶ್, "ಸಂಗ್ರಹಿಸಿರುವ ದತ್ತಾಂಶಕ್ಕೂ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ವರದಿಗೂ ವ್ಯತ್ಯಾಸವಿದೆ. ಭೋವಿ, ಲಂಬಾಣಿ ಸಮುದಾಯಗಳು ಮುಂದುವರಿದಿವೆ ಎಂದು ಆಯೋಗ ಎಲ್ಲಿಯೂ ಹೇಳಿಲ್ಲ. ಆದರೂ ನಮ್ಮನ್ನು ಮೀಸಲಾತಿಯಿಂದ ಹೊರಗಿಡುವ ಹುನ್ನಾರ ನಡೆಯುತ್ತಿದೆ," ಎಂದು ಕಿಡಿಕಾರಿದರು.



ಸರ್ಕಾರಕ್ಕೆ ಪ್ರಮುಖ ಬೇಡಿಕೆಗಳು:

ಹಳೆ ನಿಯಮದಂತೆ ನೇಮಕಾತಿ: ಒಳಮೀಸಲಾತಿ ಹಂಚಿಕೆ ಕೈಬಿಟ್ಟು ಹಳೆಯ ನಿಯಮದಂತೆಯೇ ನೇಮಕಾತಿ ಪ್ರಕ್ರಿಯೆ ನಡೆಸಬೇಕು.

ಅನುದಾನ ದುರ್ಬಳಕೆ ತಡೆ: ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣವನ್ನು ಗ್ಯಾರೆಂಟಿ ಯೋಜನೆಗಳಿಗೆ ಬಳಸದೆ ಸಮುದಾಯದ ಅಭಿವೃದ್ಧಿಗೆ ಮೀಸಲಿಡಬೇಕು.

ನಿಗಮಗಳಿಗೆ ಹೆಚ್ಚಿನ ಹಣ: ಜನಸಂಖ್ಯೆಗೆ ಅನುಗುಣವಾಗಿ ಭೋವಿ ಮತ್ತು ಬಂಜಾರ ಅಭಿವೃದ್ಧಿ ನಿಗಮಗಳಿಗೆ ಹೆಚ್ಚಿನ ಅನುದಾನ ಮಂಜೂರು ಮಾಡಬೇಕು.

ಅಳಿವು-ಉಳಿವಿನ ಪ್ರಶ್ನೆ: "ಮಾ. 27ರ ಸಚಿವ ಸಂಪುಟದ ತೀರ್ಮಾನದ ಬಗ್ಗೆ ನಮಗೆ ಆತಂಕವಿದೆ. ಇದು ನಮ್ಮ ಸಮುದಾಯಗಳ ಅಳಿವು-ಉಳಿವಿನ ಪ್ರಶ್ನೆಯಾಗಿದ್ದು, 101 ಜಾತಿಗಳು ವೈಮನಸ್ಯ ಬಿಟ್ಟು ಒಂದಾಗಬೇಕು. ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಜನರನ್ನು ಎಚ್ಚರಿಸುವ ಮೂಲಕ ಶಕ್ತಿ ಪ್ರದರ್ಶನ ಮಾಡದಿದ್ದರೆ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ," ಎಂದು ಎಚ್ಚರಿಸಿದರು.

ಸಭೆಯಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಎಸ್. ಮಂಜುನಾಥ್, ವಿಶ್ವನಾಥ್, ಕಾರ್ಯದರ್ಶಿ ಪಿ.ಜಿ. ವೆಂಕಟಸ್ವಾಮಿ, ಖಜಾಂಚಿ ಗಿರಿಯಪ್ಪ, ತಾಪಂ ಮಾಜಿ ಉಪಾಧ್ಯಕ್ಷ ವೆಂಕಟಪ್ಪ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಜಯಂತಿಗಳ ಪೂರ್ವಭಾವಿ ಸಭೆ

ರಾಮನಗರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಿರುವ ದೇವರ ದಾಸಿಮಯ್ಯ ಜಯಂತಿ ಹಾಗೂ ಭಗವಾನ್ ಮಹಾವೀರ ಜಯಂತಿ ಆಚರಣೆಯ ಕುರಿತು ಬುಧವಾರ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 409ರಲ್ಲಿ ಸಭೆ ನಡೆಯಲಿದೆ.

ಜಿಲ್ಲೆಯ ವಿವಿಧ ಸಮುದಾಯಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.



ಬಾಗಲಕೋಟ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಿವಂಗತ ಎಚ್.ವೈ. ಮೇಟಿ ಅವರ ಪುತ್ರರಾದ ಮಲ್ಲಿಕಾರ್ಜುನ, ಉಮೇಶ್, ಪುತ್ರಿಯರಾದ ಬಾಯಕ್ಕ ಮತ್ತು ಮಹಾದೇವಿ ಅವರೊಂದಿಗೆ ಮಾತುಕತೆ ನಡೆಸಿದರು.

# ಶ್ರೀ ಮಾತೃ ಮಹಿಳಾ ಮಂಡಳಿಯಿಂದ ಮಹಿಳಾ ದಿನಾಚರಣೆ

ಬಳ್ಳಾರಿ

ಶ್ರೀ ಮಾತೃ ಮಹಿಳಾ ಮಂಡಳಿ ವತಿಯಿಂದ ನಗರದ ರಾಕ್ ಗಾರ್ಡನ್‌ನಲ್ಲಿ ಭಾನುವಾರ ಆಯೋಜನೆ ಮಾಡಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಾಸ್ಯ ಕಲಾವಿದ ಪ್ರಾಣೇಶ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಮೊಬೈಲ್ ಗೆ ಹೆಚ್ಚು ಒತ್ತು ನೀಡದೆ ಪುಸ್ತಕಕ್ಕೆ ಹೆಚ್ಚಿನ ಸಮಯ ಮೀಸಲಿಡಿ, ಪುಸ್ತಕ ಓದುವುದರಿಂದ ನಮ್ಮಲ್ಲಿ ಹೆಚ್ಚು ಜ್ಞಾನ ವೃದ್ಧಿಯಾಗುತ್ತದೆ ಎಂದು ಅವರು ಹೇಳಿದರು.

ನಂತರ ಮಾತೃ ಮಹಿಳಾ ಮಂಡಳಿಯ ಅಧ್ಯಕ್ಷರಾದ ಪುಷ್ಪಲತಾ ಚಂದ್ರಶೇಖರ ಅವರು ಮಾತನಾಡಿ, ಮಾತೃ ಮಹಿಳಾ ಮಂಡಳಿ ಸ್ಥಾಪನೆ ಮಾಡಿ ಈ ಸಂಸ್ಥೆಯ ಮೂಲಕ ಅನೇಕ ಕಾರ್ಯಕ್ರಮಗಳನ್ನು ಆಯೋಕನೆ ಮಾಡಿ ಮಹಿಳೆಯರಿಗೆ ಅನುಕೂಲ ಮಾಡಿಕೊಡಲಾಗಿದೆ. ನಮ್ಮ ಈ ಮಂಡಳಿ ಸದಾ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದರು.



ಈ ಸಂದರ್ಭದಲ್ಲಿ ಡಾ. ಅನುರಾಧ, ಹಾಸ್ಯ ಕಲಾವಿರಾದ ಬಸವರಾಜ್ ಮಹಾಮನಿ, ಪೋಲಾ ಪದ್ಮಾವತಿ, ಎಲ್ಲನ ಗೌಡ, ಸುನೀತಾ, ಕುಸುಮಾ, ಹೇಮಾ, ದೇವಿ, ಲಕ್ಷ್ಮೀ, ಮೇಮುದಾ ಹಾಗೂ ಮಾತೃ ಮಹಿಳಾ ಮಂಡಳಿ ಸದಸ್ಯರು ಹಾಜರಿದ್ದರು.

ಕಾರ್ಯಕ್ರಮದಲ್ಲಿ ಕೋಮಲಿಕಾ ಮತ್ತು ಕೀರ್ತಿ ನಿರುಪಣೆ ಮಾಡಿದರು. ಚಂದ್ರಿಕಾ ಚಂದ್ರಕಾಂತ ಅವರು ಸ್ವಾಗತಿಸಿದರು. ಚಾರುಲತಾ ಅವರು ವಂದನಾರ್ಪಣೆ ಮಾಡಿದರು. ಗುರು ಡ್ಯಾನ್ಸ್ ಅಕಾಡೆಮಿ ವತಿಯಿಂದ ನೃತ್ಯ ಮಾಡಲಾಯಿತು. ಪ್ರಸೀದ, ಹಿಂದು ಮತ್ತು ದ್ರಾಕ್ಷಾಯಿಣಿ ಅವರು ನೃತ್ಯ ಮಾಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ರತ್ನಮ್ಮ ಮತ್ತು ನೀಲಮ್ಮ ಇಬ್ಬರು ಸಮಾಜ ಸೇವಕರಿಗೆ ಸನ್ಮಾನ ಮಾಡಲಾಯಿತು. ಕೊನೆಯಲ್ಲಿ ನೃತ್ಯ ಮತ್ತು ಗೇಮ್ಸ್, ಫ್ಯಾಶನ್ ಷೋ, ಮಾಡಿದವರಿಗೆ ಬಹುಮಾನ ವಿತರಣೆ ಮಾಡಲಾಯಿತು.



ರಾಜ್ಯದ ಸಣ್ಣ ನೀರಾವರಿ ಸಚಿವರಾದ ಎನ್.ಎಸ್ ಭೋಸರಾಜು ಅವರು ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಗಳಾದ ಟಿ.ಬಿ ಜಯಚಂದ್ರ ಅವರು ನವದೆಹಲಿಯಲ್ಲಿ ನನ್ನನ್ನು ಭೇಟಿಯಾಗಿ, ಕರ್ನಾಟಕದಲ್ಲಿನ ಸಣ್ಣ ನೀರಾವರಿಯ ಅಭಿವೃದ್ಧಿಯ ಕುರಿತು ಚರ್ಚಿಸಿದರು.

# ಮಹಿಳೆ ಸಾಧನೆಗೆ ನಿಂತರೆ ಕೊನೆಯೇ ಇಲ್ಲ: ನ್ಯಾ. ಪಂಚಾಕ್ಷರಿ

ರಾಮನಗರ

ಇಂದಿನ ಆಧುನಿಕ ಯುಗದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆ ಮುಂಚೂಣಿಯಲ್ಲಿದ್ದಾರೆ. ಮಹಿಳೆ ಸಾಧನೆ ಮಾಡಲು ನಿಂತರೆ ಅದಕ್ಕೆ ಕೊನೆ ಎಂಬುದೇ ಇರುವುದಿಲ್ಲ, ಮಹಿಳೆಯರ ಸಾಧನೆಯನ್ನು ಜಗತ್ತಿಗೆ ತೋರಿಸಲು ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನ್ಯಾ. ಪಂಚಾಕ್ಷರಿ ಎಂ ಅವರು ಅಭಿಪ್ರಾಯಪಟ್ಟರು.

ಅವರು ಮಾ.16ರ ಸೋಮವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಹಾಗೂ ಜಿಲ್ಲಾ ವಕೀಲರ ಸಂಘದ ವತಿಯಿಂದ ಬೇಟಿ ಬಚಾವೋ - ಬೇಟಿ ಪಡಾವೋ ಅಭಿಯಾನದಡಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಲ್ಲ. ವರ್ಷದ 365 ದಿನಗಳು ಮಹಿಳೆಯರ ದಿನವೇ ಆಗಿದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಸಮಾಜಕ್ಕೆ ಅವರ ಕೊಡುಗೆ ಅಪಾರವಿರುತ್ತದೆ, ಆದ್ದರಿಂದ ಯಾವುದೇ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಪುರುಷನಿಗೆ ಸರಿಸಮಾನವಾದ ಹಕ್ಕುಗಳನ್ನು ಭಾರತದ ಸಂವಿಧಾನ ಎಲ್ಲಾ ಹೆಣ್ಣು ಮಕ್ಕಳಿಗೂ ನೀಡಿದೆ, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಜಿ. ಧನರಾಜು ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿರುವ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಹಾಗೂ ಕಲಾವಿದರಾದ ಚಿತ್ರರಾವ್ ಅವರನ್ನು ಸನ್ಮಾನಿಸಲಾಯಿತು ಹಾಗೂ ಅಂಗನವಾಡಿ ಮೇಲ್ವಿಚಾರಕಿಯರಿಗೆ ಪ್ರಶಸ್ತಿ ನೀಡಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ದಿನೇಶ ಜೆ.ಆರ್., ಜಿಲ್ಲಾ ನಿರೂಪಣಾಧಿಕಾರಿ ಡಾ. ಲಕ್ಷ್ಮೀದೇವಿ ವೇದಿಕೆಯಲ್ಲಿದ್ದರು.

19/03/2026
ಭಾರತ ಸಾರಥಿ
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಅಪ್ಪು ಜನ್ಮದಿನದ ಅಂಗವಾಗಿ ಉಚಿತ ಆರೋಗ್ಯ ಶಿಬಿರ



ತುಮಕೂರು

ಕನ್ನಡ ಚಿತ್ರರಂಗದ ಮೇರು ನಟರಾಗಿದ್ದ ಪುನೀತ್ ರಾಜ್‌ಕುಮಾರ್ ರವರ ಸಾಮಾಜಿಕ ಸೇವೆ, ಆದರ್ಶ ಇಂದಿನ ಯುವ ಜನರಿಗೆ ಪ್ರೇರಣೆಯಾಗಬೇಕು ಎಂದು ಶಾಸಕ ಜಿ.ಬಿ. ಜ್ಯೋತಿಗಣೇಶ್ ಹೇಳಿದರು.

ನಗರದ ಎಸ್.ಎಸ್.ಪುರಂನಲ್ಲಿ ಮಯೂರ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಕರ್ನಾಟಕ ರತ್ನ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ರವರ 51ನೇ ಹುಟ್ಟುಹಬ್ಬ ಆಚರಣೆ ಹಾಗೂ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಟ ಪುನೀತ್ ರಾಜ್‌ಕುಮಾರ್ ರವರು ಬದುಕ್ಕಿದ್ದಾಗ ಮಾಡಿರುವ ಸಾಮಾಜಿಕ ಸೇವೆಗಳು ಅವರು ಅಕಾಲಿಕವಾಗಿ ನಿಧನರಾದ ಬಳಿಕ ಇಡೀ ಜಗತ್ತಿಗೆ ಗೊತ್ತಾಯಿತು. ಪುನೀತ್‌ರವರು ತಮ್ಮ ತಂದೆ ಡಾ.ರಾಜ್‌ಕುಮಾರ್ ರವರಂತೆಯೇ ಕನ್ನಡಿಗರ ಮನದಲ್ಲಿ ಚಿರಸ್ಥಾಯಿಯಾಗಿ ನೆಲೆಸಿದ್ದಾರೆ. ಡಾ. ರಾಜ್‌ಕುಮಾರ್ ರವರ ಹೆಸರಿನಂತೆಯೇ ಪುನೀತ್‌ರಾಜ್‌ಕುಮಾರ್ ರವರ ಹೆಸರು ಸಹ ಸದಾ ಪ್ರಚಲಿತವಾಗಿರುತ್ತದೆ ಎಂದರು.

ಮಯೂರ ವೇದಿಕೆ ವತಿಯಿಂದ ಪ್ರತಿ ವರ್ಷವೂ ಹಲವಾರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ. ವೇದಿಕೆಯ ಸಾಮಾಜಿಕ ಕಳಕಳಿ ಅನುಕರಣೀಯ. ಪುನೀತ್ ಜನ್ಮದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದು ಅವರು ಶ್ಲಾಘಿಸಿದರು.

ಮಯೂರ ವೇದಿಕೆಯ ಅಧ್ಯಕ್ಷ ಪಿ. ಸದಾಶಿವಯ್ಯ ಮಾತನಾಡಿ, ಕರ್ನಾಟಕದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಕರ್ನಾಟಕ ರತ್ನ, ಪವರ್ ಸ್ಟಾರ್ ಪುನೀತ್‌ರಾಜ್‌ಕುಮಾರ್ ರವರು ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಪುನೀತ್ ರವರು ಎಲೆಮರೆಕಾಯಿಯಂತೆ ಮಾಡಿರುವ ಸಾಮಾಜಿಕ ಸೇವೆ, ಆರ್ಥಿಕ ಸಹಾಯ ಅವರ ನಿಧನದ ನಂತರ ಬೆಳಕಿಗೆ ಬಂದಿತು. ಪುನೀತ್ ರವರ ಹಾದಿಯಲ್ಲಿ ನಾವೆಲ್ಲರೂ ಶಕ್ತಿ ಮೀರಿ ಸಮಾಜ ಸೇವೆಯಲ್ಲಿ ತೊಡಗೋಣ ಎಂದರು.

ನಟ ಪುನೀತ್‌ರಾಜ್‌ಕುಮಾರ್ ರವರ ಹುಟ್ಟುಹಬ್ಬದ ಪ್ರಯುಕ್ತ ವೇದಿಕೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ಈ ಶಿಬಿರದ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಮಯೂರು ವೇದಿಕೆಯ ಪ್ರಧಾನ ಕಾರ್ಯದರ್ಶಿ ಎನ್.ಆರ್. ಸ್ವಾಮಿ ಮಾತನಾಡಿ, ಮಾದರಿ ವ್ಯಕ್ತಿತ್ವದ ಮೂಲಕ ಹೆಸರಾದ ಪುನೀತ್‌ರಾಜ್‌ಕುಮಾರ್ ಅವರು ಡಾ.ರಾಜ್‌ಕುಮಾರ್ ಕುಟುಂಬದ ಪುತ್ರ ಹಾಗೂ ಈ ನಾಡಿನ ಹೆಮ್ಮೆಯ ಪುತ್ರರಾಗಿದ್ದಾರೆ. ಅವರು ಮಾಡಿದ ಸಮಾಜ ಸೇವಾ ಕಾರ್ಯ ಹಾಗೂ ಆದರ್ಶದ ನಡವಳಿಕೆಯಿಂದಾಗಿ ಪುನೀತ್ ಅವರು ಕೋಟ್ಯಂತರ ಅಭಿಮಾನಿಗಳ ಪ್ರೀತಿ ಗಳಿಸಿದ್ದಾರೆ ಎಂದರು. ಪುನೀತ್‌ರಾಜ್‌ಕುಮಾರ್ ಅವರು ನಟರಾಗಿ ಪ್ರಸಿದ್ಧರಾಗುವ ಜತೆಗೆ ಬಡವರು, ಅನಾಥರು, ಅಂಧರಿಗೆ ನೆರವಾಗುವಂತಹ ಸಮಾಜ ಸೇವಾ ಕಾರ್ಯ ಮಾಡಿ ಆದರ್ಶದ ವ್ಯಕ್ತಿಯಾಗಿ ನಾಡಿನಲ್ಲಿ ಹೆಸರಾಗಿದ್ದಾರೆ. ಯುವಕರು ಸೇರಿದಂತೆ ನಾವೆಲ್ಲರೂ ಪುನೀತ್‌ರಾಜ್‌ಕುಮಾರ್ ರವರ ಹಾದಿಯಲ್ಲಿ ನಡೆಯೋಣ ಎಂದು ಹೇಳಿದರು. ಮಯೂರ ವೇದಿಕೆ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಪುನೀತ್ ರಾಜ್‌ಕುಮಾರ್ ರವರ 51ನೇ ಜನ್ಮದಿನದ ಪ್ರಯುಕ್ತ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಎಸ್.ಎಸ್.ಪುರಂ ಸೇರಿದಂತೆ ವಿವಿಧ ಬಡಾವಣೆಯ ಜನರು ಭಾಗಿಯಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಈ ಸಂದರ್ಭದಲ್ಲಿ ಮಯೂರ ವೇದಿಕೆಯ ಅಧ್ಯಕ್ಷ ಪಿ. ಸದಾಶಿವಯ್ಯ, ಪ್ರಧಾನ ಕಾರ್ಯದರ್ಶಿ ಎನ್.ಆರ್. ಸ್ವಾಮಿ, ಮುಖಂಡರಾದ ', ಟಿ.ಬಿ. ಜಗದೀಶ್, ಚಂದ್ರಶೇಖರ್, ವಿನಯ್ ಜೈನ್, ನಾರಾಯಣಗೌಡ, ರಾಜಕುಮಾರ್ ಗುಪ್ತ, ಪತ್ರಕರ್ತ ಉಗಮ ಶ್ರೀನಿವಾಸ್, ರವಿಚಂದ್ರ, ಸ್ವಾಮಿ ಸಿದ್ದು, ಮಂಜೇಶ್ ಮಂಜುಳ ಮತ್ತಿತರರು ಉಪಸ್ಥಿತರಿದ್ದರು.

# ಎಂಎಫ್‌ಮಿಡ್-ಕ್ಯಾಪ್ ಫಂಡ್ ಬಿಡುಗಡೆ

TRUST MUTUAL FUND
CLEAR • CREDIBLE • CONSISTENT

ಬೆಂಗಳೂರು

ಟ್ರಸ್ಟ್ ಮ್ಯೂಚುಯಲ್ ಫಂಡ್ ತನ್ನ ಮಿಡ್-ಕ್ಯಾಪ್ ಕಂಪನಿಗಳಲ್ಲಿ ಹೂಡಿಕೆ ಮಾಡುವ ಟ್ರಸ್ಟ್ ಮಿಡ್ ಕ್ಯಾಪ್ ಫಂಡ್ ಬಿಡುಗಡೆ ಮಾಡಿದೆ. ಈ ಫಂಡ್ ಸಬಿಯಿಂದ ಪೂರ್ಣ ಮಾರುಕಟ್ಟೆ ಬಂಡವಾಳ 101ರಿಂದ 250ನೇ ಸ್ಥಾನ ಪಡೆದ ಈಕ್ವಿಟಿ ಮತ್ತು ಈಕ್ವಿಟಿ ಸಂಬಂಧಿತ ಸಾಧನಗಳಲ್ಲಿ ಹೂಡಿಕೆ ಮಾಡುವ ಓಪನ್-ಎಂಡೆಡ್ ಈಕ್ವಿಟಿ ಸ್ಕೀಂ ಆಗಿದೆ. ಈ ಸ್ಕೀಂ ನಿಫ್ಟಿ ಮಿಡ್ ಕ್ಯಾಪ್ 150 ಟಿ.ಆರ್.ಐ. ಮಾನದಂಡ ಪಡೆಯಲಿದೆ. ಈ ನ್ಯೂ ಫಂಡ್ ಆಫರ್ ಫೆಬ್ರವರಿ 27, 2026ರಂದು ಪ್ರಾರಂಭಗೊಳ್ಳುತ್ತದೆ ಮತ್ತು ಮಾರ್ಚ್ 13, 2026ರಂದು ಮುಕ್ತಾಯಗೊಳ್ಳಲಿದೆ.

ಮಿಡ್-ಕ್ಯಾಪ್ ಕಂಪನಿಗಳು ಪ್ರಾರಂಭಿಕ ಅನಿಶ್ಚಿತತೆಗಳನ್ನು ಮೀರಿರುತ್ತವೆ ಮತ್ತು ವಿಸ್ತರಿಸಲು ಸೂಕ್ತವಾಗಿರುತ್ತವೆ. ಭಾರತದಲ್ಲಿ ಮಿಡ್-ಕ್ಯಾಪ್ ಗಳು 34.8ಕೆಯಿಂದ 104.5ಕೆ ಕೋಟಿಯವರೆಗೆ ಮಾರುಕಟ್ಟೆ ಬಂಡವಾಳ ಹೊಂದಿವೆ (ಮೂಲ- ಎಎಂಎಕೊಡಿಗೆಹಳ್ಳಿ, ಡಿಸೆಂಬರ್ 2025ರಂತೆ ದತ್ತಾಂಶ) ಮಿಡ್ ಕ್ಯಾಪ್ ವಿಶ್ವದಲ್ಲಿ ಉತ್ಪಾದನೆ, ಹಣಕಾಸು ಸೇವೆಗಳು, ಮೂಲಸೌಕರ್ಯ, ರೀಟೇಲ್ ಮತ್ತು ಗ್ರಾಹಕ ವಿಭಾಗಗಳಲ್ಲಿದ್ದು ಲಾರ್ಜ್-ಕ್ಯಾಪ್ ಸ್ಥಾನ ಪಡೆಯುವ ಮುನ್ನ ಹೂಡಿಕೆದಾರರನ್ನು ಸೆಳೆಯುತ್ತವೆ.

ಭಾರತದ ಮಿಡ್-ಕ್ಯಾಪ್ ವಲಯವು ದೀರ್ಘಾವಧಿ ಸಂಪತ್ತು ಸೃಷ್ಟಿಯ ಅತ್ಯಂತ ಶಕ್ತಿಯುತ ಚಾಲಕಶಕ್ತಿಗಳಲ್ಲಿ ಒಂದಾಗಿದೆ. ಕಳೆದ 5 ವರ್ಷಗಳಲ್ಲಿ 37 ಮಿಡ್-ಕ್ಯಾಪ್ ಗಳು 3 ಪಟ್ಟಿಗಿಂತ ಹೆಚ್ಚು ಗಳಿಕೆ ತಂದುಕೊಟ್ಟಿವೆ. ಮಿಡ್-ಕ್ಯಾಪ್ ವಿಶ್ವಕ್ಕೆ ಭಾರತದ ಪ್ರಗತಿಯ ಮುನ್ನೋಟವೂ ಬೆಂಬಲಿಸುತ್ತಿದೆ. ಹಣದುಬ್ಬರದನಿಯಂತ್ರಣ, ಚಾಲ್ತಿ ಖಾತೆಯ ಕೊರತೆಯ ನಿಯಂತ್ರಣ, ಸುಸ್ಥಿರ ಬಂಡವಾಳ ವೆಚ್ಚ ಮತ್ತು ಅನುಕೂಲಕರ ಜನಸಮೂಹದಿಂದ ಲಾಭ ಗಳಿಸುವ ಅವಕಾಶಗಳು ಹೆಚ್ಚಾಗಿವೆ.

# ವಿಜಯಪುರ ಪುರಸಭೆ ಮೇಲ್ದರ್ಜೆಗೇರಿಸಲು ನಿರ್ಲಕ್ಷ್ಯ: ಸಚಿವ ಕೆ.ಎಚ್. ಮುನಿಯಪ್ಪ ವಿರುದ್ಧ ಅಸಮಾಧಾನ

ವಿಜಯಪುರ

"ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರ ಹಾಗೂ ಶತಮಾನದ ಇತಿಹಾಸವಿರುವ ವಿಜಯಪುರ ಪುರಸಭೆಯನ್ನು ಮೇಲ್ದರ್ಜೆಗೇರಿಸಲು ನಿರ್ಲಕ್ಷ್ಯ ಮಾಡುತ್ತಿರುವುದು ಖಂಡನೀಯ," ಎಂದು ವಿವಿಧ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ದೇವನಹಳ್ಳಿ ಪುರಸಭೆಯನ್ನು ಮಾತ್ರ ನಗರಸಭೆಯಾಗಿ ಮೇಲ್ದರ್ಜೆಗೇರಿಸಲು ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಚಿವ ಕೆ.ಎಚ್. ಮುನಿಯಪ್ಪ ಸೂಚನೆ ನೀಡಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ಕರ್ನಾಟಕ ರಾಜ್ಯ ಡಾ. ಬಿ.ಆರ್. ಅಂಬೇಡ್ಕರ್ ರಕ್ಷಣಾ ಸಮಿತಿಯ ರಾಜ್ಯಾದ್ಯಕ್ಷ ಸಿ. ಶ್ರೀನಿವಾಸ್ ಮಾತನಾಡಿ, "ಚುನಾವಣಾ ಸಮಯದಲ್ಲಿ ದೇವನಹಳ್ಳಿ ಮತ್ತು ವಿಜಯಪುರ ಎರಡನ್ನೂ ಮೇಲ್ದರ್ಜೆಗೇರಿಸುವುದಾಗಿ ಸಚಿವರು ಮಾತು ಕೊಟ್ಟಿದ್ದರು. ಆದರೆ ಈಗ ಕೇವಲ ದೇವನಹಳ್ಳಿಗೆ ಮಾತ್ರ ಆದ್ಯತೆ ನೀಡುತ್ತಿರುವುದು ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಹಚ್ಚಿದಂತಾಗುತ್ತಿದೆ. ವಿಜಯಪುರ ಪುರಸಭೆಯ 23 ವಾರ್ಡ್‌ಗಳ ವ್ಯಾಪ್ತಿಯಲ್ಲಿ 50 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಿದ್ದು, ಮಂಡಿಬೆಲೆ, ಕೋರಮಂಗಲ, ಗೊಡ್ಲುಮುದ್ದೇನಹಳ್ಳಿ ಪಂಚಾಯಿತಿಗಳನ್ನು ಸೇರಿಸಿ ನಗರಸಭೆ ಮಾಡಬೇಕು," ಎಂದು ಒತ್ತಾಯಿಸಿದರು. ಬಿಜೆಪಿ ಟೌನ್

> "ವಿಜಯಪುರ ಪುರಸಭೆಯನ್ನು ಮೇಲ್ದರ್ಜೆಗೇರಿಸುವಂತೆ ಮತ್ತು ಹೆಚ್ಚಿನ ಅನುದಾನ ನೀಡುವಂತೆ ಪಟ್ಟಣದ ಹಿರಿಯ ನಾಯಕರೊಂದಿಗೆ ನಿಯೋಗ ತೆರಳಿ ಸಚಿವರಲ್ಲಿ ಶೀಘ್ರವೇ ಮನವಿ ಸಲ್ಲಿಸುತ್ತೇವೆ."
> 
> - ಎಸ್. ಭವ್ಯಾ ಮಹೇಶ್, ಅಧ್ಯಕ್ಷರು, ವಿಜಯಪುರ ಪುರಸಭೆ.

ಅಧ್ಯಕ್ಷ ವೆಂಕಟೇಶ್ ಪ್ರಭು ಮಾತನಾಡಿ, "ವಿಜಯಪುರ ಪುರಸಭೆಯು ಹಿಂದೆ ದೇವನಹಳ್ಳಿಗೇ ಸಾಲ ನೀಡುವಷ್ಟು ಆರ್ಥಿಕವಾಗಿ ಸದೃಢವಾಗಿತ್ತು. ಈಗ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದಾಗಿ ದೇವನಹಳ್ಳಿ ಬೆಳೆದಿರಬಹುದು, ಆದರೆ ವಿಜಯಪುರದ ಇತಿಹಾಸ ದೊಡ್ಡದಿದೆ.

ಇದನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸುವ ಮೂಲಕ ಸಚಿವರು ಈ ಭಾಗದ ಋಣ ತೀರಿಸಿಕೊಳ್ಳಲಿ," ಎಂದರು.

# 'ಬೇವು- ಬೆಲ್ಲದ ಸಾರದೊಂದಿಗೆ ಹಬ್ಬ ಆಚರಿಸಿ'



ಮುಳಬಾಗಿಲು

"ತಾಲೂಕಿನ ಜನತೆ ಸರ್ವ ಧರ್ಮಗಳ ಸಮನ್ವಯತೆಯಿಂದ ಯುಗಾದಿ ಮತ್ತು ರಂಜಾನ್ ಹಬ್ಬಗಳನ್ನು ಆಚರಿಸಬೇಕು. ಸೋದರತ್ವದ ಭಾವನೆಯಿಂದ ಬದುಕು ಸಾಗಿಸಿದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ಸಾಧ್ಯ," ಎಂದು ಸಮಾಜ ಸೇವಕ ಹಾಗೂ ಕಾಂಗ್ರೆಸ್ ಮುಖಂಡ ಎಸ್.ವೈ. ಸಾಂಬಯ್ಯ ತಿಳಿಸಿದರು.

ನಗರದ ಡಿವಿಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಡಿ.ವಿ. ಗುಂಡಪ್ಪನವರ 139ನೇ ಜನ್ಮದಿನಾಚರಣೆಯ 'ಗುಲಾಬಿ ನಮನ' ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

<u>ಯುಗಾದಿ-ರಂಜಾನ್ ಸೌಹಾರ್ದತೆ:</u> "ರಂಜಾನ್ ನಿಮಿತ್ತ ಒಂದು ತಿಂಗಳ ಕಾಲ ಕಠಿಣ ಉಪವಾಸ ಕೈಗೊಳ್ಳುವ ಮುಸ್ಲಿಂ ಬಾಂಧವರಿಗೆ ಅಲ್ಲಾಹನ ಆಶೀರ್ವಾದ ಲಭಿಸಲಿ," ಎಂದು ಹಾರೈಸಿದ ಅವರು, "ಹಿಂದೂಗಳ ಮೊದಲ ಹಬ್ಬವಾದ ಯುಗಾದಿಯು ಜೀವನದ ಕಹಿ-ಸಿಹಿ ಎರಡನ್ನೂ ಸಮನಾಗಿ ಸ್ವೀಕರಿಸುವ ಪಾಠ ಕಲಿಸುತ್ತದೆ. ಬೇವು-ಬೆಲ್ಲದ ಸಾರವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು," ಎಂದರು.

<u>ನೀರಿನ ಅಭಾವ ನೀಗಲು ಪ್ರಾರ್ಥನೆ:</u> ತಾಲೂಕಿನಲ್ಲಿ ಬೇಸಿಗೆಯ ತಾಪ ಹೆಚ್ಚಾಗುತ್ತಿದ್ದು, ಯಾವುದೇ ನೀರಿನ ಅಭಾವ ಉಂಟಾಗದಂತೆ ಉತ್ತಮ ಮಳೆ-ಬೆಳೆಯಾಗಲಿ. ರೈತರು ಮತ್ತು ಸಾರ್ವಜನಿಕರು ಸುಖ-ಶಾಂತಿಯಿಂದ ಬದುಕುವಂತಾಗಲಿ ಎಂದು ಅವರು ಆಶಯ ವ್ಯಕ್ತಪಡಿಸಿದರು.

<u>ಕಾಲವೇ ಉತ್ತರ ನೀಡಲಿದೆ:</u> ತಮ್ಮ ರಾಜಕೀಯ ಭವಿಷ್ಯದ ಕುರಿತ ಪ್ರಶ್ನೆಗೆ ಉತ್ತರಿಸಿದ ಸಾಂಬಯ್ಯ, "ಸದ್ಯಕ್ಕೆ ನಾನು ಸಾಮಾಜಿಕ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ನನ್ನ ರಾಜಕೀಯ ಹಾದಿಗೆ ಕಾಲವೇ ಸೂಕ್ತ ಉತ್ತರ ನೀಡಲಿದೆ," ಎಂದು ಮಾರ್ಮಿಕವಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಯುವ ಮುಖಂಡರಾದ ಸರ್ಜಾಪುರ ಶ್ರೀನಿವಾಸ್, ಕೀಲಗಾಣಿ ಮಂಜುನಾಥ ಸ್ವಾಮಿ, ಮೇಲೇರಿ ಯಲ್ಲಪ್ಪ, ನೇತಾಜಿನಗರ ಟೋಲ್ ಬಾಬು, ವಿರುಪಾಕ್ಷಿ ಶಶಿಕುಮಾರ್, ಅಪ್ಪಿಕೊಂಡೆನಹಳ್ಳಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

# 'ಬೂತ್ ಮಟ್ಟದಲ್ಲಿ ಬಿಜೆಪಿ ಸುಭದ್ರಗೊಳಿಸಲು ಪಣ'



ದೇವನಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಮತ್ತು ತಾಲೂಕು ಬಿಜೆಪಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ಪಕ್ಷದ ಕಚೇರಿಯಲ್ಲಿ ಯಶಸ್ವಿಯಾಗಿ ನಡೆಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನಾಗವೇಣಿ ಶ್ರೀನಿವಾಸ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಮಾಜಿ ಶಾಸಕ ಜಿ. ಚಂದ್ರಣ್ಣ, ಜಿಲ್ಲಾ ಅಧ್ಯಕ್ಷ ರಾಮಕೃಷ್ಣಪ್ಪ ಮತ್ತು ತಾಲೂಕು ಮೋರ್ಚಾ ಅಧ್ಯಕ್ಷ ನೀಲೇರಿ ಅಂಬರೀಶ್ ಅವರ ಸಮ್ಮುಖದಲ್ಲಿ ಪದಾಧಿಕಾರಿಗಳ ಘೋಷಣೆ ಮಾಡಲಾಯಿತು.

ಆಯ್ಕೆಯ ನಂತರ ದೇವನಹಳ್ಳಿ ಸರ್ಕ್ಯೂಟ್ ಹೌಸ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ನಾಗವೇಣಿ ಶ್ರೀನಿವಾಸ್, "ಪಕ್ಷದ ಸಿದ್ಧಾಂತ ಹಾಗೂ ಸಂಘಟನಾ ಕಾರ್ಯಗಳಲ್ಲಿ ನಾನು ತೊಡಗಿಸಿಕೊಂಡಿರುವುದನ್ನು ಗುರುತಿಸಿ, ನನ್ನ ಮೇಲೆ ನಂಬಿಕೆ ಇಟ್ಟು ಈ ಜವಾಬ್ದಾರಿಯನ್ನು ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ ಅವರು ನೀಡಿದ್ದಾರೆ. ಹಿರಿಯರ ನಿರೀಕ್ಷೆಯಂತೆ ಜಿಲ್ಲೆಯಾದ್ಯಂತ ಪಕ್ಷವನ್ನು ಬಲಿಷ್ಠಗೊಳಿಸಲು ಶ್ರಮಿಸುತ್ತೇನೆ," ಎಂದು ತಿಳಿಸಿದರು.

ಮುಂದಿನ ಕಾರ್ಯಯೋಜನೆಗಳ ಬಗ್ಗೆ ಮಾಹಿತಿ ನೀಡಿದ ಅವರು, "ಜಿಲ್ಲೆಯ ನಾಲ್ಕು ತಾಲೂಕುಗಳಲ್ಲೂ ಗ್ರಾಮ ಮಟ್ಟದಿಂದ ಪಕ್ಷ ಸಂಘಟನೆಗೆ ಒತ್ತು ನೀಡಲಾಗುವುದು. ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ಮನೆಮನೆಗೆ ತಲುಪಿಸುವ ಮೂಲಕ ಪ್ರತಿ ಬೂತ್ ಮಟ್ಟದಲ್ಲಿಯೂ ಬಿಜೆಪಿಯನ್ನು ಸುಭದ್ರಗೊಳಿಸಲಾಗುವುದು. ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ವರಿಷ್ಠರ ಮಾರ್ಗದರ್ಶನ ಪಡೆದು ಅಭ್ಯರ್ಥಿಗಳ ಗೆಲುವಿಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡಲಾಗುವುದು," ಎಂದು ಹೇಳಿದರು.

ಈ ವೇಳೆ ತಾಲೂಕು ಅಧ್ಯಕ್ಷೆ ವಿದ್ಯಾ ರಾಘವೇಂದ್ರ, ಕಾರ್ಯದರ್ಶಿ ಭಾಗ್ಯಮ್ಮ, ರಾಜ್ಯ ಪರಿಷತ್ತು ಮಾಜಿ ಸದಸ್ಯ ದೇಸೂ ನಾಗರಾಜ್, ತಾಲೂಕು ಉಪಾಧ್ಯಕ್ಷ ತಮ್ಮಯ್ಯ, ಮುಖಂಡರಾದ ಪ್ರಭಾಕರ್ ಬೂದಿಗೆರೆ, ಮುಳ್ಳಹಳ್ಳಿ ರಾಜಪ್ಪ, ಜಗದೀಶ್, ನಾಗರಾಜ್ ಹ್ಯಾದಾಳ ಮುಖಂಡರು ಮತ್ತು ಕಾರ್ಯಕರ್ತರು ಹಾಜರಿದ್ದರು.

# ಯರಗೋಳ್ ಡ್ಯಾಂ ಖಾಲಿ: ಜನತೆಗೆ ಆತಂಕ ಶುರು

● ಎಸ್.ಮಹೇಶ್

ಬೂದಿಕೋಟೆ

ಕೋಲಾರ, ಬಂಗಾರಪೇಟೆ ಹಾಗೂ ಮಾಲೂರು ನಗರಗಳ ಜೀವ ನಾಡಿಯಾಗಿರುವ ಯರಗೋಳ್ ಜಲಾಶಯದಲ್ಲಿ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ತೀವ್ರ ಬೇಸಿಗೆ ಆರಂಭವಾಗಿರುವ ಬೆನ್ನಲ್ಲೇ ಜಲಾಶಯ ಬರಿದಾಗುತ್ತಿರುವುದು ಸಾರ್ವಜನಿಕರಲ್ಲಿ ಕುಡಿಯುವ ನೀರಿನ ಅಭಾವದ ಆತಂಕ ಮೂಡಿಸಿದೆ.



ಸುಮಾರು 315 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಜಲಾಶಯವು 1 ಟಿಎಂಸಿ ನೀರು ಶೇಖರಣಾ ಸಾಮರ್ಥ್ಯ ಹೊಂದಿದೆ. ಕಳೆದ ವರ್ಷ ಸುರಿದ ಮಳೆಗೆ ಜಲಾಶಯ ಭರ್ತಿಯಾಗಿತ್ತು. ಆದರೆ, ಈ ಬಾರಿ ಮಳೆ ಕೊರತೆ ಮತ್ತು ಸತತ ಪೂರೈಕೆಯಿಂದಾಗಿ ಈಗಾಗಲೇ ಶೇ. 60 ರಷ್ಟು ನೀರು ಖಾಲಿಯಾಗಿದೆ.

ಜಲಾಶಯ ನಿರ್ಮಾಣವಾಗಿ ಎರಡು ವರ್ಷ ಕಳೆದರೂ, ಮಾರ್ಗ ಮಧ್ಯದ 45 ಗ್ರಾಮಗಳಿಗೆ ಪೈಪ್‌ಲೈನ್ ಮೂಲಕ ನೀರು ಪೂರೈಸುವ ಯೋಜನೆ ಇನ್ನೂ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಪ್ರಸ್ತುತ ಕೇವಲ ಮೂರು ನಗರ ಪ್ರದೇಶಗಳ ಆಯ್ದ ಓವರ್ ಹೆಡ್ ಟ್ಯಾಂಕ್‌ಗಳಿಗೆ ಮಾತ್ರ ನೀರನ್ನು ಪಂಪ್ ಮಾಡಲಾಗುತ್ತಿದೆ. ಒಂದು ವೇಳೆ ಬೇಸಿಗೆ ಮುಗಿಯುವ ಮುನ್ನ ಮಳೆಯಾಗದಿದ್ದರೆ, ನಗರವಾಸಿಗಳಿಗೂ ನೀರಿನ ಪೂರೈಕೆ ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

<u>ಮಾರ್ಕಂಡೇಯ ಡ್ಯಾಂ ಮೇಲೆ ಅವಲಂಬಿತ:</u> ಯರಗೋಳ್ ಡ್ಯಾಂ ಅನ್ನು ಮಾರ್ಕಂಡೇಯ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಮೇಲ್ಭಾಗದ ಮಾರ್ಕಂಡೇಯ ಡ್ಯಾಂ ತುಂಬಿ ಕೋಡಿ ಹರಿದರೆ ಮಾತ್ರ ಯರಗೋಳ್ ಜಲಾಶಯಕ್ಕೆ ನೀರು ಹರಿದು ಬರುತ್ತದೆ. ಪ್ರಸ್ತುತ ಹರಿವು ಇಲ್ಲದಿರುವುದರಿಂದ ಸಂಗ್ರಹವಿದ್ದ ನೀರು ವೇಗವಾಗಿ ಖಾಲಿಯಾಗುತ್ತಿದೆ.

<u>ಅಧಿಕಾರಿಗಳ ಗಮನಕ್ಕೆ ಸ್ಥಳೀಯರ ಒತ್ತಾಯ:</u> ಸ್ಥಿತಿಯ ಗಂಭೀರತೆಯನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ನೀರಿನ ಬಳಕೆಯನ್ನು ನಿಯಂತ್ರಿಸುವುದು ಮತ್ತು ಪರ್ಯಾಯ ನೀರಿನ ವ್ಯವಸ್ಥೆಗಳನ್ನು ಮಾಡಿಕೊಳ್ಳುವ ಮೂಲಕ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

> "ಮಾರ್ಕಂಡೇಯ ಹಾಗೂ ಯರಗೋಳ್ ಜಲಾಶಯಗಳು ಈ ಭಾಗದ ಪ್ರಮುಖ ಜಲಮೂಲಗಳು. ಮಳೆ ಕೊರತೆಯಿಂದ ನೀರು ಖಾಲಿಯಾಗುತ್ತಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಲಕ್ಷಣಗಳಿದ್ದು, ಸಂಬಂಧಪಟ್ಟ ಇಲಾಖಾಧಿಕಾರಿಗಳು ಎಚ್ಚರವಹಿಸಬೇಕು."
> 
> - ಎ.ಬಾಬು, ಸಮಾಜ ಸೇವಕ.

# ಎಸ್.ಎಸ್.ಎಲ್.ಸಿ ಪರೀಕ್ಷೆ


ದೇವನಹಳ್ಳಿ

2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಇದೇ 18 ಬುಧವಾರದಿಂದ ಏಪ್ರಿಲ್ 2 ಗುರುವಾರದ ವರೆಗೆ ಬೆಳಿಗ್ಗೆ 10:15 ಗಂಟೆಯಿಂದ ಮಧ್ಯಾಹ್ನ 01:45 ಗಂಟೆಯ ವರೆಗೆ ನಡೆಯಲಿದ್ದು ಜಿಲ್ಲೆಯಲ್ಲಿ 14,314 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ.

ಎಸ್.ಎಸ್.ಎಲ್.ಸಿ ಪರೀಕ್ಷೆ-01 ಕ್ಕೆ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳು ದೇವನಹಳ್ಳಿ ತಾಲ್ಲೂಕಿನಲ್ಲಿ 13, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 14, ಹೊಸಕೋಟೆ ತಾಲ್ಲೂಕಿನಲ್ಲಿ 12, ನೆಲಮಂಗಲ ತಾಲ್ಲೂಕಿನಲ್ಲಿ 13 ಸೇರಿ ಒಟ್ಟು 52 ಪರೀಕ್ಷಾ ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲಾಗುತ್ತಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ-01 ಕ್ಕೆ ನೋಂದಣಿ ವಿವರ ನೋಡುವುದಾದರೆ ಗಂಡು ಮಕ್ಕಳ ಸಂಖ್ಯೆ 7070, ಹೆಣ್ಣು ಮಕ್ಕಳ ಸಂಖ್ಯೆ 7244 ಸೇರಿ ಒಟ್ಟು 14,314 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ. ಅದರಲ್ಲಿ ಮೊದಲ(ಪ್ರಥಮ) ಬಾರಿ ಪರೀಕ್ಷೆ ಬರೆಯುವವರ ಸಂಖ್ಯೆ 13,418, ಪುನರಾವರ್ತಿತ ಅಭ್ಯರ್ಥಿಗಳು 896 ಮಂದಿ ಪರೀಕ್ಷೆಗೆ ಹಾಜರಾಗಲಿದ್ದಾರೆ.

ಪರೀಕ್ಷೆಗಳು ಪಾರದರ್ಶಕತೆ ಹಾಗೂ ಸುವ್ಯವಸ್ಥಿತವಾಗಿ ನಡೆಸುವ ನಿಟ್ಟಿನಲ್ಲಿ ಕರ್ನಾಟಕ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯಿಂದ ಮತ್ತು ಜಿಲ್ಲಾಡಳಿತದಿಂದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಜಿಲ್ಲೆಯ ನಾಲ್ಕು ತಾಲ್ಲೂಕಿನ 52 ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿ, ವೆಬ್ ಕಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಪರೀಕ್ಷಾ ಕೇಂದ್ರ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.



> "ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಸುಗಮವಾಗಿ, ಸುಲಲಿತವಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಯಾವುದೇ ಭಯ-ಭೀತಿ ಇಲ್ಲದೇ ಧೈರ್ಯದಿಂದ ಪರೀಕ್ಷೆ ಎದುರುರಿಸಬೇಕು. ಪರೀಕ್ಷೆ ಬರೆಯಸಲಿರುವ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬಿ, ಒತ್ತಡ ರಹಿತವಾಗಿ ಪರೀಕ್ಷೆಯನ್ನು ಬರೆಯಲು ಪೂರಕವಾದ ವಾತಾವರಣವನ್ನು ಪೋಷಕರು ನೀಡಬೇಕು.
> 
> - ಡಾ. ಕೆ.ಎನ್. ಅನುರಾಧ (ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ)

# ಬಸ್ಸಿಗಾಗಿ ಕಾಯುತ್ತಿದ್ದ ಮಹಿಳೆಯ ಸರ ಕಸಿದಿದ್ದ ಇಬ್ಬರ ಬಂಧನ

ಮಾಲೂರು

ಬಸ್ಸಿಗಾಗಿ ಕಾಯುತ್ತಿದ್ದ ಒಂಟಿ ಮಹಿಳೆಯ ಚಿನ್ನದ ಸರ ಕಸಿದು ಪರಾರಿಯಾಗಿದ್ದ ಇಬ್ಬರು ದರೋಡೆಕೋರರನ್ನು ಮಾಲೂರು ನಗರ ಪೊಲೀಸರು ಮಿಂಚಿನ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಬಂಧಿತರಿಂದ ರೂ. 5.40 ಲಕ್ಷ ಮೌಲ್ಯದ 32 ಗ್ರಾಂ ಚಿನ್ನದ ಸರ ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಉಪ್ಪಾರಹಳ್ಳಿ ಗ್ರಾಮದ ಆನಂದ್ (24) ಮತ್ತು ದೊಡ್ಡಕುಂತೂರು ಗ್ರಾಮದ ಸುನಿಲ್ ಕುಮಾರ್ (28) ಬಂಧಿತ ಆರೋಪಿಗಳು.

<u>ನಡೆದಿದ್ದೇನು?</u>

ಇದೇ 14ರಂದು ಮಧ್ಯಾಹ್ನ 3:30ರ ಸುಮಾರಿಗೆ ಪಡವನಹಳ್ಳಿ ಗೇಟ್ ಬಳಿ ರಾಧಮ್ಮ ಎಂಬುವರು ಬಸ್ಸಿಗಾಗಿ ಕಾಯುತ್ತಿದ್ದಾಗ, ಪಲ್ಸರ್ ಬೈಕಿನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಏಕಾಏಕಿ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಸಿದು ಪರಾರಿಯಾಗಿದ್ದರು. ಈ ಬಗ್ಗೆ ದೂರು ದಾಖಲಾಗುತ್ತಿದ್ದಂತೆ ಎಚ್ಚೆತ್ತ ಪೊಲೀಸರು ತೀವ್ರ ಶೋಧ ನಡೆಸಿದ್ದರು.

<u>ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದು ಹೇಗೆ?</u>

ಗಸ್ತಿನಲ್ಲಿದ್ದ ಪೊಲೀಸರಿಗೆ ನಂಬರ್ ಪ್ಲೇಟ್ ಇಲ್ಲದ ದ್ವಿಚಕ್ರ ವಾಹನವೊಂದು ಅನುಮಾನಾಸ್ಪದವಾಗಿ ಸಂಚರಿಸುತ್ತಿರುವ ಮಾಹಿತಿ ಲಭ್ಯವಾಗಿತ್ತು. ಕೂಡಲೇ ವಾಹನವನ್ನು ತಡೆದು ತಪಾಸಣೆ ನಡೆಸಿದಾಗ ಆರೋಪಿಗಳು ತಡಬಡಾಯಿಸಿದ್ದಾರೆ.



ಅವರನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ರಾಧಮ್ಮ ಅವರ ಸರ ಕಳವು ಮಾಡಿರುವ ಸತ್ಯಾಂಶ ಬಯಲಾಗಿದೆ.

<u>ಹಳೆಯ ಪ್ರಕರಣವೂ ಬೆಳಕಿಗೆ:</u> ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ, ಡಿಸೆಂಬರ್ 17ರಂದು ವೈಟ್ ಗಾರ್ಡನ್ ಸಮೀಪದ ಕೃಷ್ಣಪ್ಪ ಮತ್ತು ವಸಂತಮ್ಮ ಅವರ ಮನೆಗೆ ನುಗ್ಗಿ ಬೆದರಿಕೆ ಹಾಕಿ ರೂ. 60,000 ನಗದು ದೋಚಿದ್ದ ಪ್ರಕರಣವನ್ನೂ ಒಪ್ಪಿಕೊಂಡಿದ್ದಾರೆ. ಅವರಿಂದ ರೂ. 20,000 ನಗದನ್ನು ಸಹ ವಶಪಡಿಸಿಕೊಳ್ಳಲಾಗಿದ್ದು, ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ರಾಮಪ್ಪ ಗುತ್ತೇರ್ ತಿಳಿಸಿದ್ದಾರೆ.

ಈ ಯಶಸ್ವಿ ಕಾರ್ಯಾಚರಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಶಿಕ್ರಿವಾಲ್ ಮತ್ತು ಡಿವೈಎಸ್ಪಿ ಕೃಷ್ಣಪ್ಪ ಶ್ಲಾಘಿಸಿದ್ದಾರೆ. ಈ ವೇಳೆ ಆನಂದ್, ರಮೇಶ್, ಬಾಬು, ಅಶೋಕ್ ಸೇರಿದಂತೆ ತಂಡದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಪತ್ರಕರ್ತನು ಭಾಷೆಯ ಉಪಯೋಗದ ಕಲೆಯನ್ನು ಅರಿತಿರಬೇಕು: ಡಿಎನ್‌ಕೆ

ಬಾಗೇಪಲ್ಲಿ

"ಪತ್ರಕರ್ತನು ಭಾಷೆಯ ಬಳಕೆಯ ಕಲೆಯನ್ನು ಅರಿತಿರಬೇಕು. ಮೌಲ್ಯಯುತವಾದ ವರದಿಗಳಿಗೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಶಕ್ತಿಯಿದೆ. ಒಮ್ಮೊಮ್ಮೆ ಪತ್ರಿಕಾ ವರದಿಗಳು ಆಡಳಿತ ವ್ಯವಸ್ಥೆಗೆ ಛಾಟಿ ಏಟು ನೀಡುವ ಮೂಲಕ ಕೆಲಸ ಮಾಡಿಸುತ್ತವೆ," ಎಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಡಿ.ಎನ್. ಕೃಷ್ಣಾರೆಡ್ಡಿ ಪ್ರತಿಪಾದಿಸಿದರು.

ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಡಾ. ಡಿ.ವಿ. ಗುಂಡಪ್ಪನವರ (ಡಿ.ವಿ.ಜಿ.) ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

<u>ಪತ್ರಕರ್ತರ ಸಂಘದ ಹಿರಿಮೆ ಮತ್ತು ಸವಾಲುಗಳು:</u> "ಅವಿಭಜಿತ ಕೋಲಾರ ಜಿಲ್ಲೆಯ ದಿಗ್ಗಜರಾದ ಸರ್ ಎಂ. ವಿಶ್ವೇಶ್ವರಯ್ಯನವರು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರೆ, ಡಿ.ವಿ.ಜಿ.ಯವರು 1932ರಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವನ್ನು ಸ್ಥಾಪಿಸಿದರು. ಇಂದು ಈ ಸಂಘಟನೆಯು ಶತಮಾನೋತ್ಸವದ ಹೊಸ್ತಿಲಲ್ಲಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಪತ್ರಿಕಾ ರಂಗದಲ್ಲಿ ವೃತ್ತಿ ಬದ್ಧತೆ ಕ್ಷೀಣಿಸುತ್ತಿರುವುದು ಆತಂಕಕಾರಿ



ವಿಷಯ," ಎಂದು ಕೃಷ್ಣಾರೆಡ್ಡಿ ಬೇಸರ ವ್ಯಕ್ತಪಡಿಸಿದರು. ಸಂಘದಲ್ಲಿ ಸದಸ್ಯತ್ವ ಪಡೆದೂ ಕೆಲಸ ಮಾಡದವರನ್ನು ಮತ್ತು ದಂದೆಗಳಲ್ಲಿ ತೊಡಗಿರುವವರನ್ನು ಗುರುತಿಸಿ ಹೊರಗಿಡುವ ಕೆಲಸವಾಗಬೇಕು ಎಂದು ಅವರು ಕರೆ ನೀಡಿದರು.

<u>ಪತ್ರಕರ್ತ ಕವಿ ಮತ್ತು ಜ್ಞಾನಿಯಾಗಿರಲಿ:</u> ಹಿರಿಯ ಪತ್ರಕರ್ತ ಬಿ.ಆರ್. ಕೃಷ್ಣ ಮಾತನಾಡಿ, "ಸಮಾಜದ ಮೇಲೆ ಪ್ರೀತಿ ಮತ್ತು ಕಳಕಳಿ ಇಲ್ಲದವನು ನಿಜವಾದ ಪತ್ರಕರ್ತನಾಗಲು ಸಾಧ್ಯವಿಲ್ಲ. ಸಾಹಿತ್ಯದಂತೆ ಪತ್ರಿಕೋದ್ಯಮವೂ ಜನಸಮುದಾಯದ ನೋವು-ನಲಿವುಗಳಿಗೆ ಸ್ಪಂದಿಸಬೇಕು. ಪತ್ರಕರ್ತನು ಕೇವಲ ಸುದ್ದಿ ಸಂಗ್ರಹಕಾರನಲ್ಲ, ಆತ ಜ್ಞಾನಿಯಾಗಿ, ಸಾಹಿತಿಯಾಗಿ ಜನರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಶಕ್ತಿ ಹೊಂದಿರಬೇಕು," ಎಂದರು. 'ಕನ್ನಡದ ಭಗವದ್ಗೀತೆ' ಎಂದೇ ಪ್ರಖ್ಯಾತವಾಗಿರುವ ಮಂಕುತಿಮ್ಮನ ಕಗ್ಗದ ಸೃಷ್ಟಿಕರ್ತ ಡಿ.ವಿ.ಜಿ.ಯವರ ಆದರ್ಶಗಳನ್ನು ಪತ್ರಕರ್ತರು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

<u>ಅನರ್ಹರಿಗೆ ಸದಸ್ಯತ್ವ ಬೇಡ:</u> ಸಂಘದ ಸದಸ್ಯತ್ವ ನೀಡುವಾಗ ಕಟ್ಟುನಿಟ್ಟಿನ ಕ್ರಮ ಅನುಸರಿಸಬೇಕು ಮತ್ತು ಕೇವಲ ನೈಜವಾಗಿ ಕಾರ್ಯನಿರ್ವಹಿಸುವ ಪತ್ರಕರ್ತರಿಗೆ ಮಾತ್ರ ಸಂಘದಲ್ಲಿ ಸ್ಥಾನ ನೀಡಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸೈಯದ್ ಸಿದ್ದಿಕ್ ಸ್ವಾಗತಿಸಿದರು. ಪತ್ರಕರ್ತರಾದ ಮಣಿಕಂಠ, ಎ.ಜಿ. ನಾರಾಯಣಸ್ವಾಮಿ, ಬಿ.ಆರ್. ಕೃಷ್ಣ, ಅಬ್ದುಲ್ ಕರೀಂಸಾಬ್, ರಾಜೇಶ್, ಬಿ.ಎಸ್.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy

ಭಾರತ ಸಾರಥಿ
BHARATHA SARATHI
KANNADA DAILY NEWS PAPER
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ

BS NEWS
BS NEWS KANNADA